ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 11 | ಸಂಚಿಕೆ 24 | ಪುಟ 16 | ಜೂನ್ 5–11, 2017 | ರೂ. 10/- web: www.janashakthi.co.in | e-mail : js_weekly@yahoo.com



ಮಹೇಶ ಚಂದ್ರ ಶರ್ಮ

ನವಿಲು ಸೆಕ್ಸ್‌ಪರ್ಟ್ ಕಮ್ ಜಜ್

ತೀನ್ ಸಾಲ್ ನ ನೌಕರಿ ನ ದಾಲ್



BEML ಉಳಿಸಿ : ಕೋಲಾರ ಬಂದ್



ಐಟಿ ನೀರಗುಳ್ಳೆ ಒಡೆಯುತ್ತಿದೆ



ಜಾನುವಾರು ಮಾರಾಟ ನಿಷೇಧ: ರೈತರ ಮೇಲೆ ದಾಳಿ




ಸಂವಿಧಾನ ಉಳಿಸಲು

ರಾಜ್ಯಮಟ್ಟದ

ದೇಶಪ್ರೇಮಿ ಸಮಾವೇಶ

11 ಜೂನ್ 2017

ದಸರಾ ವಸ್ತು ಪ್ರದರ್ಶನದ ಆವರಣ, ಮೈಸೂರು



ಶ್ರೀಯಾನ್ 'ನೆನಪಿನಂಗಳದಿಂದ'

ಜಾನುವಾರು ಮಾರಾಟ ನಿಷೇಧ: ಸಿಪಿಐ(ಎಂ) ಖಂಡನೆ

ಆಹಾರ ಸಂಹಿತೆ ಹೇರುವ ಕೋಮುವಾದಿ ವಿಭಜನಕಾರಿ ಅಜೆಂಡಾ

ಜಾನುವಾರುಗಳನ್ನು ವಧೆಗಾಗಿ ಮಾರುವುದನ್ನು ನಿಷೇಧಿಸಿರುವ ಪರಿಸರ, ಅರಣ್ಯಗಳು ಮತ್ತು ವಾತಾವರಣ ಬದಲಾವಣೆ ಮಂತ್ರಾಲಯದ ಅಧಿಸೂಚನೆ ದೇಶದ ಮೇಲೆ ಆಹಾರ ಸಂಹಿತೆಯೊಂದನ್ನು ಹೇರುವ ಸಂಪೂರ್ಣವಾಗಿ ಕೋಮುವಾದಿ ಮತ್ತು ವಿಭಜನಕಾರೀ ಅಜೆಂಡಾಕ್ಕೆ ಕಾನೂನಿನ ವೇಷ ತೊಡಿಸುವ ಮೋದಿ ಸರಕಾರದ ಒಂದು ಹೇಯ ಪ್ರಯತ್ನ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಇದು ಪಶುಪಾಲನೆಯಲ್ಲಿ ತೊಡಗಿರುವ ಕೋಟ್ಯಂತರ ಬೇಸಾಯಗಾರರ ಜೀವನಾಧಾರವನ್ನು ಧ್ವಂಸ ಮಾಡುತ್ತದೆ, ಸಾಂಪ್ರದಾಯಿಕ ಜಾನುವಾರು ಸಂತೆಗಳನ್ನು ನಿರ್ಮೂಲಗೊಳಿಸುತ್ತದೆ ಹಾಗೂ ನಿರುಪಯುಕ್ತ ಜಾನುವಾರುಗಳನ್ನು ಸಾಕುವ ಅನ್ಯಾಯಯುತ ಹೊರೆಯನ್ನು ರೈತರ ಮೇಲೆ ಹೇರುತ್ತದೆ. ಈಗಾಗಲೇ ಹೆಚ್ಚುತ್ತಿರುವ ಕೃಷಿ ಲಾಗುವಾಡುಗಳ ವೆಚ್ಚಗಳಿಂದ ಹೆಚ್ಚೆಚ್ಚಾಗಿ ಆತ್ಮಹತ್ಯೆಗೀಳಿಯುತ್ತಿರುವ ರೈತರ ಮೇಲೆ ಮತ್ತಷ್ಟು ಹೊರೆಯನ್ನು ಹೇರುತ್ತದೆ.

ಅಲ್ಲದೆ ಇದು ಚರ್ಮ ಉದ್ದಿಮೆ ಮತ್ತು ಮಾಂಸ ರಫ್ತು ಉದ್ದಿಮೆಯ ಮೇಲೂ ದುಷ್ಪರಿಣಾಮ ಬೀರಿ ಲಕ್ಷಾಂತರ ಜನಗಳ ಜೀವನಾಧಾರಗಳನ್ನು ತಟ್ಟುತ್ತದೆ ಎಂದಿರುವ ಸಿಪಿಐ(ಎಂ) ಈ ಅಧಿಸೂಚನೆ ರಾಜ್ಯಗಳ ಅಧಿಕಾರಗಳಲ್ಲಿ ಹಸ್ತಕ್ಷೇಪ ಕೂಡ ಆಗುತ್ತದೆ ಎಂದಿದೆ. ಆದ್ದರಿಂದ ಅದನ್ನು ಹಿಂತೆಗೆದುಕೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಪ್ರಧಾನ ಮಂತ್ರಿಗಳಿಗೆ ಕೇರಳ ಮುಖ್ಯಮಂತ್ರಿಗಳ ಪತ್ರ

ಕೇರಳದಲ್ಲಿ ಜನರು ಏನು ತಿನ್ನಬೇಕು, ತಿನ್ನಬಾರದು ಎನ್ನುವುದನ್ನು ದಿಲ್ಲಿಯಿಂದ ಮತ್ತು ನಾಗಪುರದಿಂದ ವಿಧಿಸುವುದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಈ ಅಧಿಸೂಚನೆಯನ್ನು ಬಲವಾಗಿ ವಿರೋಧಿಸಿರುವ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಈ ಕುರಿತು ಪ್ರಧಾನ ಮಂತ್ರಿಗಳಿಗೆ ಒಂದು ಪತ್ರ ಬರೆದಿದ್ದಾರೆ.

ಈ ಪತ್ರದಲ್ಲಿ ಕೋಟ್ಯಂತರ ಭಾರತೀಯರ ಬದುಕುಗಳನ್ನು ಬಾಧಿಸಲಿರುವ ಭಾರತ ಸರಕಾರದ ಈ ಗರ್ಘುಟ್ ಅಧಿಸೂಚನೆಯ ವಿಷಯದಲ್ಲಿ ಮಧ್ಯಪ್ರವೇಶಿಸಿ ಹೊಸದಾಗಿ ಹೇರಿರುವ ತೊಡಕುಗಳನ್ನು ನಿವಾರಿಸಬೇಕು, ಈ ಮೂಲಕ ನಮ್ಮ ಕೋಟ್ಯಂತರ ದೇಶಬಾಂಧವರ ಬದುಕುಗಳನ್ನು ಮತ್ತು ನಮ್ಮ ಸಂವಿಧಾನದ ಮೂಲಭೂತ ನೀತಿಗಳನ್ನು ಕಾಪಾಡಬೇಕು ಎಂದು ಅವರು ಪ್ರಧಾನ ಮಂತ್ರಿಗಳನ್ನು ವಿನಂತಿಸಿಕೊಂಡಿದ್ದಾರೆ.

ರಂಝಾನ್ ಸಂದರ್ಭದಲ್ಲೇ ಇಂತಹ ತೊಡಕುಗಳನ್ನು ಹಾಕಿರುವುದು ಕೆಲವು ಸಮುದಾಯಗಳಿಗೆ ತಮ್ಮ ಮೇಲಿನ ನೇರ ದಾಳಿ ಎಂದು ಕಂಡಿದ್ದರೆ ಆಶ್ಚರ್ಯವಿಲ್ಲ. ಕೇರಳದಲ್ಲಿ ಮಾತ್ರವಲ್ಲ ದೇಶದ ವಿವಿಧ ರಾಜ್ಯಗಳಲ್ಲಿ ವಿವಿಧ ಜನವಿಭಾಗಗಳು ವಿವಿಧ ರೀತಿಗಳ ಆಹಾರ ಪದ್ಧತಿಗಳನ್ನು ಹೊಂದಿದ್ದಾರೆ. ದಕ್ಷಿಣ ಭಾರತ ಮತ್ತು ಈಶಾನ್ಯ ಭಾರತದಲ್ಲಿ ಮಾತ್ರವಲ್ಲ ದೇಶದ ಹೆಚ್ಚಿನ ರಾಜ್ಯಗಳಲ್ಲಿ ಮಾಂಸಾಹಾರಿಗಳ ಸಂಖ್ಯೆಯೇ ಹೆಚ್ಚು. ಇಂತಹ ಸನ್ನಿವೇಶದಲ್ಲಿ ಹೊಸ ನಿಯಮಗಳನ್ನು ಪ್ರಕಟಿಸುವ ಮೊದಲು ರಾಜ್ಯಗಳೊಡನೆ ಸಮಾಲೋಚನೆ ನಡೆಸಬೇಕಿತ್ತು. ಈ ರೀತಿ ರಾಜ್ಯಗಳನ್ನು ವಿಶ್ವಾಸಕ್ಕೆ ತಗೊಳ್ಳದೆ ಏಕಾಏಕಿ ಇಂತಹ ತೀವ್ರ ಕ್ರಮ ಕೈಗೊಂಡಿರುವುದು ನಮ್ಮ ಒಕ್ಕೂಟ ರಚನೆಯಲ್ಲಿ ರಾಜ್ಯಗಳ ಹಕ್ಕುಗಳಲ್ಲಿ ತೀವ್ರ ಅತಿಕ್ರಮಣವಾಗುತ್ತದೆ, ಇದು ನಮ್ಮ ಪ್ರಜಾಪ್ರಭುತ್ವದ ಮೇಲೆ ತೀವ್ರ ದುಷ್ಪರಿಣಾಮ ಬೀರುತ್ತದೆ ಎಂಬ ಸಂಗತಿಯತ್ತ ಕೇರಳ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳ ಗಮನ ಸೆಳೆದಿದ್ದಾರೆ.

ದುಡಿಯುವ ಜನತೆಯ ಮೇಲೆ ಹೊಸ ದಾಳಿಯ ಯೋಚನೆಯೊಂದಿಗೇ 4ನೇ ವರ್ಷಾರಂಭ!

ಮಾಲಕರ ಪಿಎಫ್ ವಂತಿಗೆ ಇಳಿಸುವ ಪ್ರಯತ್ನಕ್ಕೆ ಸಿಐಟಿಯು ಖಂಡನೆ

ಕೇಂದ್ರ ಸರಕಾರದ ಕಾರ್ಮಿಕ ಇಲಾಖೆ ನೌಕರರ ಭವಿಷ್ಯ ನಿಧಿಗೆ ಮಾಲಕರ ವಂತಿಗೆಯನ್ನು 12%ದಿಂದ 10%ಕ್ಕೆ ಇಳಿಸುವ ಯೋಚನೆಯಿಂದ ನೌಕರರ ಭವಿಷ್ಯ ನಿಧಿ ಸಂಘಟನೆ(ಇಪಿಎಫ್‌ಒ)ಯ ಕೇಂದ್ರೀಯ ಟ್ರಸ್ಟಿ ಮಂಡಳಿಯ ಸಭೆಯ ಅಜೆಂಡಾದಲ್ಲಿ ಇದನ್ನು ಸೇರಿಸಿತ್ತು.

ಸಿಐಟಿಯು ಇದನ್ನು ಬಲವಾಗಿ ಖಂಡಿಸುತ್ತ ಮೋದಿ ಸರಕಾರ ದುಡಿಯುವ ಜನತೆಯ ಮೇಲೆ ಈ ಹೊಸ ದಾಳಿಯೊಂದಿಗೆ ತನ್ನ ನಾಲ್ಕನೇ ವರ್ಷವನ್ನು ಆರಂಭಿಸಿದೆ ಎಂದಿದೆ. ಕಾರ್ಮಿಕರ ಹಕ್ಕುಗಳನ್ನು ರಕ್ಷಿಸುತ್ತೇನೆ ಎಂದು ಹೇಳಿಕೊಳ್ಳುತ್ತಲೇ ವಾಸ್ತವವಾಗಿ ಕಾರ್ಪೊರೇಟ್-ಪರ ಧೋರಣೆಯನ್ನೇ ಅನುಸರಿಸುತ್ತಿದೆ ಎಂಬುದು ಈ ಮೂಲಕ ಮತ್ತೊಮ್ಮೆ ಬಯಲಾಗಿದೆ. 'ವ್ಯಾಪಾರ ಮಾಡುವ ಸುಗಮತೆ'ಯೊಂದೇ ಅದರ ಕಾಳಜಿ ಎಂದು ಸಿಐಟಿಯು ಟೀಕಿಸಿದೆ.

ಈ ಪ್ರಸ್ತಾವವನ್ನು ಹಿಂತೆಗೆದುಕೊಳ್ಳಬೇಕೆಂದು ಸರಕಾರವನ್ನು ಆಗ್ರಹಿಸಿರುವ ಸಿಐಟಿಯು ಭಾರತ ಸರಕಾರದ ಈ ಕಾರ್ಮಿಕ-ವಿರೋಧಿ ಕ್ರಮದ ವಿರುದ್ಧ ಕಾರ್ಮಿಕರು ಮತ್ತು ಕಾರ್ಮಿಕ ಸಂಘಟನೆಗಳು ಪ್ರತಿಭಟಿಸಬೇಕು ಎಂದು ಕರೆ ನೀಡಿದೆ.

ಮೇ 27 ರಂದು ನಡೆದ ಇಪಿಎಫ್‌ಒನ ಕೇಂದ್ರೀಯ ಟ್ರಸ್ಟಿ ಮಂಡಳಿ ಸಭೆಯಲ್ಲಿ ಈ ಪ್ರಸ್ತಾವ ಕೊನೆಗೂ ಬಿದ್ದು ಹೋಗಿದೆ ಎಂದು ವರದಿಯಾಗಿದೆ. ಏಕೆಂದರೆ ಕಾರ್ಮಿಕರು, ರಾಜ್ಯ ಸರಕಾರಗಳು ಮಾತ್ರವಲ್ಲ, ಮಾಲಕರ ಪ್ರತಿನಿಧಿಗಳು ಕೂಡ ಈ ಪ್ರಸ್ತಾವವನ್ನು ವಿರೋಧಿಸಿದರಂತೆ.

ಸಿಐಟಿಯು ಅಲ್ಲದೆ ಎಲ್ಲ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಇದನ್ನು ಬಲವಾಗಿ ವಿರೋಧಿಸಿವೆ. ಸರಕಾರ ನಡೆಸುವ ಪಕ್ಷದ ಪರಿವಾರಕ್ಕೆ ಸೇರಿದ ಬಿಎಂಎಸ್ ಕೂಡ ಇದಕ್ಕೆ ಹೊರತಾಗಿರಲಿಲ್ಲ.

ಮೋದಿ ಸರಕಾರದ ಈ ಪ್ರಸ್ತಾವದಲ್ಲಿ ಏನೂ ದಮ್ಮಿಲ್ಲ, ಇದು ಕಾರ್ಪೊರೇಟ್-ಪರ ಪ್ರಸ್ತಾವ, ಈ ಮೂಲಕ ಪಿಎಫ್ ವಂತಿಗೆಗಳನ್ನು ರಾಷ್ಟ್ರೀಯ ಪೆನ್ಷನ್ ಯೋಜನೆ ಮುಂತಾದ ಇತರ ಉಳಿತಾಯ ಯೋಜನೆಗಳ ಸಮಮಟ್ಟಕ್ಕೆ ತಂದಂತಾಗುತ್ತದೆ ಎಂಬ ಮೋದಿ ಸರಕಾರದ ತರ್ಕವೂ ಅರ್ಥವಿಲ್ಲದ್ದು ಎಂದು ಎಲ್ಲ ಕಾರ್ಮಿಕ ಸಂಘಟನೆಗಳು ಸ್ಪಷ್ಟವಾಗಿ ಅಭಿಪ್ರಾಯ ಪಟ್ಟಿವೆ.

ಈ ಹಿನ್ನೆಲೆಯಲ್ಲಿ ಮೋದಿ ಸರಕಾರ ಈ ಪ್ರಸ್ತಾವವನ್ನು ಕೈಬಿಡುತ್ತದೆಯೇ ಎಂದು ಕೇಳಿದಾಗ ಕೇಂದ್ರ ಕಾರ್ಮಿಕ ಇಲಾಖೆಯ ಕಾರ್ಯದರ್ಶಿಗಳು 'ಎಲ್ಲರ ಅಭಿಪ್ರಾಯಗಳನ್ನು ದಾಖಲಿಸಲಾಗಿದೆ. ಸರಕಾರ ಇವನ್ನು ನೋಡುತ್ತದೆ' ಎಂದಷ್ಟೇ ಹೇಳಿರುವುದಾಗಿಯೂ ವರದಿಯಾಗಿದೆ.

ರೈತರನ್ನು ವಿಕಲಗೊಳಿಸುವ ಅಧಿಸೂಚನೆ- ಎಐಕೆಎಸ್

ಪ್ರಾಣಿಗಳಿಗೆ ಕ್ರೌರ್ಯವನ್ನು ತಡೆಯುವ ಹೆಸರಿನಲ್ಲಿ ರೈತರ ಮೇಲೆ ಅತ್ಯಂತ ಕೆಟ್ಟದಾದ ಕ್ರೌರ್ಯ

ದೇಶದಲ್ಲಿ ಜಾನುವಾರು ವ್ಯಾಪಾರವನ್ನು ಸುಮಾರಾಗಿ ನಿಷೇಧಿಸಿಯೇ ಬಿಡುವ ಸರಕಾರದ ಅಧಿಸೂಚನೆ ಇದು ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಇದನ್ನು ಖಂಡಿಸಿದೆ. ಇದು ರೈತ-ವಿರೋಧಿಯಾಗಿದ್ದು ಕೃಷಿ ಆರ್ಥಿಕಕ್ಕೆ ಭಾರೀ ಹೊಡೆತ ಹಾಕುತ್ತದೆ, ಪ್ರಾಣಿಗಳಿಗೆ ಕ್ರೌರ್ಯವನ್ನು ತಡೆಯುವ ಹೆಸರಿನಲ್ಲಿ ರೈತರ ಮೇಲೆ ಅತ್ಯಂತ ಕೆಟ್ಟದಾದ ಕ್ರೌರ್ಯವನ್ನು ಎಸಗುತ್ತದೆ. ಕೇಂದ್ರ ಸರಕಾರ ಮೇ 25ರ ಸಂಜೆ ಪ್ರಕಟಿಸಿದ ನಿಯಮಗಳ ಪ್ರಕಾರ ವಧೆಯನ್ನು ನಿಷೇಧಿಸಿದ ಜಾನುವಾರುಗಳಲ್ಲಿ ಎತ್ತು, ಹಸು, ಹೋರಿ, ಎಮ್ಮೆ, ಕೋಣ, ಕಡಸು, ಹೋರಿಗರು ಮತ್ತು ಒಂಟೆ ಸೇರಿವೆ. ಕೇರಳ ಮತ್ತು ಈಶಾನ್ಯ ಭಾಗ ಬಿಟ್ಟು, ಹೆಚ್ಚಿನ ರಾಜ್ಯಗಳಲ್ಲಿ, ಗೋವಧೆ ನಿಷಿದ್ಧವಾಗಿದೆ. ಮೇ 2014ರಲ್ಲಿ ಬಿಜೆಪಿ ಸರಕಾರ ಅಧಿಕಾರ ವಹಿಸಿಕೊಂಡಂದಿನಿಂದ ದನದ ಮಾಂಸ ತಿಂದಿದ್ದಾರೆ ಅಥವ ಮಾರಾಟ ಮಾಡುತ್ತಿದ್ದಾರೆ ಎಂಬ ಸಂದೇಹದಲ್ಲಿ ಕಾವಲುಕೋರ ಪಡೆಗಳು ಹಿಂಸಾಚಾರ ನಡೆಸಿರುವ ಘಟನೆಗಳು ವರದಿಯಾಗಿವೆ.

ಭಾರತದಲ್ಲಿ ಎಷ್ಟೋ ಕಾಲದಿಂದ ಜಾನುವಾರುಗಳ ಮಾರಾಟದ ಮೂಲಕ ರೈತರು ತಮ್ಮ ಹಣಕಾಸು ಸಂಕಟಗಳನ್ನು ನಿಭಾಯಿಸುತ್ತ ಬಂದಿದ್ದಾರೆ. ಸರಕಾರ, ಈಗಲೂ ಮಾರುಕಟ್ಟೆ ಸ್ಥಳಗಳ ಹೊರಗೆ ವಧೆಗಾಗಿ ಜಾನುವಾರುಗಳ ಮಾರಾಟ ಕಾನೂನುಬಾಹಿರವಲ್ಲ ಎಂದು ಹೇಳಬಹುದಾದರೂ, ರೈತರಿಗೆ ದೂರದ ಸ್ಥಳಗಳ ವರೆಗೆ ಜಾನುವಾರುಗಳನ್ನು ಸಾಗಿಸುವುದು ಸಾಧ್ಯವಿಲ್ಲ. ಅಲ್ಲದೆ 'ಗೋರಕ್ಷಕರು' ಎಂದು ಹೇಳಿಕೊಳ್ಳುವ ಕ್ರಿಮಿನಲ್ ಪಡೆಗಳು ಟ್ರಕ್ಕುಗಳಲ್ಲಿ ಈ ರೀತಿ ಜಾನುವಾರುಗಳನ್ನು ಸಾಗಿಸುವಾಗ ಹಿಂಸಾಚಾರ ನಡೆಸಿರುವ ಘಟನೆಗಳು ಕಳೆದ ಕೆಲವು ತಿಂಗಳಲ್ಲಿ ಬಹಳಷ್ಟು ನಡೆದಿವೆ. ಖರೀದಿಸಿದ ಆರು ತಿಂಗಳ ಒಳಗೆ ಜಾನುವಾರುಗಳನ್ನು ಮಾರಬಾರದು, ನಿರ್ಬಲ ಜಾನುವಾರುಗಳನ್ನು ಮಾರಬಾರದು ಎಂದು ಹೇಳುವುದು ಬರದ ಸನ್ನಿವೇಶದಲ್ಲಿ ರೈತರನ್ನು ವಿಕಲಗೊಳಿಸುತ್ತದೆ. ರೈತರು ಹಣಕಾಸು ಸಂಕಟ ಅನುಭವಿಸದಿರಬೇಕಾದರೆ ಸರಕಾರ ಇಂತಹ ಜಾನುವಾರುಗಳನ್ನು ರೈತರಿಂದ ಖರೀದಿಸಬೇಕು ಎಂದು ಎಐಕೆಎಸ್ ಸೂಚಿಸಿದೆ.

ರೈತರು ಲಕ್ಷಾಂತರ ವಯಸ್ಸಾದ ಅನುತ್ಪಾದಕ ಜಾನುವಾರುಗಳಿಗೆ ಮೇವು ಹಾಕಬೇಕಾಗುತ್ತದೆ. ಇಂತಹ ಸಾವಿರಾರು ಜಾನುವಾರುಗಳನ್ನು ಮನಬಂದಂತೆ ಮೇಯಲು ಬಿಟ್ಟರೆ ಅವು ಗುಂಪು ಕಟ್ಟಿಕೊಂಡು ಅಡ್ಡಾಡುತ್ತ ಗದ್ದೆಯಲ್ಲಿರುವ ಬೆಳೆಗಳನ್ನು ನಾಶಮಾಡುತ್ತವೆ.

ಆದ್ದರಿಂದ ಸರಕಾರ ರೈತ ಸಮುದಾಯದ ಹಿತದೃಷ್ಟಿಯಿಂದ ಈ ರೈತ-ವಿರೋಧಿ ಕರಾಳ ನಿಯಮಗಳನ್ನು ಹಿಂತೆಗೆದುಕೊಳ್ಳಬೇಕು ಎಂದು ಎಐಕೆಎಸ್ ಆಗ್ರಹಿಸಿದೆ.

ನೋಯ್ಡ ಲೂಟಿ, ಅತ್ಯಾಚಾರಗಳನ್ನು ಮುಚ್ಚಿ ಹಾಕುವ ಪ್ರಯತ್ನ?

ಎಐಡಿಡಬ್ಲ್ಯುಎ ನಿಯೋಗಕ್ಕೆ ಸಂದೇಹ, ಹಲ್ಲೆಗೊಳಗಾದವರಿಗೆ ಪರಿಹಾರಕ್ಕೆ ಆಗ್ರಹ



ಈ ಮಹಿಳೆಯರು ಇನ್ನೂ ಆಘಾತದಿಂದ ಹೊರಬಂದಿಲ್ಲ ಪೊಲೀಸ್, ಆಡಳಿತ ಮತ್ತು ಕೆಲವು ಮಾಧ್ಯಮ ವರದಿಗಳು ಈ ಘಟನೆಯ ಭೀಕರತೆಯನ್ನು ನಿರಾಕರಿಸಲು ಪ್ರಯತ್ನ ಪಡುತ್ತಿರುವುದು ಮತ್ತಷ್ಟು ಆಘಾತಕಾರಿ ಸಂಗತಿ ಎಂದು ನಿಯೋಗ ಹೇಳಿದೆ.

ಮೇ 25ರಂದು ಉತ್ತರಪ್ರದೇಶದಲ್ಲಿ ಬುಲಂದ್‌ಶಹರ್‌ನಲ್ಲಿರುವ ಸಂಬಂಧಿಯೊಬ್ಬರ ನೆರವಿಗೆಂದು ಕಾರಿನಲ್ಲಿ ಹೊರಟಿದ್ದ ಒಂದು ಕುಟುಂಬದ ನಾಲ್ವರು ಮಹಿಳೆಯರ ಮೇಲೆ ನೋಯ್ಡ ಬಳಿ ಸಾಮೂಹಿಕ ಅತ್ಯಾಚಾರ ನಡೆಸಿದ, ಅದನ್ನು ತಡೆಯಲು ಪ್ರಯತ್ನಿಸಿದ ಆ ಕುಟುಂಬದ ಹಿರಿಯನನ್ನು ಗುಂಡಿಟ್ಟು ಕೊಂದು ಹಣವನ್ನೂ ಲೂಟಿ ಮಾಡಿದ ಘಟನೆ ಉತ್ತರಪ್ರದೇಶದಲ್ಲಿ ಹೊಸ ಸರಕಾರ ಬಂದ ಮೇಲೆ ಕಾನೂನು ವ್ಯವಸ್ಥೆ ವಿಪರೀತವಾಗಿ ಹದಗೆಟ್ಟಿರುವತ್ತ ದೇಶದ ಗಮನ ಸೆಳೆದಿದೆ.

ಮೇ 29 ರಂದು ದಿಲ್ಲಿಯ ಜನವಾದಿ ಮಹಿಳಾ ಸಂಘಟನೆಯ ಒಂದು ನಿಯೋಗ ಈ ಕುಟುಂಬದ ಊರಾದ ಝೇವರ್‌ಗೆ ಹೋಗಿ ಅವರನ್ನು ಭೇಟಿ ಮಾಡಿತು.


ನಿಯೋಗ ಕೊಲ್ಲಲ್ಪಟ್ಟ ಶಕೀಲ್‌ರ ಹೆಂಡತಿ, ತಂಗಿ, ನಾದಿನಿ ಮತ್ತು ಕಾರಿನ ಡ್ರೈವರ್‌ನ ಪತ್ನಿಯನ್ನು ಭೇಟಿ ಮಾಡಿತು. ಕಾರ್‌ನ ಟೈರ್‌ಗಳಿಗೆ ಏನೋ ಚುಚ್ಚಿ ದಂತಾಗಿ ಕಾರು ನಿಲ್ಲಿಸಿದಾಗ ಆರು ಮಂದಿಯಿದ್ದ ಗುಂಪೊಂದು ಈ ಹಲ್ಲೆ ನಡೆಸಿತು. ಅವರು ಈ ಮಹಿಳೆಯರ ಆಭರಣಗಳನ್ನು ಕಸಿದುಕೊಂಡು, ಅವರ ದುಪ್ಪಟ್ಟಾಗಳಿಂದ ಕಟ್ಟಿ ಅತ್ಯಾಚಾರ ಎಸಗಿದರು. ಅತ್ಯಂತ ದಾರುಣ ಸಂಗತಿಯೆಂದರೆ ಶಕೀಲ್‌ನ 5ವರ್ಷದ ಮಗ ತನ್ನ ಕಣ್ಣ ಮುಂದೆಯೇ ತನ್ನ ತಂದೆ, ತಾಯಿ ಮತ್ತು ಇತರ ಸಂಬಂಧಿಕರ ಮೇಲೆ ಈ ಹೀನಕೃತ್ಯಗಳನ್ನು ಕಾಣಬೇಕಾಯಿತು. ಪೊಲೀಸರನ್ನು ಶಕೀಲ್‌ನ ಅಳಿಯನೇ ಹೋಗಿ ಕರಕೊಂಡು ಬಂದ ಮೇಲೂ ಪೊಲೀಸರ ನಿಷ್ಕ್ರಿಯತೆ ಮುಂದುವರೆದಿದೆ.

ರಾಜ್ಯದ ಮಹಿಳಾ ಆಯೋಗದಿಂದಾಗಲೀ, ಹಿರಿಯ ಪೊಲೀಸ್ ಹಾಗೂ ಆಡಳಿತ ಅಧಿಕಾರಿಗಳಲ್ಲಿ ಯಾರೂ ಈ ಕುಟುಂಬವನ್ನು ಭೇಟಿ ಮಾಡಲು ಬಂದಿಲ್ಲ. ಜತೆಗೆ ಅತ್ಯಾಚಾರ ನಡೆದ ಪುರಾವೆ ಇಲ್ಲೆಂದು ಸುದ್ದಿ ಹರಡಿಸಲಾಗಿದೆ. ಇದು ರಾಜ್ಯ ಸರಕಾರ ಇದನ್ನು ಮುಚ್ಚಿ ಹಾಕಲು ಪ್ರಯತ್ನಿಸುತ್ತಿರುವ ಸಂಕೇತವೇ ಎಂದು ಜನವಾದಿ ಮಹಿಳಾ ಸಂಘಟನೆ ಈ ನಿಯೋಗ ಪ್ರಶ್ನಿಸಿದೆ.

ರಾಷ್ಟ್ರೀಯ ಮಹಿಳಾ ಆಯೋಗ ಮತ್ತು ಕೇಂದ್ರ ಗೃಹಮಂತ್ರಿಗಳು ತಾವಾಗಿಯೇ ಈ ಘಟನೆಯನ್ನು ಗಮನಕ್ಕೆ ತಗೊಂಡು ಕ್ರಮ ವಹಿಸಬೇಕು ಎಂದು ಹೇಳಿರುವ ನಿಯೋಗ ಈ ಕೆಳಗಿನ ಬೇಡಿಕೆಗಳನ್ನು ಮುಂದಿಟ್ಟಿದೆ:

* ಮಹಿಳೆಯರ ಮೇಲೆ ಲೈಂಗಿಕ ದಾಳಿಯ ಸತ್ಯವನ್ನು ಹೊರತರಲು ಮರು ವೈದ್ಯಕೀಯ ತಪಾಸಣೆಗೆ ಒಂದು ವೈದ್ಯಕೀಯ ಮಂಡಳಿಯನ್ನು ರಚಿಸಬೇಕು, ತಪ್ಪಿತಸ್ಥರನ್ನು ಕೂಡಲೇ ಬಂಧಿಸಬೇಕು;
* ವಿಚಾರಣೆಯನ್ನು ತ್ವರಿತವಾಗಿ ಮಾಡಿ ನ್ಯಾಯ ಒದಗಿಸಬೇಕು, ಹಲ್ಲೆಗೆ ಒಳಗಾದವರ ತಕ್ಷಣದ ಆರೋಗ್ಯದ ಅಗತ್ಯಗಳ ಖರ್ಚನ್ನು ನಿಭಾಯಿಸಲು ಹಾಗೂ ಅವರು ಅನುಭವಿಸಿರುವ ಹಣಕಾಸು ನಷ್ಟವನ್ನು ತುಂಬಲು ಹಣದ ನೆರವು ಒದಗಿಸಬೇಕು;
* ಕೊಲೆ ಮಾಡಲ್ಪಟ್ಟ ಶಕೀಲ್‌ನ ಹೆಂಡತಿ ಮತ್ತು ಮಕ್ಕಳ ಪುನರ್ವಸತಿಗೆ ಅಗತ್ಯ ನೆರವು ಒದಗಿಸಬೇಕು;
* ರಾಜ್ಯಸರಕಾರ ಶಕೀಲ್‌ನ ಮಕ್ಕಳ ಶಿಕ್ಷಣವನ್ನು ನೋಡಿಕೊಳ್ಳಬೇಕು.

ಹತ್ಯೆಗಾಗಿ ಜಾನುವಾರು ಮಾರಾಟ ನಿಷೇದ
ದೇಶೀಯ ಮಾರುಕಟ್ಟೆ ಕಬಳಿಕೆಗೆ ಬಹುರಾಷ್ಟ್ರೀಯ ಸಂಸ್ಥೆಗಳ ಸಂಚು



ಕೃಪೆ: ಪಿ. ಮಹಮ್ಮದ್, ವಿಜಯ ಕರ್ನಾಟಕ

ಕೇಂದ್ರ ಸರಕಾರದ ಪರಿಸರ ಹಾಗೂ ಅರಣ್ಯ ಮಂತ್ರಾಲಯ ಈಚೆಗೆ ಪ್ರಕಟಿಸಿದ "ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ನಿಯಮಾವಳಿ"ಯು, ವಧೆಗಾಗಿ ಜಾನುವಾರುಗಳ ಮಾರಾಟವನ್ನು ನಿಷೇಧಿಸಿದೆ. ಹೇಳಲಾದ ಜಾನುವಾರುಗಳಲ್ಲಿ ಗೂಳಿ, ಹೋರಿ, ಎತ್ತು,ಹಸು, ಎಮ್ಮೆ, ಕೋಣ, ಒಂಟೆ, ಕರುಗಳನ್ನು ಸೇರಿಸಲಾಗಿದೆ. ಇದೊಂದು ಕರಾಳ ನಿಯಮಾವಳಿಯಾಗಿದ್ದು ದೇಶದ ಸಂವಿಧಾನ ವಿರೋಧಿಯಾಗಿದೆ., ಇದರಿಂದ ವ್ಯವಸಾಯ , ಹೈನುಗಾರಿಕೆ, ಹಾಗೂ ಮಾಂಸ ಹಾಗೂ ಚರ್ಮಕ್ಕೆ ಸಂಬಂಧಿಸಿದ ಎಲ್ಲ ದೇಶೀಯ ಉದ್ದಿಮೆಗಳನ್ನು ನಾಶ ಮಾಡಲಿದೆ ಮತ್ತು ಜನತೆಯ ಆಹಾರದ ಮತ್ತು ಸ್ವಾತಂತ್ರ ಹಾಗೂ ಸ್ವಾವಲಂಬನೆಯ ಬದುಕುವ ಹಕ್ಕಿನ ಮೇಲೆ, ಅದೇ ರೀತಿ, ಜಾನುವಾರು ಸಂತತಿಯ ಮೇಲೆ ನಡೆಸಲಾದ ದೊಡ್ಡ ದಾಳಿ ಇದಾಗಿದೆಯೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ ಮತ್ತು ತಕ್ಷಣವೇ ಕೇಂದ್ರ ಸರಕಾರ ಅದನ್ನು ವಾಪಾಸು ಪಡೆಯ ಬೇ-ಕೆಂದು ಒತ್ತಾಯಿಸಿದೆ.

ಇದು ನಿರಂತರವಾಗಿ ಆರ್‌ಎಸ್‌ಎಸ್ ಮತ್ತು ಸಂಘ ಪರಿವಾರ ಮತ್ತು ಬಿಜೆಪಿಯ ಕೇಳಿಕೆಯಾಗಿತ್ತು ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳ ಬಯಕೆಯೂ ಆಗಿತ್ತು.

ಅದಾಗಲೇ ಅತ್ಯಂತ ತೀವ್ರ ಸಂಕಷ್ಟ ಹಾಗೂ ಬಿಕ್ಕಟ್ಟಿನಲ್ಲಿರುವ ದೇಶದ ಹಾಗೂ ರಾಜ್ಯದ ವ್ಯವಸಾಯ ಮತ್ತು ರೈತರು, ಕೂಲಿಕಾರರು, ಕಸುಬುದಾರರು ಇದರಿಂದಾಗಿ ಮತ್ತಷ್ಟು ತೀವ್ರ ಸಂಕಷ್ಟವನ್ನೆದುರಿಸುವಂತಾಗುತ್ತದೆ. ಇದು ಇವರಿಗೆ ಗಾಯದ ಮೇಲೆ ದೊಡ್ಡ ಬರೆ ಎಳೆದಂತಹ ಪರಿಸ್ಥಿತಿಯನ್ನು ನಿರ್ಮಿಸಲಿದೆ. ಯಾವ ನಿರುಪಯುಕ್ತ ದನಗಳನ್ನು ಆಗಿಂದಾಗ್ಗೆ ಮಾರಾಟ ಮಾಡಿ ಅದರಿಂದ ಸ್ವಲ್ಪ ಆದಾಯವನ್ನು ಗಳಿಸಲಾಗುತ್ತಿತ್ತೋ, ಅದನ್ನು ಈ ಬಿಗಿಯಾದ ಮಾರಾಟ ನಿಯಮಾವಳಿಗಳ ಕಾರಣದಿಂದಾಗಿ ಕಳೆದುಕೊಳ್ಳಬೇಕಾಗುತ್ತದೆ. ಮಾತ್ರವಲ್ಲಾ, ನಿರುಪಯೋಗಿ ಈ ಜಾನುವಾರುಗಳನ್ನು ಅವುಗಳ ಸಾವಿನವರೆಗೆ ಸಾಕಲೇ ಬೇಕಾದ ಒತ್ತಾಯಕ್ಕೊಳಗಾಗಿ ಅದರ ಜೀವಮಾನದ ಖರ್ಚನ್ನು ಭರಿಸಬೇಕಾಗುತ್ತದೆ. ಇಲ್ಲವೇ ಅವುಗಳನ್ನು ಬೀದಿಗೆ ಬಿಡಬೇಕಾಗುತ್ತದೆ. ಹಾಗೆ ಬಿಟ್ಟಾಗಲೂ ಈ ಬೀದಿ ಜಾನುವಾರುಗಳಿಂದ ಅವರು ಬೆಳೆಗಳ ಮೇಲಿನ ದಾಳಿಯನ್ನು ಅನುಭವಿಸಬೇಕಾಗುತ್ತದೆ.

ಈ ಹೊರೆಯು, ವ್ಯವಸಾಯದಲ್ಲಿ ಎತ್ತುಗಳ ಬಳಸುವಿಕೆಯನ್ನು ನಿಲ್ಲಿಸಿ, ದುಬಾರಿ ಬಾಡಿಗೆಯ ಯಂತ್ರಗಳನ್ನು ನೀಡುವ ಬಂಡವಾಳಶಾಹಿ-ಭೂಮಾಲಕನ ಮೇಲೆ ಬಡ ಮತ್ತು ಮಧ್ಯಮ ರೈತರನ್ನು ಮತ್ತಷ್ಟು ಅವಲಂಬಿಸುವಂತೆ ಒತ್ತಾಯಿಸಲಿದೆ. ಇದೆಲ್ಲವೂ ಖಂಡಿತಾ ಬೇಸಾಯಗಾರನನ್ನು ಮತ್ತು ಹೈನುಗಾರರನ್ನು ವ್ಯವಸಾಯ ಹಾಗೂ ಹೈನುಗಾರಿಕೆಯಿಂದ ಹೊರತಳ್ಳುತ್ತದೆ.

ಅದೇ ರೀತಿ, ವ್ಯವಸಾಯ ಹಾಗೂ ಹೈನುಗಾರಿಕೆಯ ಆಧಾರಿತ ಉದ್ದಿಮೆಗಳು ಈ ಮೇಲಿನ ಕಾರಣದಿಂದಾಗಿ, ಅವುಗಳಿಗೆ ಅಗತ್ಯವಾದ ಕಚ್ಚಾಮಾಲುಗಳ ಕೊರತೆಯಿಂದ ಮುಚ್ಚಲ್ಪಡಲಿವೆ ಹಾಗೂ ಅದಾಗಲೆ ಉದ್ಯೋಗಿಗಳಾಗಿದ್ದವರನ್ನು ಬೀದಿಗೆ ತಳ್ಳಿ ನಿರುದ್ಯೋಗಿಗಳ ದೊಡ್ಡ ಪಡೆಯನ್ನು ನಿರ್ಮಿಸಲಿವೆ. ಇದರಿಂದ ಗ್ರಾಹಕರಿಗೆ ಸ್ಥಳೀಯವಾಗಿ ಲಭ್ಯವಿದ್ದ ಅಗತ್ಯ ಆಹಾರ ಮತ್ತು ಹೈನುಗಾರಿಕೆಯ ಉತ್ಪನ್ನಗಳು ಮತ್ತು ಇವುಗಳ ಉದ್ದಿಮೆಯಾಧಾರಿತ ಉತ್ಪನ್ನಗಳು ಸಿಗದಂತಾಗಲಿವೆ.

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಹೇಳಿಕೆ

ಜಾಗತಿಕವಾಗಿ ಮಾಂಸ ರಫ್ತುನಲ್ಲಿ ನಮ್ಮ ದೇಶ ಪ್ರಥಮ ಸ್ಥಾನವನ್ನು ಹೊಂದಿದೆ. ಈ ನಿಲುಮೆಯಿಂದಾಗಿ ಮಾಂಸದ ಕೊರತೆಯುಂಟಾಗಿ ಇಡೀ ಕೈಗಾರಿಕೆಯೇ ಮತ್ತು ಅದರಲ್ಲಿ ತೊಡಗಿದ್ದ ಭಾರೀ ಉದ್ಯೋಗವೂ ಇಲ್ಲದಂತಾಗುತ್ತದೆ. ಚರ್ಮೋದ್ಯಮವೂ ಅದರ ಉದ್ಯೋಗವು ನಾಶಗೊಳ್ಳಲಿದೆ. ಇದರಿಂದಾಗಿ ರೈತರು, ಕೂಲಿಕಾರರು, ಹಿಂದುಳಿದ ಜನಸಮುದಾಯಗಳು, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಮುದಾಯಗಳು, ಅಲ್ಪಸಂಖ್ಯಾತರು ತೀವ್ರ ಉದ್ಯೋಗ ಹಾನಿಗೆ ಒಳಗಾಗಲಿದ್ದಾರೆ.

ನಮ್ಮ ಸ್ವಾವಲಂಬಿ ಉತ್ಪನ್ನಗಳು ಮಾರುಕಟ್ಟೆಯಲ್ಲಿ ದೊರೆಯದಂತೆ ಮಾಡುವ ಮತ್ತು ಈ ಎಲ್ಲಾ ಉತ್ಪನ್ನಗಳಿಗಾಗಿ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ನಮ್ಮ ಮಾರುಕಟ್ಟೆಯನ್ನು ಒದಗಿಸುವ ಸಂಚು ಇದರ ಹಿಂದೆ ಅಡಗಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಇಷ್ಟು ಮಾತ್ರವೇ ಅಲ್ಲಾ, ಈ ನಿಯಮಾವಳಿಯು ಪರೋಕ್ಷವಾಗಿ ದೇಶದ ದೊಡ್ಡ ಸಂಖ್ಯೆಯ ಜನಗಳ ಆಹಾರದ ಹಕ್ಕು ಮತ್ತು ಬದುಕುವ ಹಕ್ಕಿನ ಮೇಲೆ ನಡೆಸಿದ ದಾಳಿಯಾಗಿದೆ.

ಸಂವಿಧಾನವು ಈ ವಿಷಯವನ್ನು ರಾಜ್ಯಗಳಿಗೆ ಸಂಬಂಧಿಸಿದ್ದೆಂದು ಸ್ಪಷ್ಟವಾಗಿ ಹೇಳಿದ್ದರೂ, ಕೇಂದ್ರ ಸರಕಾರ ಅದನ್ನು ದುರುದ್ದೇಶ ಪೂರ್ವಕವಾಗಿಯೇ ಉಲ್ಲಂಘಿಸಿ, ಈ ನಿಯಮಾವಳಿಗಳನ್ನು ರೂಪಿಸಿ ರಾಜ್ಯಗಳ ಮೇಲೆ ಹೇರಿದೆ.

ಇದು ಒಂದೆಡೆ, ಅಪಾರ ಪ್ರಮಾಣದ ದುಡಿಯುವ ಜನತೆ ಹಾಗೂ ಗ್ರಾಮೀಣ ಪ್ರದೇಶದ ಮೂರು ಪ್ರಮುಖ ಮೂಲ ಉದ್ದಿಮೆಗಳಾದ ಬೇಸಾಯ ಮತ್ತು ಹೈನುಗಾರಿಕೆ, ಮಾಂಸಹಾರದ ಹಾಗೂ ಅವುಗಳನ್ನು ಆಧರಿಸಿದ ಇತರೇ ಉದ್ದಿಮೆಗಳ ಮೇಲೆ ದಾಳಿ ನಡೆಸಿ, ಈ ಸಂಬಂಧಿತ ಗ್ರಾಹಕ ಮಾರುಕಟ್ಟೆಯನ್ನು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಒದಗಿಸಿಕೊಡುವ ಹುನ್ನಾರವಾಗಿದ್ದರೆ, ಇನ್ನೊಂದೆಡೆ ಇದು ಈ ಎಲ್ಲಾ ರೀತಿಯ ಬದುಕನ್ನು ಕಳೆದುಕೊಳ್ಳುವವರು ತಮ್ಮ ಹಕ್ಕುಗಳಿಗಾಗಿ, ಒಗ್ಗೂಡಿ ಹೋರಾಡದಂತೆ ತಡೆಯುವ ಮತ್ತು ಪರಸ್ಪರರ ಮೇಲೆ ಮುಗಿಬಿದ್ದು ಹೊಡೆದಾಡಿಕೊಳ್ಳುವಂತೆ ಮಾಡುವ, ಒಡೆದಾಳಲು ಬಳಸುವ ಕೋಮುವಾದದ ಸಂಚಾಗಿದೆ.

ಬಿಜೆಪಿಯ ಕೇಂದ್ರ ಸರಕಾರ, ಜಾನುವಾರು ಸಂರಕ್ಷಣೆಯ ಹೆಸರೇಳಿ ಈ ನಿಯಮಾವಳಿಯನ್ನು ಜಾರಿಗೆ ತಂದರೆ, ದೇಶದ ಸಂಘ ಪರಿವಾರ ಇದನ್ನು ದೊಡ್ಡ ರೀತಿಯಲ್ಲಿ ಸ್ವಾಗತಿಸಿದೆ. 1992ರಲ್ಲಿ ಜಾನುವಾರುಗಳ ಸಂಖ್ಯೆ 28.90 ಕೋಟಿಯಷ್ಟಿದ್ದರೆ 2012ರಲ್ಲಿ ಅದು 30 ಕೋಟಿಗೆ ಏರಿಕೆಯಾಗಿದೆ. ಅದೇ ರೀತಿ 1992ರಲ್ಲಿ ಗೋವುಗಳ ಸಂಖ್ಯೆಯು 10.30 ಕೋಟಿ ಇದ್ದರೆ 2012ರಲ್ಲಿ ಅದು 12,30ಕೋಟಿಗೆ ಏರಿಕೆಯಾಗಿಂದೆ. ವಾಸ್ತವದಲ್ಲಿ ಜನತೆ ತನ್ನ ಉಪಯೋಗಕ್ಕಾಗಿ ಈ ಜಾನುವಾರುಗಳನ್ನು ಬಳಸುತ್ತಾ ಅದರ ಸಂತತಿಯನ್ನು ಹೆಚ್ಚು ಮಾಡುತ್ತಾ ಮುನ್ನಡೆದಿದೆ. ಈಗ ಈ ನಿಯಮಾವಳಿಯಿಂದಾಗಿ, ಜನತೆ ಇದರ ಉಪಯೋಗವನ್ನು ಬಿಡಬೇಕಾದ ಪರಿಸ್ಥಿತಿ ಮುಂದುವರೆದರೆ ಜಾನುವಾರು ಸಂತತಿಯೇ ಅಪಾಯದಂಚಿಗೆ ಸರಿಯಲಿದೆ. ಅದಾಗಲೆ, ನಾವುಗಳು ಜನತೆಯು ಉಪಯೋಗಿಸಲಾಗದ ಕಾಡು ಪ್ರಾಣಿಗಳಾದ ಹುಲಿ, ಸಿಂಹ, ಕರಡಿ, ಆನೆಗಳನ್ನು ಕಾರಿಡಾರ್‌ಗಳ ಮೂಲಕ ಸಂರಕ್ಷಿಸಬೇಕಾಗಿ ಬಂದಿರುವುದನ್ನು ಸಕಾರಣವಾಗಿ ಗುರುತಿಸಬಹುದಾಗಿದೆ. ಇದೆಲ್ಲವೂ ಕೂಡಾ, ಬಿಜೆಪಿಗೆ ಮತ್ತು ಸಂಘ ಪರಿವಾರಕ್ಕೆ ಜಾನುವಾರು ಹಾಗೂ ಗೋಸಂರಕ್ಷಣೆಯ ನಿಜ ಕಾಳಜಿ ಇಲ್ಲವೆಂಬುದನ್ನು ಬಯಲುಗೊಳಿಸುತ್ತದೆ.

ದೇಶದ ಮೇಲೆ ತಿಳಿಸಲಾದ ಅಂಕೆಸಂಖ್ಯೆಗಳು, ಗೋಹತ್ಯೆಯು ಅದರ ಸಂತತಿಗೆ ಮಾರಕವಾಗಿದೆಯೆಂಬ ಸಂಘ ಪರಿವಾರದ ಅಪಪ್ರಚಾರವು ಬೊಗಳೆಯಾಗಿದೆಯೆಂಬುದನ್ನು ಬಯಲುಗೊಳಿಸುತ್ತವೆ.

ಆದ್ದರಿಂದ ಕರ್ನಾಟಕದ ಜನತೆ ಈ ನಿಜವನ್ನು ಅರಿತು ಬಿಜೆಪಿಗೆ, ಸಂಘ ಪರಿವಾರಕ್ಕೆ ಮತ್ತು ಕೇಂದ್ರ ಸರಕಾರಕ್ಕೆ ತೀವ್ರ ಪ್ರತಿಭಟನೆಯನ್ನು ಹಮ್ಮಿಕೊಳ್ಳುವ ಮೂಲಕ ತಕ್ಕ ಪಾಠವನ್ನು ಕಲಿಸಬೇಕೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ಕರ್ನಾಟಕ ರಾಜ್ಯ ಸಮಿತಿ ಕರೆ ನೀಡಿದೆ.

ಅದೇ ರೀತಿ, ಮುಖ್ಯಮಂತ್ರಿ ಸಿದ್ಧರಾಮಯ್ಯನವರು, ಇದು ಚುನಾವಣೆಯ ವರ್ಷವಾಗಿರುವುದರಿಂದ ಈ ನಿಯಮಾವಳಿಗಳನ್ನು ವಿರೋಧಿಸಿದರೆ, ತಮ್ಮ ಪಕ್ಷಕ್ಕೆ ಮತ ಕಡಿಮೆಯಾಗಬಹುದೇನೋ ಎಂಬ ರಾಜಕೀಯ ಲೆಕ್ಕಾಚಾರದಲ್ಲಿ ಮೀನ-ಮೇಷ ಮಾಡುವುದನ್ನು ಕೈಬಿಟ್ಟು ಸ್ಪಷ್ಟವಾಗಿ ಅದನ್ನು ತಿರಸ್ಕರಿಸಬೇಕೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ರಾಜ್ಯಸಮಿತಿಯು ರಾಜ್ಯ ಸರಕಾರವನ್ನು ಮತ್ತು ಸಿದ್ಧರಾಮಯ್ಯನವರನ್ನು ಒತ್ತಾಯಿಸಿದೆ.

ನಾಳಿನ ಕಾರ್ಯಕ್ರಮಗಳು

- **"ಕೆಲಸದ ಸ್ಥಳಗಳಲ್ಲಿನ ಲೈಂಗಿಕ ಕಿರುಕುಳ" ಕಾರ್ಯಾಗಾರ,** ಜೂನ್ 3-4, ಸಿ.ಐ.ಟಿ.ಯು. ಬೆಂಗಳೂರು
- **ರಾಜ್ಯ ಮಟ್ಟದ "ಸಂವಿಧಾನ ಉಳಿಸಿ ದೇಶಪ್ರೇಮಿ" ಸಮಾವೇಶ** ಜೂನ್ 11, ಮೈಸೂರು
- **ಬಗರ್ ಹುಕುಂ ಸಕ್ರಮಕ್ಕೆ ಪ್ರಚಾರಾಂದೋಲನ,** ಕರ್ನಾಟಕ ಪ್ರಾಂತ ರೈತಸಂಘ, ಜೂನ್ 1-2ನೇ ವಾರ
- **ಕಟ್ಟಡ ಕಾರ್ಮಿಕರ ರಾಜ್ಯ ಸಮ್ಮೇಳನ** ಜುಲೈ 1-2, ಕುಂದಾಪುರ






ನಮ್ಮ ಆಹಾರ–ನಮ್ಮ ಹಕ್ಕು

ಹತ್ಯೆಗಾಗಿ ಜಾನುವಾರುಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಿ ಕೇಂದ್ರ ಸರ್ಕಾರ ಹೊರಡಿಸಿರುವ ಅಧಿಸೂಚನೆಯನ್ನು ಖಂಡಿಸಿ ಎಸ್.ಎಫ್.ಐ–ಡಿ.ವೈ.ಎಫ್.ಐ ಸಂಘಟನೆಗಳಿಂದ ಪ್ರತಿಭಟನೆ ನಡೆಸಲಾಯಿತು.

ಹತ್ಯೆಗಾಗಿ ಜಾನುವಾರುಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಿ ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯ ಹೊರಡಿಸಿರುವ ಅಧಿಸೂಚನೆಯನ್ನು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಮತ್ತು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿ.ವೈ.ಎಫ್.ಐ) ಸಂಘಟನೆಗಳು ತೀವ್ರವಾಗಿ ಖಂಡಿಸಿ ಪ್ರತಿಭಟನೆಯನ್ನು ಮಾಡಿದರು.

ಕೇಂದ್ರ ಸರ್ಕಾರ ಆರ್.ಎಸ್.ಎಸ್‌ನ ಕಾರ್ಯಸೂಚಿಯನ್ನು ಜಾರಿ ಮಾಡಲು ಮುಂದಾಗಿದೆ. ದೇಶಾದ್ಯಂತ "ಆಹಾರ ಸಂಹಿತೆ"ಯನ್ನು ಹೇರಲು ಯತ್ನಿಸುತ್ತಿದೆ. ಸಂಘಪರಿವಾರದ ಅಣತಿಯ ಮೇರೆಗೆ ಕೇಂದ್ರ ಸರ್ಕಾರ ಈ ಮೂರ್ಖತನದ ನಿರ್ಧಾರ ತೆಗೆದುಕೊಂಡಿದೆ.ಈ ಕ್ರಮ ಬಹುಸಂಖ್ಯಾತ ಜನರ ಆಹಾರದ ಹಕ್ಕಿನ ಮೇಲೆ ನಡೆಸಿರುವ ಧಾಳಿಯಾಗಿದೆ. ಕೇವಲ ಆಹಾರದ ಮೇಲಿನ ಧಾಳಿಯಷ್ಟೇ ಅಲ್ಲದೇ ರೈತರಿಗೆ ಭಾರಿ ಹೊಡೆತ ಬೀಳಲಿದೆ ಮತ್ತು ದೇಶದ ಆರ್ಥಿಕತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ. ಕಸಾಯಿಖಾನೆಗಳು ಸಂಕಷ್ಟಕ್ಕೆ ಸಿಲುಕಿ ಈ ಉದ್ಯಮವನ್ನೇ ಅವಲಂಬಿಸಿರುವ ಕೋಟ್ಯಾಂತರ ಜನ ಬೀದಿಪಾಲಾಗುತ್ತಾರೆ. ಕೇಂದ್ರ ಸರ್ಕಾರದ ಈ ಕ್ರಮ ಇಡೀ ದೇಶದಲ್ಲಿ ದೊಡ್ಡ ಕೋಲಾಹಲವನ್ನೇ ಸೃಷ್ಟಿಸಿದೆ.

ದೇಶದಲ್ಲಿ ಸುಧಾರಣೆ ಮಾಡಲು ನಿರುದ್ಯೋಗ, ಅಸ್ಪೃಶ್ಯತೆ, ಲಿಂಗತಾರತಮ್ಯ, ಬಡತನ, ಹಸಿವು, ಭಯೋತ್ಪಾದನೆ, ನಕ್ಸಲ್‌ವಾದ, ಶಿಕ್ಷಣ ಸೇರಿದಂತೆ ಸಾಕಷ್ಟು ಸಮಸ್ಯೆಗಳಿವೆ.ಆದರೆ ಅವುಗಳಿಗೆ ಗಮನ ಕೊಡುವುದನ್ನು ಬಿಟ್ಟು ಸಾಮಾಜಿಕ ಶಾಂತಿ ಕದಡುವ ಮತ್ತು ಜನರಿಗೆ ಅಪನಂಬಿಕೆ ಹೆಚ್ಚಿಸುವ ಕ್ರಮಗಳಿಗೆ ಕೈಹಾಕಿರುವ ಕೇಂದ್ರ ಸರ್ಕಾರದ ನಡೆ ನಿಜಕ್ಕೂ ಆತಂಕಕಾರಿಯಾಗಿದೆ. ಮೂರು ವರ್ಷದ ವೈಫಲ್ಯವನ್ನು ಮುಚ್ಚಿಕೊಳ್ಳಲು ಜನರ ಗಮನವನ್ನು ಬೇರೆಡೆ ತಿರುಗಿಸಲು ಈ ರೀತಿಯ ಭಾವಾನಾತ್ಮಕ ವಿಚಾರಗಳನ್ನು ಬಿ.ಜೆ.ಪಿ ಕೈಗೆತ್ತಿಕೊಳ್ಳುತ್ತಿದೆ.

ಜನರ ಊಟದ ಮೆನುವನ್ನು ತೀರ್ಮಾನಿಸುವ ಅಧಿಕಾರವನ್ನು ಬಿ.ಜೆ.ಪಿ ಮತ್ತು ಆರ್.ಎಸ್.ಎಸ್ ನಾಯಕರಿಗೆ ಕೊಟ್ಟವರು ಯಾರು? ಏನನ್ನು ತಿನ್ನಬೇಕು, ಏನನ್ನು ತೊಡಬೇಕು, ಏನನ್ನು ಉಡಬೇಕು ಎಂಬುದನ್ನು ಈ ದೇಶದ ಜನರು ನಿರ್ಧರಿಸುತ್ತಾರೆ. ನೆನ್ನೆ ಕಾರ್ಯಕ್ರಮವೊಂದರಲ್ಲಿ ವಿಶ್ವ ಹಿಂದೂ ಪರಿಷತ್‌ನ ಅಂತರಾಷ್ಟ್ರೀಯ ಕಾರ್ಯಾಧ್ಯಕ್ಷರಾದ ಪ್ರವೀಣ್ ತೊಗಾಡಿಯಾರವರು ದೇಶದಲ್ಲಿ ಯಾರು ಹೇಗಿರಬೇಕೆಂಬ ನಿರ್ಣಯವನ್ನು ನಾವು ಮಾಡುತ್ತೇವೆ ಎಂದು ಹೇಳಿದ್ದಾರೆ. ಇದರರ್ಥ ಏನು?. ಈ ದೇಶ ಹಿಂದೂ ರಾಷ್ಟ್ರವಲ್ಲ. ಈ ದೇಶದ ಬಹುಸಂಸ್ಕೃತಿಯನ್ನು ಗೌರವಿಸದವರು ಹಾಗೂ ಈ ನೆಲದ ಸಂವಿಧಾನವನ್ನು ಜಾರಿಮಾಡಲು ಹಿಂದೇಟು ಹಾಕುತ್ತಿರುವ ಈ ಮನುವಾದಿಗಳು ದೇಶದ ಐಕ್ಯತೆಯನ್ನು ಮತ್ತು ಶಾಂತಿಯನ್ನು ಕದಡಲು ಯತ್ನಿಸುತ್ತಿದ್ದಾರೆ.

ಈಗಾಗಲೇ ದೇಶದಲ್ಲಿ ಗೋರಕ್ಷಣೆಯ ಹೆಸರಿನಲ್ಲಿ ಸಂಘಪರಿವಾರದವರು ಕಾನೂನನ್ನು ಕೈಗೆ ತೆಗೆದುಕೊಂಡು ನೈತಿಕ ಪೊಲೀಸ್ ಗಿರಿಯನ್ನು ಮಾಡುತ್ತಿದ್ದಾರೆ. ಈ ಕಾಯ್ದೆಯಿಂದ ನಕಲಿ ಗೋರಕ್ಷಕರಿಗೆದಲಿತ–ಅಲ್ಪಸಂಖ್ಯಾತ ಮತ್ತು ಹಿಂದುಳಿದ ಸಮುದಾಯದ ಮೇಲೆ ದೌರ್ಜನ್ಯ ಎಸಗಲು ಹೊಸ ಅಸ್ತ್ರ ಸಿಕ್ಕಿದಂತಾಗಿದೆ.

ಕೋಟ್ಯಾಂತರ ಜನರ ಜೀವನ ಮತ್ತು ಜೀವನೋಪಾಯವನ್ನು ರಕ್ಷಿಸುವುದಕ್ಕಾಗಿ ಮತ್ತು ಸಂವಿಧಾನದ ಮೂಲಭೂತ ತತ್ವಗಳನ್ನು ಕಾಪಾಡುವುದಕ್ಕಾಗಿ ಕೇಂದ್ರ ಸರ್ಕಾರ ಹೊರಡಿಸಿರುವ ಈ ಅಧಿಸೂಚನೆಯನ್ನು ವಾಪಾಸ್ ಪಡೆಯಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಮತ್ತು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿ.ವೈ.ಎಫ್.ಐ) ಸಂಘಟನೆಗಳು ಆಗ್ರಹಿಸುತ್ತವೆ.

ಈ ಕೂಡಲೇ ಈ ಅಧಿಸೂಚನೆಯನ್ನು ವಾಪಾಸ್ ಪಡೆಯದಿದ್ದರೆ ಕರ್ನಾಟಕ ರಾಜ್ಯಾದ್ಯಂತ ತೀವ್ರ ರೂಪದ ಹೋರಾಟಕ್ಕೆ ಎಸ್.ಎಫ್.ಐ ಮತ್ತು ಡಿ.ವೈ.ಎಫ್.ಐ ಸಂಘಟನೆಗಳು ಮುಂದಾಗುತ್ತವೆಂದು ಈ ಮೂಲಕ ಎಚ್ಚರಿಕೆಯನ್ನು ನೀಡುತ್ತವೆ.

ಹತ್ಯೆಗಾಗಿ ಜಾನುವಾರುಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಿರುವ ಕೇಂದ್ರ ಸರ್ಕಾರದ ಕ್ರಮ ಖಂಡಿಸಿ "ನಮ್ಮ ಆಹಾರ–ನಮ್ಮ ಹಕ್ಕು" ಎಂಬ ಘೋಷಣೆಯಡಿಯಲ್ಲಿ ಟೌನ್ ಹಾಲ್ ಮುಂಭಾಗ ಪ್ರತಿಭಟನೆ ನಡೆಸಲು ಎಸ್.ಎಫ್.ಐ ಸಂಘಟನೆಯಿಂದ ಸಹಾಯಕ ಪೊಲೀಸ್ ಕಮೀಷನರ್ ರವರ ಕಛೇರಿಗೆ ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದೆವು. ದಿನಾಂಕ:28.05.2017, ಭಾನುವಾರ ನಮಗೆ ಅನುಮತಿ ನೀಡಿದ್ದರು.



ಆದರೆ ಸಾಮಾಜಿಕ ಜಾಲತಾಣದಲ್ಲಿ ಬೀಫ್ ಫೆಸ್ಟ್ ಮಾಡುತ್ತಾರೆಂಬ ವದಂತಿಯ ಹಿನ್ನಲೆಯಲ್ಲಿ 29.05.2017, ಸೋಮವಾರ ಬೆಳಿಗ್ಗೆ 11.30ರ ಸಮಯದಲ್ಲಿ ಎ.ಸಿ.ಪಿ ಕಛೇರಿಯಿಂದ ವಾಟ್ಸಪ್ ಮೂಲಕ ಅನುಮತಿಯನ್ನು ನಿರಾಕರಿಸಿದ್ದೇವೆ ಎಂಬ ಮಾಹಿತಿಯನ್ನು ಆಯೋಜಕರಾದ ಎಸ್.ಎಫ್.ಐನ ರಾಜ್ಯ ಉಪಾಧ್ಯಕ್ಷ ಚಿಕ್ಕರಾಜು.ಎಸ್ ರವರಿಗೆ ರವಾನಿಸಿದ್ದರು. ಇದರಿಂದ ಇಡೀ ದಿನ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

ನಮ್ಮ ಪ್ರತಿಭಟನೆಯ ವಿರುದ್ಧ ಗೋ ಪರಿವಾರದವರು ಪ್ರತಿಭಟನೆಯನ್ನು ನಡೆಸಿದ್ದಾರೆ. ಪ್ರತಿಭಟನೆ ಮಾಡುವುದಕ್ಕೆ ಎಲ್ಲರಿಗೂ ಹಕ್ಕಿದೆ ಆದರೆ ಸಂಘಪರಿವಾರದ ಈ ತಂಡ ನಮ್ಮ ಪ್ರತಿಭಟನೆಯನ್ನು ಹತ್ತಿಕ್ಕಲು ಇನ್ನಿಲ್ಲದ ಸಾಹಸವನ್ನು ಮಾಡಿದರು.

ಪೊಲೀಸ್ ಸರ್ಪಗಾವಲಿನ ನಡುವೆಯೂ ಎಸ್.ಎಫ್.ಐ–ಡಿ.ವೈ.ಎಫ್.ಐ ಸಂಘಟನೆಯ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಪ್ರತಿಭಟನಾ ನಿರತರ ಮೇಲೆ ಸಂಘಪರಿವಾರದ ಕೆಲವರು ಹಲ್ಲೆ ಮಾಡಲು ಮುಂದಾದರು. ಎಸ್.ಎಫ್.ಐ ಕಾರ್ಯಕರ್ತರಿಗೂ ಗೋಪರಿವಾರದ ಕಾರ್ಯಕರ್ತರಿಗೂ ಜಟಾಪಟಿ ನಡೆಯಿತು. ನಂತರ ಪೊಲೀಸರು ಎಸ್.ಎಫ್.ಐ–ಡಿ.ವೈ.ಎಫ್.ಐನ ಸುಮಾರು 50 ಜನ ಕಾರ್ಯಕರ್ತರನ್ನು ವಿವಿಧ ಕಡೆ ಬಂಧಿಸಿ ರಾತ್ರಿ 10 ಗಂಟೆಯಲ್ಲಿ ಬಿಡುಗಡೆಗೊಳಿಸಿದ್ದಾರೆ.

– ಚಿಕ್ಕರಾಜು .ಎಸ್

ದ.ಕ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ನೌಕರರ ಸಂಘಟನೆಯು ಬಿ.ಇ.ಎಫ್.ಐ ಸಂಘಟನೆಗೆ ಸಂಯೋಜನೆ

ನಗರದ ಪ್ರತಿಷ್ಠಿತ ದ.ಕ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ನೌಕರರ ಸಂಘಟನೆಯ ಬ್ಯಾಂಕ್ ಎಂಪ್ಲಾಯಿಸ್ ಫೆಡರೇಶನ್ ಆಫ್ ಇಂಡಿ–ಯಾ (ಬಿ.ಇ.ಎಫ್.ಐ)ಗೆ ಇಂದು (27–05–2017) ವಿದ್ಯುಕ್ತವಾಗಿ ಸೇರ್ಪಡೆಗೊಂಡಿದ್ದು, ಅದರ ಉದ್ಘಾಟನಾ ಸಮಾರಂಭವು ನಗರದ ಉರ್ವ ಚರ್ಚ್ ಹಾಲ್‌ನಲ್ಲಿ ಜರುಗಿತು.

ಈ ಸಮಾರಂಭವನ್ನು ಬಿ.ಇ.ಎಫ್.ಐನ ರಾಷ್ಟ್ರೀಯ ಮುಖಂಡರೂ, ತಮಿಳುನಾಡು ಬಿ.ಇ.ಎಫ್.ಐಯ ರಾಜ್ಯಾಧ್ಯಕ್ಷರಾದ ಕಾ| ತಮಿಳರಸನ್‌ರವರು ನೆರವೇರಿಸಿದರು. ಅಖಿಲ ಭಾರತ ಸಹಕಾರ ಚಳುವಳಿಯ ಮುಖಂಡರಾಗಿ, ಸಹಕಾರ ಸಂಸ್ಥೆಗಳಲ್ಲಿ ದುಡಿಯುವ ನೌಕರರು, ಈ ಜಿಲ್ಲೆಯ ಕೃಷಿಕರನ್ನು, ಇಲ್ಲಿಯ ಠವಣಿದಾರರನ್ನು ಹಾಗೂ ಸಂಸ್ಥೆಯನ್ನು ರಕ್ಷಿಸಬೇಕು. ನೌಕರರ ಸಾಮಾಜಿಕ ಜವಾಬ್ದಾರಿಗಳನ್ನು ನಿಭಾಯಿಸಬೇಕೆಂದು ನೌಕರವರ್ಗಕ್ಕೆ ಕರೆ ನೀಡಿದರು.



ಬಿ.ಇ.ಎಫ್.ಐಕರ್ನಾಟಕದಕಾರ್ಯದರ್ಶಿಗಳಾದ ಕಾ| ಎಂ. ಆರ್. ಶೆಣೈಯವರು ಮಾತನಾಡುತ್ತಾ, ಸಹಕಾರಿ ಸಂಸ್ಥೆಯಲ್ಲಿ ನೌಕರರ ಐಕ್ಯತೆಯನ್ನು ಕಟ್ಟಿ ಬೆಳೆಸುವಾಗ ಬರುವ ಬೆದರಿಕೆಗಳು, ದಾಳಿಗಳನ್ನು ಎದುರಿಸಲು ಸಂಘಟನೆ ಬಲಿಷ್ಠಪಡಿಸಲು ತಿಳಿಸಿದರು.

ಈ ಸಂದರ್ಭದಲ್ಲಿ ನೌಕರರ ಸಂಘಟನೆಗೆ ಅಭಿನಂದನೆಗಳನ್ನು ಸಲ್ಲಿಸಿ ಮಾತನಾಡಿದ ಸಿಐಟಿಯು ದ.ಕ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಂ| ಸುನಿಲ್ ಕುಮಾರ್ ಬಜಾಲ್, ಡಿವೈಎಫ್‌ಐ ರಾಜ್ಯಾಧ್ಯಕ್ಷರಾದ ಮುನೀರ್ ಕಾಟಿಪಳ್ಳ, ಪ್ರಾಂತ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ಯಾದವ ಶೆಟ್ಟಿಯವರು ದ.ಕ ಜಿಲ್ಲಾ ಸಹಕಾರಿ ಬ್ಯಾಂಕಿನ ನೌಕರರ ಎಲ್ಲಾ ಹೋರಾಟಗಳಲ್ಲೂ ತಮ್ಮ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದರು.


ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಜಯರಾಜ್ ಶೆಟ್ಟಿಯವರು ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಜೋವಿನ್ ಪ್ರಕಾಶ್‌ರವರು ಧನ್ಯವಾದವಿತ್ತರು.

ಜೋವಿನ್ ಪ್ರಕಾಶ್

ಮಕ್ತಾಪುರ ಗ್ರಾಮದಲ್ಲಿ ಉದ್ಯೋಗ ಖಾತ್ರಿ ಅಡಿಯಲ್ಲಿ ಕೆಲಸ ಪ್ರಾರಂಭ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ 26 ಮೇ 17ರಂದು ಯಾದಗಿರ ಜಿಲ್ಲೆಯ ಶಹಾಪುರ ತಾಲುಕ ಹೋತಪೇಠ ಗ್ರಾಂ.ಪಂ.ವ್ಯಾಪ್ತಿಯ ಮಕ್ತಾಪುರ ಗ್ರಾಮದಲ್ಲಿ ಕೆಲಸ ಪ್ರಾರಂಭಿಸಲಾಯಿತು. ಈ ಸಂರ್ಭದಲ್ಲಿ ಮಾತನಾಡಿದ ಕೂಲಿಕಾರ ಸಂಘದ ಜಿಲ್ಲಾಧ್ಯಕ್ಷ ದಾವಲಸಾಬ ನದಾಫ್ ಕೃಷಿ ಕೂಲಿಕಾರರು ವಲಸೆ ಹೋಗಬಾರದು ಸ್ಥಳಿಯವಾಗಿ ಸಿಗುವ ಕೆಲಸ ಮಹತ್ವಕಾಂಕ್ಷಿ ಯೋಜನೆ ಮ.ಗಾಂ. ರಾ.ಗ್ರಾ.ಉ.ಖಾ.ಯೋ. ಅಡಿಯಲ್ಲಿ ಕೆಲಸ ಮಾಡಬೇಕು. ಪ್ರಾಮಾಣಿಕವಾಗಿ ಕೆಲಸ ಮಾಡಬೇಕು.

ರೈತರ ಜಮೀನನಲ್ಲಿ ಜಲಸಂರಕ್ಷಣೆ ಮಾಡಿ ಭೂಮಿ ಸವಕಳಿ ತಡೆದು ಭೂಫಲವತ್ತತೆ ಕಾಪಾಡಬೇಕು ಎಂದು ದಾವಲಸಾಬ ನದಾಫ್ ಹೇಳಿದರು. ಈ ಸಂದರ್ಭದಲ್ಲಿ ಗ್ರಾಂ.ಪಂ. ಕೂಲಿ ಸಹಾಯಕ ಸಂಗಣ್ಣ ಮುಡಬುಳ ಕೂಲಿಕಾರ ಮುಖಂಡರಾದ ಶಂಕ್ರೆಪ್ಪ ದೋರನಳ್ಳಿ ಸಿಲಾರಸಾಬ ಚನ್ನಯ್ಯಸ್ವಾಮಿ ಮೀನಾಕ್ಷಿ ಹಿರೆಮಠ ಭಾಗವಹಿಸಿದ್ದರು.



‘ಬಿ.ಇ.ಎಂ.ಎಲ್. ಉಳಿಸಿ’ ಮುಷ್ಕರ : ಕೋಲಾರ್ ಬಂದ್


ಕೋಲಾರ

ಬಿ.ಇ.ಎಂ.ಎಲ್. ಕರ್ನಾಟಕದಲ್ಲಿರುವ ಮೂರು ಘಟಕಗಳು (ಕೆ.ಜಿ.ಎಫ್., ಬೆಂಗಳೂರು, ಮೈಸೂರು) ಖಾಸಗೀಕರಣದ ವಿರುದ್ಧ ಪ್ರತಿಭಟಿಸಿ ಮೇ 30 ರಂದು ಮುಷ್ಕರ ಹೂಡಿದ್ದು ಈ ಘಟಕಗಳು ಆ ದಿನ ಕೆಲಸ ಮಾಡಲಿಲ್ಲ.ಕೆ.ಜಿ.ಎಫ್.,ಘಟಕದಲ್ಲಿ ಮಾತ್ರ ಕೆಲವು ಅಧಿಕಾರಿಗಳು ಕೆಲಸಕ್ಕೆ ಹಾಜರಾಗಿದದು. ಕೇರಳದಲ್ಲಿರುವ ಒಂದು ಘಟಕದಲ್ಲೂ ಮುಷ್ಕರ ಸಫಲವಾಗಿದೆ ಎಂದು ವರದಿಯಾಗಿದೆ. ಎಲ್ಲಾ ಬಿ.ಇ.ಎಂ.ಎಲ್. ಘಟಕಗಳ ಕಾರ್ಮಿಕರು ಮೆರವಣಿಗೆ ನಡೆಸಿದರು.

ಅತಿ ದೊಡ್ಡ ಮತ್ತು ಮಾತ್ರ ಘಟಕ ಇರುವ ಕೋಲಾರದಲ್ಲಿ ಸಿಐಟಿಯು ಜಿಲ್ಲಾ ಸಮಿತಿಯ ಕರೆಯ ಮೇರೆಗೆ ಬಿ.ಇ.ಎಂ.ಎಲ್. ಖಾಸಗೀಕರಣ ವಿರೋಧಿಸಿ ಕೋಲಾರ ಬಂದ್ ಸಹ ಯಶಸ್ವಿಯಾಗಿದೆ. ಅಂಗಡಿ ಮುಂಗಟ್ಟುಗಳು ಮುಚ್ಚಿದ್ದಲ್ಲದೆ ಬಸ್ಸುಗಳು ಸಹ ಸಂಚರಿಸಲಿಲ್ಲ. ಬಂದ್ ಬೆಂಬಲಾರ್ಥ ಸಿಐಟಿಯು ಬೈಕ್ ರ್‍ಯಾಲಿ ನಡೆಸಿತು.



ಮೈಸೂರು

ನೇರ ನೇಮಕಾತಿಯನ್ನು ವಿರೋಧಿಸಿ ಹೊರಗುತ್ತಿಗೆ ನೌಕರರ ಸಂಘದ ಪ್ರತಿಭಟನಾ ಮನವಿ

ರಾಜ್ಯ ಹಾಸ್ಟೆಲ್ ಹಾಗೂ ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘ ಹಾವೇರಿ ಜಿಲ್ಲಾ ಘಟಕದ ನೇತೃತ್ವದಲ್ಲಿ ಇಂದು ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ವಿವಿಧ ಬೇಡಿಕೆಗಳ ಈಡೇರಿ-ಕೆಗಾಗಿ ಪ್ರತಿಭಟನೆ ನಡೆಸಿ ಹಾವೇರಿ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಹೊರಗುತ್ತಿಗೆ ನೌಕರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಮಾತನಾಡಿ, ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ ಡಿ-ವೃಂದದ 5000 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿಮಾಡುವ ಸರ್ಕಾರದ ಪ್ರಕಟಣೆಯನ್ನು ವಿರೋಧಿಸಲು ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಹಾಗೂ ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘವು ತೀರ್ಮಾನಿಸಿದ್ದು ಕೂಡಲೇ ರಾಜ್ಯಾದ್ಯಂತ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಬೇಕೆಂದು ಹೊರಗುತ್ತಿಗೆ ನೌಕರರಿಗೆ ಕರೆ ನೀಡಿದೆ ಎಂದರು.

ನೇರ ನೇಮಕಾತಿ ಮೂಲಕ 10ನೇ ತರಗತಿ ಪಾಸಾದವರನ್ನು ನೇಮಿಸುವ ಮೂಲಕ ಕಳೆದ ಹತ್ತಾರು ವರ್ಷಗಳಿಂದ ಆ ಹುದ್ದೆಗಳಲ್ಲಿ ಅತ್ಯಂತ ಕಡಿಮೆ ಸಂಬಳಕ್ಕೆ ದುಡಿಯುತ್ತಾ ಬಂದಿರುವ ಅಡುಗೆಯವರು, ಅಡುಗೆ ಸಹಾಯಕರು, ಕಾವಲುಗಾರರು, ಜವಾನರು, ಸ್ವಚ್ಛತಾ ಸಿಬ್ಬಂದಿ



ಮೊದಲಾದ ಹೊರಗುತ್ತಿಗೆ ನೌಕರರು ಕೆಲಸ ಕಳೆದು ಕೊಂಡು ಬೀದಿಪಾಲಾಗಲಿದ್ದಾರೆ, ಅಡುಗೆ ಮಾಡುವವರು 10ನೇ ತರಗತಿ ಪಾಸಾಗಿರಬೇಕೆಂದು ಷರತ್ತು ವಿಧಿಸುವುದು ಅಸಂಬದ್ಧವಾಗಿದೆ. ಆದ್ದ-ರಿಂದ ಬೆಳಗಾವಿಯಲ್ಲಿ ನಡೆದ ವಿಧಾನ ಮಂಡಲದ ಅಧಿವೇಶನದಲ್ಲಿ ಆಡಳಿತ ಪಕ್ಷದ ಶಾಸಕರನ್ನೂ ಒಳಗೊಂಡಂತೆ ಎಲ್ಲ ಶಾಸಕರು ಸರ್ಕಾರದ ಈ ನೇರ ನೇಮಕಾತಿ ಕ್ರಮವನ್ನು ವಿರೋಧಿಸಿದ್ದರು. ಈಗ 3ನೇ ಸಲ ಸರ್ಕಾರ ನೇರ ನೇಮಕಾತಿಗೆ ಮುಂದಾಗಿದೆ. ಹಾಲಿ ಹೊರಗುತ್ತಿಗೆ ನೌಕರರು ಹೆಚ್ಚಾಗಿ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದವರಾಗಿದ್ದಾರೆ. ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅವರಿಗೆ ಶೈಕ್ಷಣಿಕ ಅರ್ಹತೆ ಇಲ್ಲದಿದ್ದರೂ ಅನುಭವದ ಅರ್ಹತೆ ಇದೆ. ಆದ್ದ-ರಿಂದ ಹಾಲಿ ಹೊರಗುತ್ತಿಗೆ ನೌಕರರನ್ನೇ ಖಾಲಿ ಇರುವ ಹುದ್ದೆಗಳಲ್ಲಿ ಕಾಯಂ ಮಾಡಬೇಕೆಂದೂ ಅಲ್ಲಿಯ ವರೆಗೆ ಎಲ್ಲ ಹೊರಗುತ್ತಿಗೆ ನೌಕರರಿಗೆ ‘ಸಮಾನ ಕೆಲಸಕ್ಕೆ ಸಮಾನ ವೇತನ’ ನೀಡಬೇಕೆಂದು ನೌಕರರ ಸಂಘವು ಸರ್ಕಾರವನ್ನು ಒತ್ತಾಯಿಸುತ್ತದೆ. 10ನೇ ತರಗತಿ ಪಾಸಾಗಿರಬೇಕೆನ್ನುವ ಷರತ್ತಿನೊಂದಿಗೆ ನೇರ ನೇಮಕಾತಿ ಘೋಷಣೆ ಮಾಡಿರುವುದನ್ನು ವಾಪಸ್ ಪಡೆಯಬೇಕೆಂದು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಒತ್ತಾಯಿಸಿದರು.

ನೇರ ನೇಮಕಾತಿ ಕ್ರಮವನ್ನು ಕೈಬಿಟ್ಟು ಎಲ್ಲ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲೆ ಕಾಲೇಜುಗಳಲ್ಲಿ ಅನೇಕ ವರ್ಷಗಳಿಂದ ದುಡಿಯುತ್ತಾ ಬಂದಿರುವ ಡಿ-ವೃಂದದ ಹೊರಗುತ್ತಿಗೆ ನೌಕರರ ಸೇವೆಯನ್ನು ಕಾಯಂಗೊಳಿಸಬೇಕು, ಅಲ್ಲಿಯವರೆಗೆ ಎಲ್ಲ ಹೊರಗುತ್ತಿಗೆ ನೌಕರರಿಗೆ ‘ಸಮಾನ ಕೆಲಸಕ್ಕೆ ಸಮಾನ ವೇತನ’ ನೀಡಬೇಕು, ಹೊರಗುತ್ತಿಗೆ ನೌಕರರಿಗೆ ಅನ್ವಯವಾಗುವ ಪಿ.ಎಫ್., ಇಎಸ್ಐ, ರಜಾ ಸೌಲಭ್ಯ, ವರ್ಕ್ ಆರ್ಡರ್, ವೇತನ ಚೀಟಿ ಮುಂತಾದ ಕಾನೂನು ಸೌಲಭ್ಯಗಳನ್ನು ನೀಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘದ ಜಿಲ್ಲಾ ಅಧ್ಯಕ್ಷರಾದ ಎಚ್.ಎಚ್.ನದಾಫ, ಶಿವರಾಜ ಹಿತ್ತಲ್, ಶಾಂತಾ ಗಡ್ಡಿಯವರ, ಎಸ್‌ಎಫ್ಐ ಜಿಲ್ಲಾ ಅಧ್ಯಕ್ಷರಾದ ಸುಭಾಸ ಎಂ, ಹಾಗೂ ಹೊರಗುತ್ತಿಗೆ ನೌಕರರ ಸಂಘದ ಕಾರ್ಯಕರ್ತರು ಭಾಗವಹಿಸಿದ್ದರು.

ಸರ್ವರಿಗೂ ಶಿಕ್ಷಣ ಎನ್ನುವ ಸಂವಿಧಾನದ ಮೂಲ ಆಶ್ರಯ ಈಡೇರಲಿ – ಸುನಿಲ್ ಕುಮಾರ್ ಬಜಾಲ್



ದೇಶಕ್ಕೆ ಸ್ವಾತಂತ್ರ್ಯ ಲಭಿಸಿ 70 ವರ್ಷಗಳಾದರೂ ಈ ದೇಶದಲ್ಲಿ ಕಲಿಯುವ ಮನಸ್ಸಿಗೆ ಶಿಕ್ಷಣವನ್ನು, ದುಡಿಯುವ ಕೈಗೆ ಕೆಲಸವನ್ನು, ಪ್ರತಿಯೊಬ್ಬರಿಗೆ ಆರೋಗ್ಯವನ್ನು, ವಸತಿಯನ್ನು ನೀಡಲು ಇನ್ನೂ ಸಾಧ್ಯವಾಗಿಲ್ಲ. ಇಂತಹ ಸಂದರ್ಭದಲ್ಲಿ ನಮ್ಮನ್ನಾಳುವ ಸರಕಾರಗಳು ಶಿಕ್ಷಣ ಮತ್ತು ಉದ್ಯೋಗಕ್ಕೆ ಭಾರೀ ಪ್ರಾಮುಖ್ಯತೆಯನ್ನು ಕೊಡಬೇಕಾಗಿದೆ. ಮಾತ್ರವಲ್ಲದೆ ಸರ್ವರಿಗೂ ಶಿಕ್ಷಣ, ಸರ್ವರಿಗೂ ಉದ್ಯೋಗ ಎನ್ನುವ ಸಂವಿಧಾನದ ಮೂಲ ಆಶಯವನ್ನು ಈಡೇರಿಸಲು ಕಟಿಬದ್ಧರಾಗಬೇಕಾಗಿದೆ. ಇಂತಹ ಸಂದರ್ಭದಲ್ಲಿ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ಕೊಡುವ ನಿಟ್ಟಿನಲ್ಲಿ ಡಿವೈಎಫ್ಐ ಸಂಘಟನೆ ವರ್ಷಂಪ್ರತಿ ಮಾಡುವ ಪುಸ್ತಕ ವಿತರಣೆ ಮಾಡುವ ಕಾರ್ಯಕ್ರಮ ನಿಜಕ್ಕೂ ಶ್ಲಾಘನೀಯ ಕಾರ್ಯವಾಗಿದೆ ಎಂದು ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಉರ್ವಾಸ್ಟೋರ್ ಸುಂಕದಕಟ್ಟೆ ಪ್ರದೇಶದಲ್ಲಿ ಡಿವೈಎಫ್ಐ ಉರ್ವಾಸ್ಟೋರ್ ಘಟಕ ಆಯೋಜಿಸಿದ ಶಾಲಾ ಬಡ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಿವೈಎಫ್ಐ ಉರ್ವಾಸ್ಟೋರ್ ಘಟಕದ ಅಧ್ಯಕ್ಷರಾದ ಇಕ್ಬಾಲ್ ವಹಿಸಿದರು. ಮುಖ್ಯ ಅತಿಥಿಗಳಾಗಿ ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಸಮಿತಿ ಮುಖಂಡರಾದ ಸಂತೋಷ್ ನೀತಿನಗರ, ಡಿವೈಎಫ್ಐ ಜಿಲ್ಲಾ ಸಮಿತಿ ಮುಖಂಡರಾದ ನವೀನ್ ಬೊಲ್ಪುಗುಡ್ಡೆ ಭಾಗವಹಿಸಿದ್ದರು. ಹಾಗೆಯೇ ಅತಿಥಿಗಳಾಗಿ ಊರಿನ ಹಿರಿಯ ನಾಗರಿಕರಾದ ಪುಷ್ಪ ಶೆಟ್ಟಿ, ಗಂಗಾಧರ್ ಕುಂದರ್, ಸರೋಜ, ಸುಂದರಿ ಭಾಗವಹಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಡಿವೈಎಫ್ಐ ಉರ್ವಾಸ್ಟೋರ್ ಘಟಕದ ಕಾರ್ಯದರ್ಶಿ ಧನರಾಜ್ ಮಾಡಿದರು. ಕಾರ್ಯಕ್ರಮದ ನೇತೃತ್ವವನ್ನು ಸ್ಥಳೀಯ ಮುಖಂಡರುಗಳಾದ ಪ್ರಶಾಂತ್ ಎಂ. ಬಿ, ಮನೋಜ್, ನಾಗೇಂದ್ರ, ಅನಿಲ್, ಪ್ರಾಶಾಂತ್ ಆಚಾರ್, ಪ್ರದೀಪ್ ಮುಂತಾದವರು ವಹಿಸಿದ್ದರು.



ಬಿಸಿ ಊಟದ ಯೋಜನೆಗೆ ಅನುದಾನ ಕಡಿತ ಮಾಡಿದ ಕೇಂದ್ರ ಸರಕಾರದ ನೀತಿ ಖಂಡಿಸಿ ಪ್ರತಿಭಟನೆ

ಸುಪ್ರೀಂಕೋರ್ಟಿನ ಆದೇಶದಂತೆ ದೇಶದಲ್ಲಿ ಪ್ರಾರಂಭವಾದ ಬಿಸಿ ಊಟದ ಯೋಜನೆ ಪ್ರಾರಂಭವಾಗಿ ಜನಪ್ರೀಯ ಯೋಜನೆಯಾಗಿ ಹೊರಹೊಮ್ಮಿದೆ.

ರಾಜ್ಯದಲ್ಲಿ 2001-02 ರಲ್ಲಿ ಪ್ರಾರಂಭವಾದಾಗ ಈ ಯೋಜನೆಯಡಿ ಸುಮಾರು 1 ಲಕ್ಷ 20 ಸಾವಿರ ಬಡ, ದಲಿತ, ವಿಧವೆ ಮಹಿಳೆಯರಿಗೆ ಉದ್ಯೋಗ ಸಿಕ್ಕು ಸಾಮಾಜಿಕ ನ್ಯಾಯ ಎತ್ತಿ ಹಿಡಿಯಲು ಸಾಧ್ಯವಾಗಿದೆ. ಅದಲ್ಲಿದೆ ಶಾಲೆಯಲ್ಲಿ ಎಲ್ಲ ಜಾತಿಯ ಮಕ್ಕಳು ಒಂದೇ ಕಡೆ ಕುಳಿತು ಬಿಸಿ ಊಟ ಮಾಡುವ ಮೂಲಕ ಶಾಲಾ ಹಂತದಲ್ಲಿಯೇ ಜಾತಿ-ತಾರತಮ್ಯ ಹೋಗಲಾಡಿಸುವಲ್ಲಿ ಗಣನೀಯ ಪ್ರಯತ್ನ ಮಾಡಿದೆ.

ಬಿಸಿ ಊಟದ ಯೋಜನೆ ಪ್ರಾರಂಭವಾಗಿ 16 ವರ್ಷ ಕಳೆದರೂ ಯೋಜನೆಯಲ್ಲಿ ಕೆಲಸ ಮಾಡುತ್ತಿರುವ ಬಡ, ದಲಿತ, ವಿಧವಾ ಹೆಣ್ಣು ಮಕ್ಕಳಿಗೆ ಕೇವಲ 2000 ರೂ ದಲ್ಲಿ ದುಡಿಸಿಕೊಳ್ಳುತ್ತಿರುವ ಸರಕಾರಗಳ ನೀತಿ ನಿಜವಾಗಿ ಅಮಾನುಷ ಎಂದು ಜಿಲ್ಲಾ ಪಂಚಾಯತ ಕಛೇರಿ ಮುಂದೆ ನಡೆದ ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಜಿಲ್ಲೆಯ ಮುಂಖಡರಾದ ಗೈಬು ಜೈನೆಖಾನ, ವಿ.ಪಿ.ಕುಲಕರ್ಣಿರವರು ಸರಕಾರಗಳ ನೀತಿ ಖಂಡಿಸಿದರು.

ಯೋಜನೆಯನ್ನು ಬಲಿಷ್ಠ ಮಾಡುವ ಬದಲು ಅನುದಾನವನ್ನು ಕಡಿತ ಮಾಡಿ ಯೋಜನೆಯನ್ನು ಬಲಹೀನ ಮಾಡಲು ಹೊರಟಿರುವ ಕೇಂದ್ರ ಸರಕಾರದ ನೀತಿ ಸರಿಅಲ್ಲ. ಕೂಡಲೇ ಕಡಿತ ಮಾಡಿದ ಅನುದಾನ ವಾಪಸ್ಸಾಗಬೇಕು, ಬಿಸಿಊಟದ ಯೋಜನೆಯಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರಿಗೆ ಕೆಲಸದ ಭದ್ರತೆ ನೀಡಬೇಕು.ಶಿಕ್ಷಣ ಇಲಾಖೆ ಶಿಫಾರಸ್ಸು ಮಾಡಿರುವ ರೂ 4000 ವೇತನ ಜಾರಿ ಮಾಡಬೇಕೆಂದು ಪ್ರತಿಬಟನಾಕಾರರು ಒತ್ತಾಯಿಸಿ ಜಿಲ್ಲಾ ಪಂಚಾಯತಿನ ಸಿಇಒ ರವರ ಮೂಲಕ ಸರಕಾರಕ್ಕೆ ಮನವಿ ಅರ್ಪಿಸಿದರು.

ಬೆಳಗಾವಿ ಅಂಬೇಡ್ಕರ ಗಾರ್ಡನನಿಂದ ಹೊರಟ ಮೆರವಣಿಗೆ ಪ್ರಮುಖ ಬೀದಿಗಳಿಂದ ನಡೆದು ಜಿಲ್ಲಾ ಪಂಚಾಯತ ಆವರಣದಲ್ಲಿ ಸಮಾವೇಶಗೊಂಡಿತು.

ಮುಖಂಡರಾದ ಎಲ್.ಎಸ್.ನಾಯ್ಕ,ಸುಮತಿ ಕೊಲ್ಲಾಪೂರೆ, ಶಾಂತಾ ಗೊರವನಕೊಳ್ಳ, ವೆಂಕವ್ವ ಖಾನಟ್ಟಿ, ಶಕುಂತಲಾ ಉರಣಿ, ಟಿ.ಎ. ಬಬಗೌಡ, ಭಾರತಿ ಜೋಗನ್ನವರ, ಸುನಿತಾ ಆವಟೆ ಮತ್ತು ಲಕ್ಷ್ಮೀ ಪಾಟೀಲ ಮುಂತಾದವರು ಇದ್ದರು.

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

ನೀರಗುಳ್ಳೆ ಒಡೆಯಲು ಇನ್ನೆಷ್ಟು ಕಾಲ?

ಬಣ್ಣಬಣ್ಣದ ನೀರ ಗುಳ್ಳೆಯು ಒಡೆದು ಹೋಗುವ ಕಾಲ ಬಂದಿದೆ. ಒಟ್ಟಾರೆ ಐ.ಟಿ ಇಂಜಿನಿಯರಿಂಗ್ ಕ್ಷೇತ್ರದಲ್ಲಿ 6 ಲಕ್ಷದಷ್ಟು ಕೆಲಸಗಳು ಕಳೆದು ಹೋಗಲಿವೆಯೆಂದು ಅಧಿಕೃತವಾಗಿ ಹೇಳಲಾಗಿದೆ. ಆದರೆ ಕೆಲವು ದಿನಗಳಿಂದ ಲಭ್ಯವಾಗುತ್ತಿರುವ ವಿದೇಶೀ ಮೂಲದ ಸಂಸ್ಥೆಗಳ ಪ್ರಕಾರ ಇದು 60 ಲಕ್ಷವಾಗಬಹುದಾಗಿದೆ. ಮೋದಿಯವರ "ಮೇಕ್ ಇನ್ ಇಂಡಿಯಾ" ಎನ್ನುವುದು ದೇವರ ವಾಕ್ಯದಂತೆ ನಿಜವಾಗಿಬಿಟ್ಟಿದೆ. ಇನ್ನು ನಮ್ಮ ಯುವ ತಂತ್ರಜ್ಞಾನಿಗಳು ಏನು ಮಾಡಿದರೂ ಇಂಡಿಯಾದಲ್ಲೇ ಮಾಡಬೇಕು! ಆತ್ಮಹತ್ಯೆಯನ್ನು ಕೂಡಾ! ಏಕೆಂದರೆ ನೆರೆದೇಶದ ಜೊತೆಗೆ ಯುದ್ಧದ ಆಟದಲ್ಲಿ ತೊಡಗಿರುವ ನಮ್ಮ ಸರಕಾರಗಳು ಉದ್ಯೋಗಗಳನ್ನು ಸೃಷ್ಟಿಸಿಯೇ ಇಲ್ಲ.

ಜಾಗತೀಕರಣದ ಸಮರ್ಥಕರು ಹಲವಾರು ದಶಕಗಳಿಂದ ಅದರ ಅದ್ಭುತವಾದ ಶಕ್ತಿಯ ಬಗ್ಗೆ, ಜಗತ್ತನ್ನೇ ಬದಲಾಯಿಸುವ ಅದರ ಸಾಮರ್ಥ್ಯದ ಬಗ್ಗೆ ಕೀರ್ತನೆಗಳನ್ನು ಹಾಡುತ್ತಲೇ ಬಂದಿದ್ದಾರೆ. ಅಷ್ಟು ಮಾತ್ರವಲ್ಲ. ಇಂದಿನ ಚರಿತ್ರೆಯಲ್ಲಿ ಅದಕ್ಕೆ ಪರ್ಯಾಯವೇ ಇಲ್ಲವೆಂದು ತ್ರಿಕಾಲಜ್ಞಾನಿಗಳಾದ ಪ್ರವಾದಿಗಳಂತೆ ಘೋಷಿಸುತ್ತಲೇ ಬಂದಿದ್ದಾರೆ. ಅಮೇರಿಕಾದಲ್ಲಿ ಕೆಲವು ವರ್ಷಗಳ ಹಿಂದೆ ಯಾವ ಭದ್ರತೆಯೂ ಇಲ್ಲದೆ ಎರ್ರಾಬಿರ್ರಿ ಗೃಹಸಾಲಗಳನ್ನು ಕೊಟ್ಟಿದ್ದರಿಂದ ಆರಂಭವಾದ ಬಿಕ್ಕಟ್ಟು ಆಗಾಧವಾಗಿ ಬೆಳೆಯಿತು. ಅಮೇರಿಕದ ಆರ್ಥಿಕತೆ ಕುಸಿದು ಇನ್ನೇನು ಮತ್ತೊಮ್ಮೆ 1930ರ ದಶಕದ ಹಿಂಜರಿತದ ಸ್ಥಿತಿ ಬರುತ್ತದೆಯೆನ್ನುವ ಭೀತಿಯೂ ಉಂಟಾಗಿ–ತ್ತು. ಆಗ ಮುಕ್ತ ಮಾರುಕಟ್ಟೆ ಮತ್ತು ಸರಕಾರದ ಹಸ್ತಕ್ಷೇಪದಿಂದ ಸ್ವಾತಂತ್ರ್ಯಗಳ ತಮ್ಮ ಆರಾಧನೆಯನ್ನು ಬದಿಗಿಟ್ಟು ಅಮೇರಿಕದ ಕಾರ್ಪೊರೇಟ್ ಕಂಪನಿಗಳು ಸರಕಾರದ ಸಹಕಾರ, ಬೆಂಬಲವನ್ನು ಕೇಳಿದವು. ಇದನ್ನು ಕೇಳಲು ಈ ಕಂಪನಿಗಳ ಸಿ.ಇ.ಓ. ಗಳು ಖಾಸಗಿ ಚಾರ್ಟರ್ಡ್ ಜೆಟ್ ವಿಮಾನಗಳಲ್ಲಿ ಬಂದರು! ಆಧುನಿಕ ಇತಿಹಾಸದಲ್ಲಿ ಇಂಥ ವಿ.ಐ.ಪಿ. ಭಿಕ್ಷುಕರನ್ನು ಕಂಡಿದ್ದು ಇದೇ ಮೊದಲು. ಅಂತೂ ಇಂತೂ ಬಿಕ್ಕಟ್ಟಿನಿಂದ ಬಿಕ್ಕಟ್ಟಿಗೆ ಜಾಗತೀಕರಣದ ಅರ್ಥವ್ಯವಸ್ಥೆ ಸಾಗುತ್ತಲಿದೆ.

ಬಾಬ್ರಿ ಮಸೀದಿಯ ಧ್ವಂಸಕ್ಕೆ ತನ್ನ ನಿರ್ಲಕ್ಷ್ಯದಿಂದ ಕಾರಣರಾದ ಪ್ರಧಾನಿ ಪಿ.ವಿ. ನರಸಿಂಹ ರಾವ್ ಮತ್ತು ವಿಶ್ವಬ್ಯಾಂಕ್‌ನ ಅಧಿಕಾರಿಯಾಗಿದ್ದ ಮನಮೋಹನ್ ಸಿಂಗ್ ಅವರು ಭಾರತದಲ್ಲಿ ನವಉದಾರವಾದಿ ಆರ್ಥಿಕ ನೀತಿಗಳನ್ನು ಕಾರ್ಯರೂಪಕ್ಕೆ ತಂದಮೇಲೆ ಅದರ ಪ್ರಯೋಜನವನ್ನು ಪಡೆದದ್ದು ನಮ್ಮ ಮಧ್ಯಮ ವರ್ಗ. ಅದಕ್ಕೆ ಬಲಬಂದಿದ್ದು ಮಾಹಿತಿ ತಂತ್ರಜ್ಞಾನದಿಂದ. ಹೀಗಾಗಿ ಐ.ಟಿ. ಪರ್ವವೊಂದು ಬಹುಭರಾಟೆಯಿಂದ ಆರಂಭವಾಯಿತು. ಭಾರತದ್ದು ಅತ್ಯಂತ ವೇಗವಾಗಿ ಬೆಳೆಯುವ ಅರ್ಥವ್ಯವಸ್ಥೆಯೆನ್ನುವುದು ನಮ್ಮ ರಾಷ್ಟ್ರಗೀತೆಯಾಯಿತು. ಇದನ್ನು ಬಲಪಂಥೀಯ ರಾಜಕಾರಣವು ನವ ಹಿಂದೂ ಭಾರತದ ಪುನರುತ್ಥಾನದ ತನ್ನ ಸಿದ್ಧಾಂತಕ್ಕೆ ಬಳಸಿಕೊಂಡಿತು. ಅಮೇರಿಕವು ನಮ್ಮ ಕಾಲಡಿಯಲ್ಲಿದೆಯೆನ್ನುವ ಹಾಗೆ ನಾವು ವರ್ತಿಸತೊಡಗಿದೆವು. ಭಾರತದ ಬೃಹತ್ ಮಧ್ಯಮವರ್ಗವು ತನ್ನ ಎಲ್ಲಾ ಮಕ್ಕಳನ್ನು ಸೈಬರ್ ಕಾರ್ಮಿಕರನ್ನಾಗಿ ಮಾಡಿ ಅಮೇರಿಕೆಗೆ ಕಡಿಮೆ ಬೆಲೆಯಲ್ಲಿ ರಫ್ತು ಮಾಡತೊಡಗಿತು. ಸಣ್ಣದಾಗಿ ಶುರುವಾದ ಬಣ್ಣಬಣ್ಣದ ನೀರಗುಳ್ಳೆಯೊಂದು ಬೃಹತ್ತಾಗಿ ಬೆಳೆದು ನಿಂತು, ನಾವು ಸಾಮಾಜಿಕ ನ್ಯಾಯ, ಜಾತಿವ್ಯವಸ್ಥೆ ಇವೆಲ್ಲವುಗಳನ್ನು ಮರೆತು ಪ್ರಗತಿಯ ಹುನ್ನಾರದಲ್ಲಿ ಭಾಗಿಯಾದೆವು. ನಮ್ಮ ಮಾಧ್ಯಮಗಳಂತೂ ರಾಷ್ಟ್ರದ ಪ್ರಗತಿಯ ತುತ್ತೂರಿಯನ್ನು ಊದಿ ಊದಿ ಏದುಸಿರು ಬಿಡತೊಡಗಿದವು.

ಈ ಮಧ್ಯ ನಾವು ಅತ್ಯಂತ ಬಹುಮತದಿಂದ ಆರಿಸಿದ ಪ್ರಧಾನ ಮಂತ್ರಿಯ ದೊಡ್ಡಣ್ಣನಂತಿರುವ ಟ್ರಂಪ್ ಎನ್ನುವ ವ್ಯಕ್ತಿ ಅಮೇರಿಕಾದ ಅಧ್ಯಕ್ಷನಾಗಿ ಚುನಾಯಿತನಾಗಿಬಿಟ್ಟ. ಅವನ ಗೆಲುವಿಗಾಗಿ ಎನ್.ಆರ್.ಐ ಗಳು, ಹಿಂದೂ ಸಂಸ್ಥೆಗಳು ಶ್ರಮಿಸಿದ್ದವು. ಆದರೆ ಟ್ರಂಪ್ ಮಾಡಿದ ಮೊದಲ ಕೆಲಸವೆಂದರೆ ಭಾರತದ ಕಂಪನಿಗಳು ತಮ್ಮ ನೌಕರರಿಗಾಗಿ ಬಳಸುತ್ತಿದ್ದ ಎಚ್1ಬಿ ವೀಸಾಗಳ ಮೇಲೆ ಭಾರೀ ಕಡಿತವನ್ನು ಹೇರಿದ್ದು. ಟ್ರಂಪ್‌ನ ಬಲಪಂಥೀಯ ಸಿದ್ಧಾಂತದ ಪ್ರಕಾರ ಈ ಕಂಪನಿಗಳು ಅಮೇರಿಕನ್ ಪ್ರಜೆಗಳ ಉದ್ಯೋಗಗಳನ್ನು ಕಸಿದುಕೊಂಡು ಭಾರತೀಯರಿಗೆ ಕೊಡುತ್ತಿವೆ. ಹೀಗಾಗಿ "ಪರಕೀಯ"ರನ್ನು ಹೊರಗೆ ಹಾಕುವುದೇ ಅಮೇರಿಕನ್ ರಾಷ್ಟ್ರಪ್ರೇಮವಾಗಿದೆ. ಟ್ರಂಪ್‌ನ ಹಟಮಾರಿ ಧೋರಣೆಯನ್ನು ನೋಡಿ ಬೆದರಿದ ನಮ್ಮ ಕಾರ್ಪೋರೇಟ್ ಸಂಸ್ಥೆಗಳು ತಕ್ಷಣವೇ ತಾವು ಅಮೇರಿಕನ್ ಪ್ರಜೆಗಳಿಗೇ ತರಬೇತಿ ನೀಡಿ ಕೆಲಸಕ್ಕೆ ತೆಗೆದುಕೊಳ್ಳುತ್ತೇವೆ ಎಂದು ಪ್ರಮಾಣ ಮಾಡಿ ಹೇಳಿದವು. ಇದನ್ನು ಮಾಡಿದ ಮೊದಲ ಕಂಪನಿಯೆಂದರೆ ಇನ್ಫೋಸಿಸ್ ಸಂಸ್ಥೆ. ಆನಂತರ ಇತರ ಕಂಪನಿಗಳೂ ಇದನ್ನೇ ಮಾಡಿದವು. ಯಾವುದೇ ಭಾರತೀಯ ಕಂಪನಿಯು ಇಂಥ ಕ್ರಮದಿಂದಾಗಿ ಭಾರತೀಯ ಯುವಜನಾಂಗದ ಭವಿಷ್ಯದ ಮೇಲೆ ಆಗುವ ಪರಿಣಾಮದ ಬಗ್ಗೆ ಒಂದು ಪದವನ್ನೂ ಮಾತನಾಡಲಿಲ್ಲ. ಇದು ಎಂಥಾ ಮಹಾದ್ರೋಹವೆಂದು ನಮ್ಮ ಜನರಿಗೂ ಅರ್ಥವಾಗಿಲ್ಲ. ಈ ಎಲ್ಲಾ ಕಾರ್ಪೊರೇಟ್ ಸಂಸ್ಥೆಗಳಿಗೆ ಭಾರತದ ಸರಕಾರಗಳು ಕೊಟ್ಟಿರುವ ಕರದ ರಿಯಾಯಿತಿ, ಭೂಮಿ, ಇತರ ಸೌಲಭ್ಯಗಳು ಇವುಗಳನ್ನು ಲೆಕ್ಕ ಹಾಕಿದರೆ ಅದರ ಮೊತ್ತವನ್ನು ಅಳೆಯುವ ಸಂಖ್ಯೆಗಳಿಗೇ ಕಷ್ಟವಾಗಬಹುದು! ಅಷ್ಟು ಮಾತ್ರವಲ್ಲ ಈ ಕಂಪನಿಗಳ ಒಡೆಯರನ್ನು ಮತ್ತು ಸಿ.ಇ.ಓ. ಗಳನ್ನು ಥ್ರೀ ಪೀಸ್ ಸೂಟ್‌ನಲ್ಲಿರುವ ದೇವರುಗಳಂತೆ ಪೂಜಿಸಲಾಯಿತು. ಸತ್ಯವು ಸರಳವಾಗಿದೆ. ನಮ್ಮ ಎಲ್ಲಾ ಪಕ್ಷಗಳ ಎಲ್ಲಾ ರಾಜಕಾರಣಿಗಳೂ ಚಾಯ್ ವಾಲಾಗಳೇ– ಕಾರ್ಪೊರೇಟ್ ಕಂಪನಿಗಳ ಚಾಯ್‌ವಾಲಾಗಳು.



ಅಮೇರಿಕದ ನಂತರ ಯುರೋಪಿನ ಬಹುಪಾಲು ರಾಷ್ಟ್ರಗಳು ಟ್ರಂಪ್‌ನ ಧೋರಣೆಯನ್ನೇ ಅನುಸರಿಸುತ್ತಿವೆ. ವಲಸಿಗರ ವೀಸಾಗಳನ್ನು ಕಡಿತಗೊಳಿಸಿವೆ. ಇದರಿಂದಾಗಿ ಒಟ್ಟಾರೆ ಐ.ಟಿ ಇಂಜಿನಿಯರಿಂಗ್ ಕ್ಷೇತ್ರದಲ್ಲಿ 6 ಲಕ್ಷದಷ್ಟು ಕೆಲಸಗಳು ಕಳೆದು ಹೋಗಲಿವೆಯೆಂದು ಅಧಿಕೃತವಾಗಿ ಹೇಳಲಾಗಿದೆ. ಆದರೆ ಕೆಲವು ದಿನಗಳಿಂದ ಲಭ್ಯವಾಗುತ್ತಿರುವ ವಿದೇಶೀ ಮೂಲದ ಸಂಸ್ಥೆಗಳ ಪ್ರಕಾರ ಇದು 60 ಲಕ್ಷವಾಗಬಹುದಾಗಿದೆ. ಇಂಥ ಅಪಾರ ಸಂಖ್ಯೆಗೆ ಕಾರಣವೆಂದರೆ ಬಹುಪಾಲು ಕೆಲಸಗಳನ್ನು ಅಟೋಮೇಶನ್ ಮೂಲಕ ಮಾಡುವ ತಂತ್ರಜ್ಞಾನಗಳನ್ನು ಕಾರ್ಪೊರೇಟ್ ಕಂಪನಿಗಳು ಅಳವಡಿಸಿಕೊಳ್ಳುತ್ತಿವೆ. ಮೋದಿಯವರ "ಮೇಕ್ ಇನ್ ಇಂಡಿಯಾ" ಎನ್ನುವುದು ದೇವರ ವಾಕ್ಯದಂತೆ ನಿಜವಾಗಿಬಿಟ್ಟಿದೆ. ಇನ್ನು ನಮ್ಮ ಯುವ ತಂತ್ರಜ್ಞಾನಿಗಳು ಏನು ಮಾಡಿದರೂ ಇಂಡಿಯಾದಲ್ಲೇ ಮಾಡಬೇಕು! ಆತ್ಮಹತ್ಯೆಯನ್ನು ಕೂಡಾ! ಏಕೆಂದರೆ ನೆರೆದೇಶದ ಜೊತೆಗೆ ಯುದ್ಧದ ಆಟದಲ್ಲಿ ತೊಡಗಿರುವ ನಮ್ಮ ಸರಕಾರಗಳು ಉದ್ಯೋಗಗಳನ್ನು ಸೃಷ್ಟಿಸಿಯೇ ಇಲ್ಲ.

ಹುಸಿ ರಾಷ್ಟ್ರವಾದದ ಹುರುಪಿನಲ್ಲಿ, ಪ್ರಗತಿಯ ಭ್ರಮೆಯಲ್ಲಿ ಎಷ್ಟು ದಿನ ಬದುಕಬಹುದು? ಇತ್ತ ಕೃಷಿಯನ್ನೂ ಕೈ ಬಿಟ್ಟು, ಅತ್ತ ಇತರ ಉದ್ದಿಮೆಗಳನ್ನು ಕೈ ಬಿಟ್ಟು ಐ.ಟಿ ಅಮಲಿನಲ್ಲಿರುವ ಈ ದೇಶ ಎಚ್ಚೆತ್ತುಕೊಳ್ಳುವವರೆಗೆ ಅನಾಹುತಗಳು ಆಗಿಬಿಟ್ಟಿರುತ್ತವೆ.

ಬಣ್ಣಬಣ್ಣದ ನೀರ ಗುಳ್ಳೆಯು ಒಡೆದು ಹೋಗುವ ಕಾಲಬಂದಿದೆ. ಆದರೆ ಬಾಯಿಬಿಟ್ಟರೆ ಸುಳ್ಳು ಹೇಳುವುದಕ್ಕಾಗಿ ಮಾತ್ರ ಎಂದು ಆಣೆಮಾಡಿರುವ ನಮ್ಮ ಮಂತ್ರಿಗಳು, ರಾಜಕೀಯ ಧುರೀಣರು ಬಣ್ಣದ ನೀರಗುಳ್ಳೆ ಶಾಶ್ವತವೆಂದು ಹೇಳುತ್ತಿದ್ದಾರೆ. ಮಂತ್ರಿ ರವಿಶಂಕರ್ ಪ್ರಸಾದ್ ಅವರ ಪ್ರಕಾರ ಲಕ್ಷಗಟ್ಟಲೇ ಉದ್ಯೋಗಗಳು ಐ.ಟಿ ಕ್ಷೇತ್ರದಲ್ಲಿ ಸೃಷ್ಟಿಯಾಗಲಿವೆಯಂತೆ. ನನ್ನ ಊಹೆಯ ಪ್ರಕಾರ ಇವು ಚಂದ್ರಗ್ರಹದ ಮೇಲೆಯೇ ಸೃಷ್ಟಿಯಾಗುತ್ತವೆ.



ರಾಜಾಸ್ತಾನ ಹೈಕೋರ್ಟಿನ ಅರುಳು ಮರುಳು ನ್ಯಾಯಾಧೀಶ ಗಿರಾಕಿಯೊಂದು ಹಸುವನ್ನು ರಾಷ್ಟ್ರ ಪ್ರಾಣಿ ಅಂತ ಘೋಷಿಸಬೇಕೆಂದು ಕೇಂದ್ರ ಸರ್ಕಾರವನ್ನ ಒತ್ತಾಯಿಸಿದೆ. ಈ ನ್ಯಾಯಾಧೀಶರ ಪ್ರಕಾರ ಹೆಣ್ಣು ನವಿಲು ಗರ್ಭ ಧರಿಸೋಕೆ ಗಂಡು ನವಿಲಿನ ಜೊತೆ ಸೆಕ್ಸ್ ಮಾಡೋದಿಲ್ವಂತೆ. ಬದಲಾಗಿ ಗಂಡು ನವಿಲಿನ ಕಣ್ಣೀರನ್ನು ಕುಡಿದು ಪ್ರಗ್ನೆಂಟ್ ಆಗುತ್ತಂತೆ. ಅದಕ್ಕೇ ನೇಪಾಳದೋರು ನವಿಲನ್ನ ರಾಷ್ಟ್ರ ಪಕ್ಷಿ ಮಾಡ್ಕೊಂಡಿದಾರಂತೆ. ಮಿನಿಮಂಲೆವೆಲ್ ಐ.ಕ್ಯೂ, ಜನರಲ್ ನಾಲೆಡ್ಜ್, ಕಾಮನ್ಸೆನ್ಸ್ ಇಲ್ಲದೋರೆಲ್ಲ ಜಡ್ಜುಗಳು ಈ ದೇಶದೊಳಗೆ.

ಅಂದಂಗೆ, ಈ ಪುಣ್ಯಾತ್ಮನ ಹೆಸರು, ಮಹೇಶ ಚಂದ್ರ ಶರ್ಮ.

– ಟಿ.ಕೆ.ದಯಾನಂದ

ಹಸು ಆಮ್ಲಜನಕ ಸೇವಿಸಿ ಆಮ್ಲಜನಕವನ್ನೇ ಹೊರಸೂಸುತ್ತದೆಯೋ ಗೊತ್ತಿಲ್ಲ, ಆದರೆ ಕೆಲವು ನ್ಯಾಯಾಧೀಶರು ಸಂವಿಧಾನವನ್ನು ಸೇವಿಸಿ, ಮನು ಶಾಸ್ತ್ರವನ್ನು ಹೊರಬಿಡುತ್ತಿರೋದಂತೂ ಸತ್ಯ. ಗೋವು ರಾಷ್ಟ್ರೀಯ ಪ್ರಾಣಿಯಾಕಾಗಬೇಕು ಎನ್ನೋದಕ್ಕೆ ರಾಜಸ್ತಾನದ ಹೈಕೋರ್ಟ್ ನ್ಯಾಯಾಧೀಶ ಮಹೇಶ ಚಂದ್ರ ಶರ್ಮ ಎಂಬಾತ ನೀಡಿದ ಕಾರಣ ಇಲ್ಲಿದೆ. ಎರಡೂ ಲಿಂಕ್ ಗಳನ್ನೂ ಕ್ಲಿಕ್ ಮಾಡಿ ಓದಿರಿ. ಎದೆಗಟ್ಟಿ ಮಾಡಿಕೊಳ್ಳಿ.

– ಬಿ.ಎಂ. ಬಶೀರ್

ಕೇಳಿಸಿದ್ದು

ಕಸಾಯಿಖಾನೆಗೆ ಹೋದ ದನದ ಅರ್ಧಪಾಲು ಮಾತ್ರ ಆಹಾರಕ್ಕೆ, ಇನ್ನರ್ಧ ಭಾಗ ನಮ್ಮನಿಮ್ಮೆಲ್ಲರ ಬಳಕೆಗೆ...

ಹೀಗೆ ರಸ್ತೆ, ರಸ್ತೆಯ ಮೇಲಿನ ಚಕ್ರ, ಚಕ್ರವನ್ನು ನಿಯಂತ್ರಿಸುವ ಬ್ರೇಕ್, ಬ್ರೇಕನ್ನು ಆಗಾಗ ಒತ್ತುವ ನಿಮ್ಮ ಕಾಲಿನ ಪಾದರಕ್ಷೆ, ಡ್ರೈವರ್ ಸೀಟಿನ ಮೆತ್ತೆ ಎಲ್ಲವೂ ಗೋ–ಮಯ.

ಚರ್ಮದ ಸೋಫಾ ಮೇಲೆ ಕೂರುವ ಬದಲು ಸಾದಾ ಕುರ್ಚಿಯ ಮೇಲೆ ಕೂರಲು ಹೊರಟರೆ ಅಲ್ಲೂ ನೀವು ದನಕ್ಕೆ ಅಂಟಿಕೊಳ್ಳುತ್ತೀರಿ. ಏಕೆಂದರೆ ಕುರ್ಚಿಗೆ ಬಳಸಿದ ಕಟ್ಟಿಗೆಪುಡಿಯ ಹಲಗೆಯ ಮೇಲೆ ಹೊಳಪಿನ ಪ್ಲೈವುಡ್ ಹಾಳೆಯನ್ನು ಅಂಟಿಸಿರುತ್ತಾರಲ್ಲ, ಅಲ್ಲಿ ದನಗಳ ರಕ್ತದ ಒಣಪುಡಿಯ ಗೋಂದನ್ನೇ ಬಳಸಿರುತ್ತಾರೆ. ಕುರ್ಚಿ ಬೇಡ, ನೆಲಕ್ಕೆ ಕೂತೇ ಊಟ ಮಾಡುತ್ತೇನೆಂದರೆ ಆಹಾರ ಉತ್ಪಾದನೆಗೆ ಬಳಸಿದ ಬಹುಪಾಲು ರಸಗೊಬ್ಬರದಲ್ಲಿ ದನದ ರಕ್ತದ ಪುಡಿಯನ್ನು ಸಾರಜನಕ ಸಂವರ್ಧನೆಗೆಂದು ಸೇರಿಸಿರುತ್ತಾರೆ. ಇನ್ನು ಕ್ಯಾಲ್ಸಿಯಂ ಮತ್ತು ರಂಜಕದಂಥ ಸಸ್ಯ ಪೋಷಕ ದ್ರವ್ಯಗಳನ್ನು ದನದ ಮೂಳೆಪುಡಿಯಿಂದ ಸಂಗ್ರಹಿಸಲಾಗುತ್ತದೆ. ಕೃಷಿ ಕೆಲಸದಲ್ಲಿ ದುಡಿಮೆ ಮಾಡುವ ಮಹಿಳೆ ರಕ್ತಹೀನತೆಯಿಂದ ಬಳಲುತ್ತಿದ್ದರೆ ಸರ್ಕಾರ ಉಚಿತವಾಗಿ ಆಕೆಗೆ ವಿತರಿಸುವ ಐರನ್ ಮಾತ್ರೆಗಳಲ್ಲೂ ದನದ ರಕ್ತದಿಂದ ತೆಗೆದ ಕಬ್ಬಿಣದ ಅಂಶವೇ ಇರುತ್ತದೆ.

ವಧೆಗೆಂದು ಬಂದ ಪ್ರತಿ ದನದಿಂದಲೂ ಹೆಚ್ಚೆಂದರೆ ಅರ್ಧ ಭಾಗ ಮಾತ್ರ ಆಹಾರಕ್ಕೆ ಬಳಕೆಯಾಗುತ್ತದೆ. ಇನ್ನರ್ಧ ಭಾಗವನ್ನು ಬೇರೆ ಬೇರೆ ರೂಪಗಳಲ್ಲಿ ನಾವೆಲ್ಲ ಪ್ರತಿ ದಿನವೂ ಬಳಸುತ್ತೇವೆ.

ದನವೆಂಬ ಮೂಕ ಪ್ರಾಣಿಯನ್ನು ನಾವು ಇಷ್ಟೆಲ್ಲ ದೋಚುತ್ತಿದ್ದೇವೆಯೆ ಎಂದು ಕಣ್ಣೀರು ಸುರಿಸಲು ಹೊರಟಿರೊ, ನಿಮಗೆ ಗ್ಲಿಸರೀನ್ ಬೇಕಾಗಬಹುದು. ಅದೂ ದನದ ದೇಹದಿಂದಲೇ ಬರುತ್ತದೆ.

ನಾಗೇಶ ಹೆಗಡೆ (ಪ್ರಜಾವಾಣಿ)

> ನಾಗರಿಕರ ಆಹಾರದ ಆಯ್ಕೆಯ ಮೇಲೆ ಇತ್ತೀಚಿನ ಈ ದಾಳಿಯು ಗೋಮಾಂಸ ನಿಷೇಧದಲ್ಲಿ ಎಮ್ಮೆ ಮಾಂಸವನ್ನೂ ಸೇರಿಸುವ ವ್ಯವಸ್ಥಿತ ಪ್ರಯತ್ನಗಳು, ಅಲ್ಪಸಂಖ್ಯಾತರು ಮತ್ತು ದನಗಳ ವ್ಯಾಪಾರದಲ್ಲಿ ತೊಡಗಿರುವವರ ಮೇಲೆ ಗೋರಕ್ಷಕರೆಂಬ ಕಾವಲುಕೋರರನ್ನು ಹರಿಯಬಿಡುವುದು ಈ ಎಲ್ಲಾ ಹಿನ್ನೆಲೆಯಲ್ಲಿ ಆಗಿದೆ. ಕಾನೂನು ಪ್ರಕಾರ ಆಗದಿರುವುದನ್ನು ಮಾಡಲು ಅಡ್ಡ ಮಾರ್ಗ ಹಿಡಿಯಲಾಗಿದೆ.

> ಶಸ್ತ್ರಗಳನ್ನು ಕೈಗೆತ್ತಿಕೊಳ್ಳ ನೋಡೋಣ, ನಾವು ಸರಿಯಾಗಿ ನೋಡಿಕೊಳ್ಳುತ್ತೇವೆ ಎಂದು ಪ್ರತಿಭಟನೆಕಾರರನ್ನು ಕಿಚಾಯಿಸುವುದು ಒಂದು ಅನಪೇಕ್ಷಿತ ಪ್ರಚೋದನೆಯಾಗಿದೆ ಹಾಗೂ ಅದು ಒಬ್ಬ ಹಿರಿಯ ಸೇನಾಧಿಕಾರಿಯ ಘನತೆಗೆ ತಕ್ಕುದಲ್ಲದ ವರ್ತನೆಯಾಗಿದೆ. ದುರದೃಷ್ಟವಶಾತ್, ಸೇನಾಧ್ಯಕ್ಷರು ಕಾಶ್ಮೀರ ಜನತೆಯ ಪ್ರತಿಭಟನೆಯನ್ನು ಕೇವಲ ಬಲಪ್ರಯೋಗದಿಂದಲೇ ಬಗ್ಗುಬಡಿಯಲು ಬಯಸುತ್ತಿರುವ ಮೋದಿ ಸರಕಾರದ ನಿಲವನ್ನು ಬಿಂಬಿಸುತ್ತಿದ್ದಾರೆ.

ಜಾನುವಾರು ಹತ್ಯೆ ನಿಷೇಧ: ಅಸಹ್ಯ ನಿಯಮಗಳ ವಾಪಸ್ ಪಡೆಯಿರಿ

ಜನತೆಯ ಆಹಾರದ ಹಕ್ಕು ಮತ್ತು ಕೋಟ್ಯಂತರ ರೈತರು, ದನದ ವ್ಯಾಪಾರಿಗಳು ಹಾಗೂ ದನ ಕಡಿಯುವವರ ಜೀವನೋಪಾಯದ ಮೇಲೆ ಆಕ್ರಮಣ ಮಾಡುವ ಮೂಲಕ ಕೇಂದ್ರದ ನರೇಂದ್ರ ಮೋದಿ ಸರಕಾರ ಅಧಿಕಾರದಲ್ಲಿ ಮೂರನೇ ವರ್ಷವನ್ನು ಪೂರ್ಣಗೊಳಿಸಿದೆ. ಪ್ರಾಣಿ ಹಿಂಸೆ ತಡೆ ಕಾನೂನಿಗೆ ತಿದ್ದುಪಡಿಗಳನ್ನು ಸೂಚಿಸುವ ಆದೇಶವೊಂದನ್ನು ಕೇಂದ್ರ ಸರಕಾರ ಮೇ 25ರಂದು ಹೊರಡಿಸಿತು. 'ಜಾನುವಾರು ಮಾರುಕಟ್ಟೆ ನಿಯಂತ್ರಣ ನಿಯಮಗಳು, 2017' ಎಂದು ಕರೆಯಲಾಗುವ ಈ ನೋಟಿಫಿಕೇಷನ್ ಪ್ರಕಾರ ಭಾರತದಾದ್ಯಂತ ಹಸುಗಳನ್ನು ಕಡಿಯಲಿಕ್ಕಾಗಿ ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಹಸುಗಳೆಂದರೆ ಎಮ್ಮೆ, ಕೋಣ, ಹೋರಿ, ಎತ್ತು, ದನದ ಕರು , ಎಳೆಗರು, ಸಣ್ಣ ಎತ್ತು ಮತ್ತು ಒಂಟೆ ಎಂದು ವ್ಯಾಖ್ಯಾನಿಸಲಾಗಿದೆ.

ಈ ನಿಯಮದ ಪ್ರಕಾರ, ದನಗಳನ್ನು ಕಡಿಯಲಿಕ್ಕಾಗಿ ಮಾರಲೆಂದು ದನದ ಮಾರುಕಟ್ಟೆಗೆ ಹೋಗುವ ರೈತರು ಶಿಕ್ಷೆಗೆ ಒಳಗಾಗುತ್ತಾರೆ. ಎಮ್ಮೆಗಳನ್ನೂ ಸೇರಿಸಿರುವುದರಿಂದ ಅವುಗಳನ್ನು ಕಡಿಯುವುದು ಕೂಡ ಕಾನೂನುಬಾಹಿರವಾಗುತ್ತದೆ. ಬಹುತೇಕ ರಾಜ್ಯಗಳಲ್ಲಿ ಎಮ್ಮೆಗಳನ್ನು ಕಡಿಯುವುದು ಕಾನೂನಿಗೆ ವಿರೋಧವೇನೂ ಅಲ್ಲ.

ಜಾನುವಾರುಗಳನ್ನು ಕಡಿಯುವ ಮೇಲೆ ಈ ರೀತಿಯ ಸಾರಾಸಗಟು ನಿಷೇಧ ಹೇರುವ ಮೂಲಕ ಹಿಂದೂತ್ವವಾದಿಗಳು ಜನತೆಯ ದೊಡ್ಡ ವಿಭಾಗ ಅದರಲ್ಲೂ ವಿಶೇಷವಾಗಿ ಅಲ್ಪಸಂಖ್ಯಾತರು ಮತ್ತು ದಲಿತರು ಪ್ರೋಟೀನ್ ಮತ್ತು ಪೌಷ್ಟಿಕತೆಯ ಅಗ್ಗದ ಮೂಲವಾದ ಗೋಮಾಂಸ ಸೇವಿಸುವುದನ್ನು ತಡೆಯುವ ಉದ್ದೇಶ ಹೊಂದಿದ್ದಾರೆ.

ಈ ನಿಷೇಧದಿಂದ ರೈತರು ಭಾರೀ ತೊಂದರೆಗೆ ಒಳಗಾಗಲಿದ್ದಾರೆ. ಅವರಿಗೆ ತಮ್ಮ ಅನುತ್ಪಾದಕ ದನಗಳು, ಎತ್ತುಗಳು ಮತ್ತು ಎಮ್ಮೆಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಆಗುವುದಿಲ್ಲ. ಇದ–ರಿಂದಾಗಿ, ಹೊಸ ಜಾನುವಾರುಗಳನ್ನು ಖರೀದಿಸಲು ಬೇಕಾದ ಹಣಕಾಸು ಅವರಿಗೆ ಲಭ್ಯವಾಗುವುದಿಲ್ಲ. ಅಲ್ಲದೆ ವಯಸ್ಸಾದ ತಮ್ಮ ಹಸುಗಳನ್ನು ಅವರು ಹಾಗೇ ಬಿಟ್ಟು ಬಿಡುವ ಒತ್ತಡಕ್ಕೆ ಒಳಗಾಗುತ್ತಾರೆ. ಆ ಪ್ರಾಣಿಗಳು ಬೀಡಾಡಿಗಳಾಗುತ್ತವೆ. 26,685 ಕೋಟಿ ರೂಪಾಯಿಗಳಷ್ಟು ಬೃಹತ್ ಮೊತ್ತದ ಗೋಮಾಂಸ ರಫ್ತು ಉದ್ಯಮ ಮಾತ್ರವಲ್ಲದೆ ಚರ್ಮೋದ್ಯಮವೂ ಭಾರೀ ತೊಂದರೆಗೆ ಒಳಗಾಗಲಿದೆ.

ಗೋಹತ್ಯೆ ಮತ್ತು ಗೋ ವ್ಯಾಪಾರ ರಾಜ್ಯಗಳಿಗೆ ಸಂಬಂಧಿಸಿದ ವಿಷಯವಾಗಿದೆ. ಪ್ರಾಣಿಹಿಂಸೆ ತಡೆ ಕಾನೂನಿನ ಹೆಸರಿನಲ್ಲಿ ಈ ನಿಯಮಗಳನ್ನು ತೂರಿಸುವ ಮೂಲಕ ಕೇಂದ್ರವು ರಾಜ್ಯಗಳ ಅಧಿಕಾರಗಳ ಮೇಲೆ ಸವಾರಿ ಮಾಡುತ್ತಿದೆ. ಮೇ 25ರ ಆದೇಶವು ಪ್ರಜಾಪ್ರಭುತ್ವ–ವಿರೋಧಿ ಮತ್ತು ಒಕ್ಕೂಟ–ವಿರೋಧಿ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಸರಿಯಾಗಿಯೇ ಹೇಳಿದ್ದಾರೆ. ಈ ನಿಯಮಗಳನ್ನು ಅನುಷ್ಠಾನಗೊಳಿಸುವುದಿಲ್ಲ ಎಂದು ಕೇರಳ ಮತ್ತು ಬಂಗಾಳ ಸರಕಾರಗಳು ಘೋಷಿಸಿವೆ.

ನಾಗರಿಕರ ಆಹಾರದ ಆಯ್ಕೆಯ ಮೇಲೆ ಇತ್ತೀಚಿನ ಈ ದಾಳಿಯು ಗೋಮಾಂಸ ನಿಷೇಧದಲ್ಲಿ ಎಮ್ಮೆ ಮಾಂಸವನ್ನೂ ಸೇರಿಸುವ ವ್ಯವಸ್ಥಿತ ಪ್ರಯತ್ನಗಳು, ಅಲ್ಪಸಂಖ್ಯಾತರು ಮತ್ತು ದನಗಳ ವ್ಯಾಪಾರದಲ್ಲಿ ತೊಡಗಿರುವವರ ಮೇಲೆ ಗೋರಕ್ಷಕ–ರೆಂಬ ಕಾವಲುಕೋರರನ್ನು ಹರಿಯಬಿಡುವುದು ಈ ಎಲ್ಲಾ ಹಿನ್ನೆಲೆಯಲ್ಲಿ ಆಗಿದೆ. ಕಾನೂನಾತ್ಮಕವಾಗಿ ಆಗದಿರುವುದನ್ನು, ಅಂದರೆ ಜಾನುವಾರು ಹತ್ಯೆಯನ್ನು ನಿಷೇಧವನ್ನು, ಮಾಡಲು ಅಡ್ಡ ಮಾರ್ಗ ಹಿಡಿಯಲಾಗಿದೆ.

ಮದ್ರಾಸ್ ಹೈಕೋರ್ಟ್‌ನ ಮಧುರೆ ಪೀಠವು ಈ ನಿಯಮಗಳ ಎರಡು ವಿಧಿಗಳಿಗೆ ಸಂಬಂಧಿಸಿ ನಾಲ್ಕು ವಾರಗಳ ತಡೆಯಾಜ್ಞೆ ನೀಡಿದೆ. ನೋಟಿಫಿಕೇಷನ್‌ನ ಈ ಅಸಹ್ಯ ನಿಯಮಗಳನ್ನು ಮೋದಿ ಸರಕಾರ ತಕ್ಷಣವೇ ವಾಪಸ್ ಪಡೆಯಬೇಕು.



ವ್ಯಂಗ್ಯಚಿತ್ರ: ಶುಭನೀಲ್, ಡೆಕ್ಕನ್ ಕ್ರಾನಿಕಲ್

ದೇಶದ ಸೈನ್ಯದ ಪ್ರತಿಷ್ಠೆಗೆ ಧಕ್ಕೆ



ಪ್ರಕಾಶ ಕಾರಟ್

ಕಾಶ್ಮೀರದಲ್ಲಿನ ನಾಗರಿಕ ಪ್ರತಿಭಟನೆಕಾರರನ್ನು ನಿಭಾಯಿಸುವ ವಿಚಾರವಾಗಿ ಭೂಸೇನೆ ಮುಖ್ಯಸ್ಥ ಜನರಲ್ ಬಿಪಿನ್ ರಾವತ್ ಸಂದರ್ಶನವೊಂದರಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯವು ಕಾಶ್ಮೀರದಲ್ಲಿನ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಮೋದಿ ಸರಕಾರ ಮಾಡುತ್ತಿರುವ ಎಲ್ಲಾ ತಪ್ಪುಗಳ ಉದಾಹರಣೆಯಂತಿದೆ.

"ನಿಜ ಹೇಳಬೇಕೆಂದರೆ ಈ ಜನರು ನಮ್ಮತ್ತ ಕಲ್ಲುಗಳನ್ನು ಎಸೆಯುವ ಬದಲು ಶಸ್ತ್ರಗಳನ್ನು ಪ್ರಯೋಗಿಸಿದ್ದರೆ ನನಗೆ ಸಂತೋಷವಾಗುತ್ತಿತ್ತು. ಆಗ ನಾನು(ಮಾಡಬೇಕೆಂದಿರುವುದನ್ನು) ಮಾಡಬಹುದಿತ್ತು" ಎಂದು ಜನರಲ್ ರಾವತ್ ಹೇಳಿದ್ದಾರೆ.

ಒಬ್ಬ ನಾಗರಿಕನ್ನು ಮಾನವ ಗುರಾಣಿಯಾಗಿ ಜೀಪ್‌ನ ಮುಂಭಾಗಕ್ಕೆ ಕಟ್ಟಿ ಹಾಕಿ ಅನೇಕ ಹಳ್ಳಿಗಳನ್ನು ಮೆರವಣಿಗೆ ಮಾಡಿಸಿದ ಮೇಜರ್ ನಿತಿನ್ ಗೋಗೊಯ್‌ರ ತಪ್ಪು ಕ್ರಮವನ್ನೂ ರಾವತ್ ಸಮರ್ಥಿಸಿಕೊಂಡಿದ್ದಾರೆ. ಈ ಕ್ರಮದ ಬಗ್ಗೆ ಇನ್ನೂ ತನಿಖೆ ನಡೆಯುತ್ತಿರುವಾಗಲೇ ಸೇನೆಯ ಮುಖ್ಯಸ್ಥರು ಅವರಿಗೆ ಶ್ಲಾಘನಾ ಪತ್ರ ನೀಡಿದ್ದಾರೆ.

"ಇದೊಂದು ಬದಲೀ ಯುದ್ಧ... ಇದನ್ನು ಅತ್ಯಂತ ಕೀಳು ಮಟ್ಟದಲ್ಲಿ ನಡೆಸಲಾಗುತ್ತಿದೆ... ಹೀಗಾಗಿ ನವೀನ ತಂತ್ರಗಳನ್ನು ಹುಡುಕಬೇಕಾಗುತ್ತದೆ. ಕೀಳು ಯುದ್ಧವನ್ನು ನವೀನ ರೀತಿಯಲ್ಲಿ ಎದುರಿಸಬೇಕು" ಎಂಬುದಾಗಿ ರಾವತ್ ಹೇಳಿದ್ದಾರೆ.

ಶ್ರೀನಗರ ಉಪಚುನಾವಣೆಯಲ್ಲಿ ಮತದಾನ ಮಾಡಲು ಹೋಗಿದ್ದ ಫರೂಕ್ ಅಹಮದ್ ದಾರ್ ಅವರನ್ನು ಹಿಡಿದು ಸೈನಿಕರತ್ತ ಕಲ್ಲೆಸೆಯುವುದನ್ನು ತಡೆಯಲು ಗುರಾಣಿಯಾಗಿ ಬಳಸಿದ ರೀತಿ ಆಘಾತಕರ ಪ್ರಕರಣವಾಗಿತ್ತು. ಈ ಕೃತ್ಯವನ್ನು ಶ್ಲಾಘಿಸುವ ಮೂಲಕ ಭೂಸೇನೆ ಮುಖ್ಯಸ್ಥರು ಸೇನೆಯ ವೃತ್ತಿಪರತೆಯ ಉನ್ನತ ಮಟ್ಟ ಕುಸಿಯುವಂತೆ ಮಾಡಿದ್ದಾರೆ. ನಾಗರಿಕರೊಬ್ಬರನ್ನು ಮಾನವ ಗುರಾಣಿಯಾಗಿ ಬಳಸಿದ್ದನ್ನು ಅನೇಕ ಮಾಜಿ ಸೇನಾಧಿಕಾರಿಗಳು ಕಟುವಾಗಿ ಖಂಡಿಸಿದ್ದಾರೆ. ಸೇನೆಯು ತನ್ನದೇ ಜನರನ್ನು ಈ ರೀತಿಯಾಗಿ ನಡೆಸಿಕೊಳ್ಳಲಾಗದು ಎಂದು ಅವರು ಸರಿಯಾಗಿಯೇ ಹೇಳಿದ್ದಾರೆ.

ಜನರಲ್ ರಾವತ್ ಕಲ್ಲೆಸೆಯುವ ಯುವ ಪ್ರತಿಭಟನೆಕಾರರು ಮತ್ತು ಸಶಸ್ತ್ರ ಉಗ್ರಗಾಮಿಗಳ ನಡುವೆ ಯಾವುದೇ ವ್ಯತ್ಯಾಸ ಕಾಣುವುದಿಲ್ಲ. ಸೇನೆಯ ಕಾರ್ಯಾಚರಣೆಗಳಿಗೆ ಬೆಂಬಲ ನೀಡದ ಅಥವಾ ಎನ್‌ಕೌಂಟರ್‌ಗಳ ವೇಳೆ ಸೇನೆಯ ಕಾರ್ಯಗಳಿಗೆ ಅಡ್ಡಿಪಡಿಸುವ ಯಾರನ್ನೇ ಆದರೂ "ಭಯೋತ್ಪಾದಕರ ಬಹಿರಂಗ ಕಾರ್ಯಕರ್ತರು" ಎಂದು ಪರಿಗಣಿಸಲಾಗುತ್ತದೆ ಎಂಬುದಾಗಿ ಹಿಂದೊಮ್ಮೆ ಇದೇ ಜನರಲ್ ರಾವತ್ ಅಬ್ಬರಿಸಿದ್ದರು. ಶಸ್ತ್ರಗಳನ್ನು ಕೈಗೆತ್ತಿಕೊಳ್ಳಿ ನೋಡೋಣ, ನಾವು ಸರಿಯಾಗಿ ನೋಡಿಕೊಳ್ಳುತ್ತೇವೆ ಎಂದು ಪ್ರತಿಭಟನೆಕಾರರನ್ನು ಕಿಚಾಯಿಸುವುದು ಒಂದು ಅನಪೇಕ್ಷಿತ ಪ್ರಚೋದನೆಯಾಗಿದೆ ಹಾಗೂ ಅದು ಒಬ್ಬ ಹಿರಿಯ ಸೇನಾಧಿಕಾರಿಯ ಘನತೆಗೆ ತಕ್ಕುದಲ್ಲದ ವರ್ತನೆಯಾಗಿದೆ.

ದುರದೃಷ್ಟವಶಾತ್, ಸೇನಾಧ್ಯಕ್ಷರು ತಮ್ಮ ರಾಜಕೀಯ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಿರುವ ಕಾಶ್ಮೀರ ಜನತೆಯನ್ನು ಕೇವಲ ಬಲಪ್ರಯೋಗದಿಂದಲೇ ಬಗ್ಗುಬಡಿಯಲು ಬಯಸುತ್ತಿರುವ ಮೋದಿ ಸರಕಾರದ ನಿಲವನ್ನು ಬಿಂಬಿಸುತ್ತಿದ್ದಾರೆ.

ಸರಕಾರ ನಾಗರಿಕರ ವಿರುದ್ಧ ದಮನಕಾರೀ ಬಲಪ್ರಯೋಗದ ನಿಲುವಿಗೇ ಕಣ್ಣುಮುಚ್ಚಿ ಅಂಟಿಕೊಂಡರೆ, ಅದರಿಂದ ಕಾಶ್ಮೀರದ ಜನರು ಮಾತ್ರವಲ್ಲದೆ ಸೇನೆ ಕೂಡ ಸರಿಪಡಿಸಲಾಗದ ಅನಾಹುತವನ್ನು ಎದುರಿಸಬೇಕಾಗುತ್ತದೆ.

ಅನು: ವಿಶ್ವ



ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಮೋದಿ ಸರಕಾರದ ಮೂರು ವಿಫಲ ವರ್ಷಗಳಲ್ಲಿ..



ಪ್ರಧಾನ ಮಂತ್ರಿಗಳು 'ಅಚ್ಛೇ ದಿನ್'ಗಳ ಆಶ್ವಾಸನೆಗಳನ್ನು ನೀಡಿ ಮೂರು ವರ್ಷಗಳಾಗುತ್ತಿವೆ. ಆ ಆಶ್ವಾಸನೆಗಳೆಲ್ಲ ಎಲ್ಲಿ ಮಾಯವಾದವು ಎಂದು ಜನಗಳು ಆಶ್ಚರ್ಯ ಪಡುತ್ತಿದ್ದರೆ, ಪ್ರಧಾನ ಮಂತ್ರಿಗಳಾದಿಯಾಗಿ ಆಳುವ ಪಕ್ಷದ ಮುಖಂಡರೆಲ್ಲ ಭವಿಷ್ಯದ ಚುನಾವಣೆಗಳನ್ನು ಗೆಲ್ಲುವುದು ಹೇಗೆ ಎಂಬುದರ ಮೇಲೆಯೇ ಗಮನ ಕೇಂದ್ರೀಕರಿಸಿದಂತಿದೆ. ಅದಕ್ಕಾಗಿ ಪ್ರತಿದಿನ ಎಂಬಂತೆ ವಿಐಪಿ ಕಾರುಗಳ ಮೇಲೆ ಕೆಂಪು ದೀಪಗಳನ್ನು ತೆಗೆಯುವುದು ಮುಂತಾದ ಹೊಸ ಹೊಸ ಟ್ರಿಕ್ಕುಗಳು, ಪದಗಳ ಕಸರತ್ತು ನಡೆಯುತ್ತಲೇ ಇವೆ. ಈಗ 15 ದಿನಗಳ 'ಸಾಧನೆಗಳ ಉತ್ಸವ' ಆರಂಭವಾಗಿದೆ. ಹಿಂದಿನ ಎರಡು ಸಂಚಿಕೆಗಳಲ್ಲಿ ರೈತರು, ಕಾರ್ಮಿಕರು, ದಲಿತರು ಈ ಮೂರು ವರ್ಷಗಳಲ್ಲಿ ಅಕಂಡಿರುವುದೇನು, ಸಾಮಾಜಿಕ ಸಾಮರಸ್ಯ, ಪ್ರಜಾಪ್ರಭುತ್ವ ಹಕ್ಕುಗಳ ಕ್ಷೇತ್ರಗಳಲ್ಲಿ ಅದರ 'ಸಾಧನೆ'ಗಳೇನು ಎಂಬುದರ ಪಕ್ಷಿನೋಟವನ್ನು ಕಳೆದ ಸಂಚಿಕೆಯಲ್ಲಿ ನೋಡಿದ್ದಿರಿ. ಇಲ್ಲಿ ಮಹಿಳೆಯರು ಅನುಭವಿಸಿರುವುದೇನು, ಶಿಕ್ಷಣರಂಗದಲ್ಲಿ ಮತ್ತು ವಿದೇಶ ವ್ಯಹಾರಗಳಲ್ಲಿ ಅದು ಸಾಧಿಸಿದ್ದೇನು ಎಂಬುದರ ನೋಟ ಇಲ್ಲಿದೆ.

ಮಹಿಳೆಯ ಕಣ್ಣಲ್ಲಿ ಮೋದಿಯ ಮೂರು ವರ್ಷಗಳು

ಮೋದಿಯ ಆಡಳಿತದ ಮೂರು ವರ್ಷಗಳಲ್ಲಿ ಮಹಿಳೆಯರಿಗೆ ಸಿಕ್ಕಿದ್ದೇನು? ಭರವಸೆಗಳ ಈಡೇರಿಕೆಗೆ ಬಜೆಟ್‌ನಲ್ಲಿ ಹೆಚ್ಚಳವಾಗಬೇಕು, ಆದರೆ ಮಹಿಳೆಯರಿಗೆ ಪ್ರಯೋಜನವಾಗುವ ಯೋಜನೆಗಳ ಬಜೆಟ್ ಕಡಿತಗೊಂಡಿದೆ. ಮಹಿಳೆಯರಿಗೆ ಉದ್ಯೋಗಾವಕಾಶಗಳು ಕ್ಷೀಣವಾಗಿವೆ. ಅಂಕೆಗೆ ಸಿಗದ ಹಿಂಸೆ ದೌರ್ಜನ್ಯಗಳ ಜೊತೆಗೆ ಸಂಘೀ ಪ್ರಭಾವಿತರು ಮಹಿಳೆಯರ ಸ್ಥಾನ ಮನೆಯಲ್ಲಿ, ಮೈಮುಚ್ಚುವ ಉಡುಪು ಧರಿಸಿ ಪುರುಷರಿಗೆ ಹೆಚ್ಚು ಗೌರವ! ಕೊಡುವ ಪುಕ್ಕಟೆ ಉಪದೇಶಗಳು ಬೇರೆ. ಶಾಸನ ಸಭೆಗಳಲ್ಲಿ ಮೀಸಲಾತಿಯದಂತೂ ಸರಕಾರದ ಆಲೋಚನೆಯಲ್ಲಿಯೂ ಇದ್ದಂತಿಲ.

ಮಹಿಳೆಯರಿಗೆ ಸರಕಾರೀ ಯೋಜನೆಗಳಲ್ಲಿ ಅನುದಾನ ಕಡಿತ:

ಕಳೆದೆರಡು ವರ್ಷಗಳಿಂದ ಮಹಿಳಾ ಬಜೆಟ್‌ನಲ್ಲಿ ತೀವ್ರ ಇಳಿಕೆಯಾಗಿದೆ. ಅದು ಈ ವರ್ಷವೂ ಮುಂದುವರೆದಿದೆ. ಹಣಕಾಸು ಮಂತ್ರಿಗಳು ಬಜೆಟ್ ಮಂಡಿಸುವಾಗ ಅದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಬಜೆಟ್ ಎಂಬಂತೆ ಹೇಳಿಕೊಂಡಿದ್ದರು. ಆದರೆ ಜೆಂಡರ್ ಬಜೆಟ್ ಮಾನದಂಡದಲ್ಲಿ ಅದು ತೀರಾ ನಿರಾಶಾದಾಯಕ ಬಜೆಟ್. ಹೈನುಗಾರಿಕೆ ಮತ್ತು ಮೀನುಗಾರಿಕೆ, ಕೃಷಿ ಕ್ಷೇತ್ರದಲ್ಲಿ ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ತೊಡಗಿಸಿಕೊಂಡಿದ್ದಾರಾದರೂ ಮಹಿಳೆಯರಿಗಾಗಿ ಯಾವ ವಿಶೇಷ ಕ್ರಮಗಳನ್ನೂ ಪ್ರಸ್ತಾಪಿಸಲಾಗಿಲ್ಲ.

ಆಹಾರಕ್ಕೆ ಸಂಬಂಧಿಸಿದಂತೆ ಮಾತ್ರ ಮಹಿಳಾ ವಿಶೇಷ ಕೊಡುಗೆಯನ್ನು ಕೊಟ್ಟಿದ್ದು ಅದೂ ಕೂಡ ಕೇವಲ 60 ಕೋಟಿಯಷ್ಟು ಹೆಚ್ಚಿಸಲಾಗಿದೆ.

2016–17 ರ ಸಮೀಕ್ಷೆಯಂತೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಕಾನೂನಿನ ಕೆಲಸಗಾರರಲ್ಲಿ 57% ಮಹಿಳೆಯರೇ. ಹಣಕಾಸು ಮಂತ್ರಿಗಳ ಪ್ರಕಾರ ಬಜೆಟ್‌ನಲ್ಲಿ 2016–17ರ 38500 ಕೋಟಿ ರೂಗಳಿಂದ 2017–18 ಕ್ಕೆ 48000 ಕೋಟಿ ಮೀಸಲಿಟ್ಟು 26% ಹೆಚ್ಚುವರಿ ನೀಡಲಾಗಿದೆಯಂತೆ!. ಆದರೆ 2016–17 ರ ಬಜೆಟ್‌ನ ಮರುಪರಿಶೀಲನೆಯ ನಂತರ ಸಿಕ್ಕಿದ್ದು ಕೇವಲ 47,499 ಕೋಟಿ ಮಾತ್ರ. ಎಂದರೆ ಹೆಚ್ಚಳವಾಗಿದ್ದು ಕೇವಲ 1%. ಅಂಕಿ ಸಂಖ್ಯೆಗಳ ತಾರಾಮಾರಿಯಲ್ಲಿ ಮೋದಿ ಸರ್ಕಾರ ನಿಷ್ಣಾತವೆಂಬುದು ನಮಗೆ ಗೊತ್ತಿದೆ. ಕೂಲಂಕುಷವಾಗಿ ಪರಿಶೀಲಿಸಿದರೆ ನಿಜಾಂಶ ತಿಳಿಯುತ್ತದೆ. ಕಡುಬಡತನದಲ್ಲಿರುವವರು ಬದುಕಿನ ಅನಿವಾರ್ಯ ಅಗತ್ಯಕ್ಕಾಗಿ ಮನ್‌ರೇಗಾ ದಲ್ಲಿ ಮಾಡಿದ ಕೆಲಸಕ್ಕೆ ಕೂಲಿ ಕೊಡದೇ ಸತಾಯಿಸುವ ಸ್ಥಿತಿ ಇದೆ. ಕೇವಲ 1% ಹೆಚ್ಚಳ ಮಾಡುವ ಮೂಲಕ ಈ ಕೊರತೆಯನ್ನು ನೀಗಿಸಬಹುದೆಂದು ಹಣಕಾಸು ಸಚಿವರ ಯೋಚಿಸುತ್ತಾರೆಯೇ?



ಮಹಿಳೆಯರನ್ನು ಮಾತ್ರವೇ ಕೆಲಸಕ್ಕೆ ತೆಗೆದುಕೊಳ್ಳುವ ಮತ್ತು 0–6 ವಯೋಮಾನದ ಮಕ್ಕಳ ಪೌಷ್ಟಿಕಾಂಶದ ಅಗತ್ಯಗಳ ಪೂರೈಕೆಗಾಗಿ ಇರುವುದು ಸಮಗ್ರ ಶಿಶು ಅಭಿವೃದ್ಧಿ ಯೋಜನೆ. ಮೇ 2015 ರಲ್ಲಿ ಮನೇಕಾ ಗಾಂಧಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ರಾಜ್ಯಸಭೆಗೆ ತಿಳಿಸಿದಂತೆ ಈ ಯೋಜನೆಯಡಿ 24.58 ಲಕ್ಷ ಮಹಿಳೆಯರು ದುಡಿಯುತ್ತಿದ್ದಾರೆ. ಇವರನ್ನು ಉದ್ಯೋಗಿಗಳೆಂದು ಪರಿಗಣಿಸದೇ ಅವರ ಸೇವೆಗೆ ಕನಿಷ್ಟ ಮೊತ್ತದ ಗೌರವ ಧನವನ್ನು ನೀಡಲಾಗುತ್ತಿದೆ. ಅಂಗನವಾಡಿ ನೌಕರರು ಹಲವು ವರ್ಷಗಳಿಂದ ತಮ್ಮನ್ನು ಉದ್ಯೋಗಿಗಳೆಂದು ಪರಿಗಣಿಸುವಂತೆ ಕೇಳುತ್ತಿದ್ದಾರೆ. ಆದರೆ ಹಿಂದಿನ ಕಾಂಗ್ರೆಸ್ ಸರ್ಕಾರದಂತೆಯೇ ಮೋದಿ ಸರ್ಕಾರ ಕೂಡ ಅದನ್ನು ಅಲಕ್ಷಿಸಿದೆ. ಈ ಯಕಃಶ್ಚಿತ್ ಗೌರವ ಧನ ಕೂಡ ಸಮರ್ಪಕವಾಗಿ ಅವರಿಗೆ ಸಿಗುವುದಿಲ್ಲ. ಸಚಿವಾಲಯು ದ ಪ್ರಕಾರೆ 2015–16ರಲ್ಲಿ ಈ ಯೋಜನೆಯ ಬಜೆಟ್ ನಲ್ಲಿ 50% ಕಡಿತವಾಗಿದೆ. 2016–17ರಲ್ಲಿ ಮತ್ತೆ 6% ಕಡಿತಗೊಂಡಿದೆ. ಈ ವರ್ಷದ ಬಜೆಟ್ ನಲ್ಲಿ 446.47 ಕೋಟಿ ರೂ ಮೀಸಲಿಟ್ಟು ಹಿಂದಿನ ವರ್ಷಗಳಿಗಿಂತ 34.79 ಕೋಟಿ ಹೆಚ್ಚಿಸಲಾಗಿದೆ. ಈ ಹೆಚ್ಚಳ ಯೋಜನೆಯ ಅಗತ್ಯಕ್ಕೆ ಹೋಲಿಸಿದರೆ ಯಾವ ಮೂಲೆಗೂ ಸಾಲುವುದಿಲ್ಲ.

ಹೊಸವರ್ಷಾರಂಭದಲ್ಲಿ ಪ್ರಧಾನಿ ಮೋದಿಯವರು ಹೆರಿಗೆ ಸೌಲಭ್ಯವೆಂದು ಹೊಸ ಘೋಷಣೇಯೊಂದನ್ನು ಮಾಡಿದರಾದರೂ ಅದು ಈ ಹಿಂದೆಯೇ ಇದ್ದ ಇಂದಿರಾ ಗಾಂಧಿ ಮಾತೃತ್ವ ಯೋಜನೆಯ ವಿಸ್ತರಣೆಯಷ್ಟೇ ಆಗಿತ್ತು. 2010 ರಲ್ಲಿಯೇ ಇಂದಿರಾ ಗಾಂಧಿ ಮಾತೃತ್ವ ಯೋಜನೆಯನ್ನು ಜಾರಿಗೆ ತಂದು 2013 ರಲ್ಲಿ ಅದನ್ನು ರಾಷ್ಟ್ರೀಯ ಆಹಾರ ಸುರಕ್ಷಾ ಕಾಯ್ದೆಗೆ ಜೋಡಿಸಲಾಗಿತ್ತು. ಇಬ್ಬರು ಸಜೀವ ಮಕ್ಕಳಿಗೆ ಈ ಸೌಲಭ್ಯ ನಿಗದಿ ಪಡಿಸಲಾಗಿತ್ತು. 2017 ರ ಮೇ 17 ರಂದು ಸಚಿವ ಸಂಪುಟ ಇದನ್ನು ಬದಲಿಸಿ ಕೇವಲ ಮೊದಲ ಹೆರಿಗೆಗೆ ಸೀಮಿತಗೊಳಿಸಿದೆ. ರಾಷ್ಟ್ರೀಯ ಆಹಾರ ಸುರಕ್ಷಾ ಕಾಯ್ದೆಗೆ ವಿರುದ್ಧವಾಗಿ ಮೊದಲಿಗೆ ಇದ್ದ 6000/ ವನ್ನು 5000/ಕ್ಕೆ ಇಳಿಸಿ ಫಲಾನುಭವಿಗಳಿಗೆ ಆಧಾರ್ ಕಾರ್ಡನ್ನು ಕಡ್ಡಾಯಗೊಳಿಸಿದೆ. ಇದು ಮತ್ತಿಷ್ಟು ಮಹಿಳೆಯರನ್ನು ಯೋಜನೆಯಿಂ ಹೊರ ಹಾಕುತ್ತದೆ. ಈಯೋಜನೆಗೆ 2017 ರ ವರ್ಷಕ್ಕೆ ಮೋದಿ ಸರ್ಕಾರ ಕೇವಲ 2700 ಕೋಟಿರೂಪಾಯಿಗಳನ್ನು ಮೀಸಲಿರಿಸಿದೆ. ವರ್ಷವೊಂದಕ್ಕೆ ಹುಟ್ಟುವ 2.6 ಕೋಟಿ ಸಜೀವ ಜನನದ 17% ಮಾತ್ರ ಈ ಹಣವಾಗುತ್ತದೆ. ಕೇಂದ್ರ ಸರ್ಕಾರ ಮಹಿಳೆ ಮತ್ತು ಮಕ್ಕಳ ವಿಷಯಕ್ಕೆ ತೋರುವ ನಿಷ್ಕಾಳಜಿಗೆ ಇದು ಸಾಕ್ಷಿಯಾಗಿದೆ..

ಉದ್ಯೋಗ ಕ್ಷೇತ್ರದಲ್ಲಿ ಮಹಿಳೆಯರು:


2016ರಲ್ಲಿ ಕಾರ್ಮಿಕ ಇಲಾಖೆ ಬಹಿರಂಗ ಪಡಿಸಿದ ಮಾಹಿತಿಯಂತೆ 15 ವರ್ಷ ಮೇಲ್ಪಟ್ಟು ನಿಗದಿತ ಉದ್ಯೋಗದಲ್ಲಿ ತೊಡಗಿರುವ ಮಹಿಳೆಯರ ಪ್ರಮಾಣ ಕೇವಲ 22% ಮತ್ತು ಪುರುಷರ ಪ್ರಮಾಣ 74%. ನಗರಗಳಲ್ಲಿ ಆಘಾತಕಾರಿಯಾಗಿ ಈ ಪ್ರಮಾಣ 14%ಗೆ ಕುಸಿದಿದೆ. ಉದ್ಯೋಗದ ಸದರ್ಭದಲ್ಲಿ ಲಿಂಗ ಸಮೀಕರಣದಲ್ಲಿ 145 ದೇಶಗಳ ಪೈಕಿ ಭಾರತ 136 ಕ್ಕೆ ಇಳಿಯಲು ಇದು ಕಾರಣವಾಗಿದೆ. ಇದೇನೂ ಹೊಸತಲ್ಲ. ಕಳೆದ ಹಲವಾರು ವರ್ಷಗಳಿಂದ ಈ ಪರಿಸ್ಥಿತಿ ಇದೆ. ಇದನ್ನು ಸುಧಾರಿಸಲು ಮೋದಿ ಸರ್ಕಾರ ಯಾವ ಪ್ರಯತ್ನವನ್ನೂ ಮಾಡಿಲ್ಲ. ತಾಂತ್ರಿಕ ನೈಪುಣ್ಯತೆ, ಹೊಸ ಸಾಧ್ಯತೆಗಳಿಗೆ ಅವಕಾಶಗಳಂಥಹ ಯಾವ ಕ್ರಮಗಳನ್ನೂ ಕೈಗೊಳ್ಳದೇ ಈಗಲೂ ಸೌಂದರ್ಯವರ್ಧಕ, ಹೊಲಿಗೆಯಂಥಹ ಕೋರ್ಸ್‌ಗಳಿಗೇ ಆದ್ಯತೆ ಕೊಡಲಾಗುತ್ತಿದೆ. ಅಲ್ಲದೇ ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಸುರಕ್ಷತೆ ಭದ್ರತೆಯತ್ತಲೂ ಗಮನವಿಲ್ಲ. ಸಮಾನ ಕೆಲಸಕ್ಕೆ ಸಮಾನ ವೇತನ, ಹೆರಿಗೆ ರಜಾ ಇತರ ಸೌಲಭ್ಯಗಳು ಮುಂತಾಗಿ ಬಹು ಸಂಖ್ಯಾತ ಮಹಿಳೆಯರಿಗೆ ದೊರೆಯುತ್ತಿಲ್ಲ. ಇನ್ನು ಶಿಶುಪಾಲನಾ ಕೇಂದ್ರಗಳಂತಹವು ನಗರಗಳ ಬೃಹತ್ ಉದ್ಯಮಗಳಲ್ಲಿಯೇ ಸಿಗುತ್ತಿಲ್ಲವೆಂದ ಮೇಲೆ ಸಣ್ಣ ಉದ್ಯಮ ಮತ್ತು ಇತರ ಪ್ರದೇಶಗಳಲ್ಲಿ ಅವು ಗಗನ ಕುಸುಮವೇ.

ಇದರಿಂದಾಗಿ **ಮಹಿಳೆಯರ ನಿರುದ್ಯೋಗದ ಪ್ರಮಾಣ ಪುರುಷರಿಗಿಂತ ಎರಡು ಪಟ್ಟು ಹೆಚ್ಚಿದ್ದು 8.7%ಗೆ ನಿಂತಿದೆ ಎಂಬುದು ಉದ್ಯೋಗಾಕಾಂಕ್ಷಿ**

ಪುಟ 10 ಕ್ಕೆ

3 ವರ್ಷ– ಅನ್ನ ಇಲ್ಲ, ಉದ್ಯೋಗ ಇಲ್ಲ, ಸಾವಿರ ಸಾವಿರ ಸವಾಲುಗಳಷ್ಟೇ

ಮೋದಿ ಸರಕಾರದ ಮೂರು ವರ್ಷಗಳ ಕುರಿತು ಪುಸ್ತಿಕೆ ಬಿಡುಗಡೆ



ಜೂನ್ 1 ರಂದು ಸಿಪಿಐ(ಎಂ) ಕೇಂದ್ರ ಸಮಿತಿ ಕಚೇರಿ ಎಕೆಜಿ ಭವನದಲ್ಲಿ ಸಿಪಿಐ (ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಮತ್ತು ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಹಾಗೂ ಎಂ.ಎ.ಬೇಬಿಯವರು ಮೋದಿ ಸರಕಾರದ ಮೂರು ವರ್ಷಗಳಲ್ಲಿ ವಿವಿಧ ರಂಗಗಳಲ್ಲಿ ಮಾಡಿರುವ 'ಸಾಧನೆ'ಗಳನ್ನು ವಿಶ್ಲೇಷಿಸುವ ಕಿರುಪುಸ್ತಕ "ತೀನ್ ಸಾಲ್, ನ ನೌಕರಿ, ನ ದಾಲ್ ಬಸ್ ಹಝಾರೋಂ ಸವಾಲ್"ನ್ನು ಬಿಡುಗಡೆ ಮಾಡಿದರು.

ಸಾರ್ವಜನಿಕ ಶಿಕ್ಷಣದ ನಾಶ-ವ್ಯಾಪಾರೀಕರಣ- ಕೇಸರೀಕರಣದ ತ್ರಿಶೂಲ

ಸಾವಿರ ದಿನಗಳು ಕಳೆದರೂ ನೂರುದಿನಗಳಲ್ಲಿ ಹೊಸ ಶಿಕ್ಷಣ ಧೋರಣೆಯ ಆಶ್ವಾಸನೆಯ ಪತ್ತೆಯಿಲ್ಲ. ಅದರಯೀ ಸರಕಾರದ ಬಳಿ ಒಂದು ಕಣ್ಣೋಟವೇ ಇಲ್ಲವೆಂದಲ್ಲ. ಅದು ಇಬ್ಬಗೆಯ ಗುರಿಗಳನ್ನಿಟ್ಟುಕೊಂಡು ನಿರ್ದಯವಾಗಿ ಸಾಗುತ್ತಿದೆ- ಒಂದು, ಸಾರ್ವಜನಿಕ ಶಿಕ್ಷಣವನ್ನು ನಾಶ ಮಾಡುವುದು, ಇನ್ನೊಂದು ಪ್ರಾಥಮಿಕ ಹಂತದಿಂದ ಹಿಡಿದು ಉನ್ನತ ಶಿಕ್ಷಣದ ವರೆಗೆ ಖಾಸಗೀಕರಣ ಮತ್ತು ಕೇಸರೀಕರಣಕ್ಕೆ ದಾರಿ ಮಾಡಿಕೊಡುವುದು.



ಶಿಕ್ಷಣ ರಂಗದಲ್ಲಿ ವಿವಿಧ ವಿಧಾನಗಳ ಮೂಲಕ ಆರೆಸ್ಸೆಸ್‌ನ ಹಿಂದುತ್ವ ಅಜೆಂಡಾದ ಹೇರಿಕೆ, ಉನ್ನತ ಶಿಕ್ಷಣದ ಕ್ಯಾಂಪಸ್‌ಗಳ ಮೇಲೆ ಮತ್ತು ಅಲ್ಲಿನ ವಿದ್ಯಾರ್ಥಿಗಳ ಮೇಲೆ ಸರ್ವಾಧಿಕಾರಶಾಹಿ ದಾಳಿಗಳು ಮೋದಿ ಸರಕಾರದ ಎರಡನೇ ವರ್ಷದ 'ಸಾಧನೆ'ಯಾಗಿದ್ದರೆ, ಸಾರ್ವಜನಿಕ ಶಿಕ್ಷಣದ ನಾಶ, ವ್ಯಾಪಾರೀಕರಣ ಮತ್ತು ಕೇಸರೀಕರಣ ಪ್ರಕ್ರಿಯೆ ಮೂರನೇ ವರ್ಷವೂ ಅವ್ಯಾಹತವಾಗಿ ಮುಂದುವರೆದಿದೆ.

ಸಾರ್ವಜನಿಕ ಶಿಕ್ಷಣದ ನಾಶ

ಶಿಕ್ಷಣಕ್ಕೆ ಸರಕಾರದ ವೆಚ್ಚ ಜಿಡಿಪಿಯ 6% ಇರಬೇಕು ಎಂಬುದು 50ವರ್ಷಗಳ ಹಿಂದೆ ಕೊಠಾರಿ ಶಿಕ್ಷಣ ಆಯೋಗ ದೇಶದ ಮುಂದಿಟ್ಟ ಗುರಿ. 2014 ರ ವರೆಗೆ ಈ ಗುರಿ ಮುಟ್ಟಿರಲಿಲ್ಲ ನಿಜ. ಇದನ್ನು ಪ್ರಜಾಪ್ರಭುತ್ವವಾದಿ ಶಕ್ತಿಗಳು ಮತ್ತೆ-ಮತ್ತೆ ನೆನಪಿಸುತ್ತಲೇ ಬಂದಿವೆ. ಬಿಜೆಪಿಯ ಚುನಾವಣಾ ಪ್ರಣಾಳಿಕೆ ಕೂಡ ಈ ಕುರಿತು ಆಶ್ವಾಸನೆ ನೀಡಿತ್ತು.

ಆದರೆ ತದ್ವಿರುದ್ಧವಾಗಿ, ಭಾರೀ ಬಹುಮತದಿಂದ ಅಧಿಕಾರಕ್ಕೆ ಬಂದರೂ ಶಿಕ್ಷಣಕ್ಕೆ ಮಾಡುವ ವೆಚ್ಚ ಹಿಂದಿಗಿಂತಲೂ ಕಡಿಮೆಯಾಗುತ್ತಿರುವುದು ಒಂದು ವಿಶೇಷ ಲಕ್ಷಣ. ಈಗ ಈ ಸರಕಾರದ ಮಾನವ ಸಂಪನ್ಮೂಲ ಮಂತ್ರಿಗಳು ಖಾಸಗೀ ಕ್ಷೇತ್ರದಲ್ಲಿ ಶಿಕ್ಷಣಕ್ಕೆ ಮಾಡುತ್ತಿರುವ ವೆಚ್ಚವನ್ನು ಕೂಡ ಇದರಲ್ಲಿ ಸೇರಿಸಬೇಕು ಎಂದಿದ್ದಾರೆ. ಅಂದರೆ ಸರಕಾರದ ವೆಚ್ಚವನ್ನು ಇಳಿಸುತ್ತ ಹೋಗಿ, ಖಾಸಗಿ ಬಂಡವಾಳ ಹೆಚ್ಚಿಸಲು ಹೆಚ್ಚೆಚ್ಚು ಪ್ರೋತ್ಸಾಹವೇ ತಮ್ಮ ಸರಕಾರದ ಧೋರಣೆ ಎಂದು ಅವರು ಒಪ್ಪಿಕೊಂಡಂತಾಗಿದೆ. ಖಾಸಗಿ ಬಂಡವಾಳದ ಜೊತೆಗೆ ಸಹಜವಾಗಿ ಬರುವ ಖಾಸಗಿ ಲೂಟಿ ಶಿಕ್ಷಣವನ್ನು ಕೇವಲ ಒಳ್ಳವರಿಗೇ ಸೀಮಿತಗೊಳಿಸುವ ಬಗ್ಗೆ ಈ ಸರಕಾರಕ್ಕೆ ಏನೇನೂ ಚಿಂತೆಯಿಲ್ಲ.

* 2013-14ರಲ್ಲಿ ಅಂದರೆ ಈ ಸರಕಾರ ಬರುವ ಹಿಂದಿನ ವರ್ಷದ ಸರಕಾರ ಬಜೆಟಿನ 4.57% ಶಿಕ್ಷಣಕ್ಕೆ ಮೀಸಲಿಟ್ಟಿತ್ತು. ಮೂರು ವರ್ಷಗಳ ಆಳ್ವಿಕೆಯ ನಂತರ 2017-18ರಲ್ಲಿ ಇದು 3.8%ಕ್ಕೆ ಇಳಿದಿದೆ.
* ಶಾಲಾಶಿಕ್ಷಣ ಮತ್ತು ಸಾಕ್ಷರತೆಗೆ ಮೋದಿ ಸರಕಾರ 2014-15ರಲ್ಲಿ ಖರ್ಚು ಮಾಡಿದ್ದು 45,722 ಕೋಟಿ ರೂ. ಇದು ಅದರ ಹಿಂದಿನ ವರ್ಷದಲ್ಲಿ ಯುಪಿಎ ಸರಕಾರ ಖರ್ಚುಮಾಡಿದ್ದಕ್ಕಿಂತ 1134 ಕೋಟಿರೂ. ಕಡಿಮೆ. 2015-16 ರಲ್ಲಿ ಪರಿಷ್ಕೃತ ಅಂದಾಜುಗಳ ಪ್ರಕಾರ ಇದು 42,187 ಕೋಟಿ ರೂ.ಗಳಿಗೆ ಇಳಿಯಿತು. 2016-17 ರಲ್ಲಿ ಇದು ತುಸು ಹೆಚ್ಚಿ 43,554 ಕೊಟಿರೂ.ಗೆ ಬಂದಿದ್ದರೂ ಹಣದುಬ್ಬರವನ್ನು ಗಮನಿಸಿದರೆ ಇದು ಹೆಚ್ಚಳವಂತೂ ಅಲ್ಲ, 2013-14ರ ಮಟ್ಟಕ್ಕಿಂತ ಇನ್ನೂ ಬಹಳ ಕೆಳಗೇ ಇದೆ.
* ಬೇಟಿ ಬಚಾವೋ ಬೇಟಿ ಪಢಾವೊ ಎಂದು ಬಹಳ ಗದ್ದಲದ ಪ್ರಚಾರ ನಡೆಯಿತು. ಆದರೆ 2016-17ರಲ್ಲಿ ಇದಕ್ಕೆ ಕೊಟ್ಟ 43 ಕೋಟಿ ರೂ.ಗಳಲ್ಲಿ ಖರ್ಚು ಮಾಡಿದ್ದು ಕೇವಲ 5 ಕೋಟಿ ರೂ. ಎಂದು ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಸಂಸದೀಯ ಸ್ಥಾಯಿ ಸಮಿತಿಯ ವರದಿ ಹೇಳುತ್ತದೆ.
* 14ನೇ ಹಣಕಾಸು ಆಯೋಗ ಸರ್ವಶಿಕ್ಷಣ ಅಭಿಯಾನದಂತಹ ಕೇಂದ್ರ ಸರಕಾರದ ಸ್ಕೀಮುಗಳಿಗೆ ರಾಜ್ಯಗಳು ಮಾಡುವ ಖರ್ಚಿನ ಪ್ರಮಾಣ ಹಿಂದಿನ 25% ದಿಂದ 40%ಕ್ಕೆ ಏರಬೇಕು ಎಂದು ಶಿಫಾರಸು ಮಾಡಿತ್ತು. ಆದರೆ ಕೇಂದ್ರ ಸರಕಾರ ಇದಕ್ಕನುಗುಣವಾಗಿ ಹಣ ನೀಡಿಕೆಯನ್ನು ಹೆಚ್ಚಿಸುವ ಬದಲು ಕಡಿಮೆ ಮಾಡುತ್ತಲೇ ಬಂದಿದೆ. 2017-18ರಲ್ಲಿ ಈ ಸ್ಕೀಮಿಗೆ ಬೇಕಾಗುವ ಮೊತ್ತ 55,000 ಕೋಟಿ ರೂ. ಆದರೆ ಕೇಂದ್ರ ಸರಕಾರ ಕೊಟ್ಟಿರುವುದು ಕೇವಲ 23,500 ಕೋಟಿ ರೂ. ಇದರ ನೇರ ದುಷ್ಪರಿಣಾಮ ಬೀಳುತ್ತಿರುವುದು ದಲಿತರು, ಆದಿವಾಸಿಗಳು ಮತ್ತಿತರ ಹಿಂದುಳಿದಿರುವ ಜನವಿಭಾಗಗಳ ಮೇಲೆಯೇ.
* ಕೇಂದ್ರ ಸರಕಾರ ಶಿಕ್ಷಣಕ್ಕೆ ಮಾಡಿರುವ ಕಡಿತದ ಮತ್ತೊಂದು ಪರಿಣಾಮ ಎಂದರೆ ವಂಚಿತ ವಿಭಾಗಗಳ ವಿದ್ಯಾರ್ಥಿಗಳಿಗೆ ಶಿಕ್ಷಣ ಪಡೆಯಲು ಅವಕಾಶ ನೀಡಿರುವ ಸ್ಕಾಲರ್‌ಶಿಪ್‌ಗಳು ಮತ್ತು ಫೆಲೋಶಿಪ್‌ಗಳ ವಿತರಣೆಯಲ್ಲಿ ವಿಪರೀತ ವಿಳಂಬ(2ರಿಂದ 8 ತಿಂಗಳು) ಮತ್ತು ಈಗ ಕಡಿತ ಕೂಡ. 2015ರಲ್ಲಿ ಎನ್‌ಇಟಿಯೇತರ ಫೆಲೊಶಿಪ್‌ಗಳನ್ನು ನಿಲ್ಲಿಸುವ ಯುಜಿಸಿ ಪ್ರಯತ್ನ-ಕ್ಕೆ ಭಾರೀ ಪ್ರತಿರೋಧ ಬಂದ ನಂತರ ಈಗ ಅದರ ಕಡಿತಕ್ಕೆ ಮುಂದಾಗಿದೆ. ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನಾ ಸೀಟುಗಳನ್ನು ತೀವ್ರವಾಗಿ ಕಡಿತ ಮಾಡುವ ಕಾನೂನುಬಾಹಿರ ಕ್ರಮಕ್ಕೆ ಈ ಸರಕಾರ ಮುಂದಾಗಿದೆ. ಅಂಚಿಗೆ ತಳ್ಳಲ್ಪಟ್ಟ ವಿಭಾಗಗಳ ಮಕ್ಕಳು ಸಂಶೋಧನಾ ರಂಗ ಪ್ರವೇಶಿಸಲು ಜೆಎನ್‌ಯು ಕಲ್ಪಿಸಿದ್ದ ವಿಶೇಷ ಪ್ರವೇಶಾತಿ ವಿಧಾನವನ್ನು ಕೊನೆಗಾಣಿಸುವ ಪ್ರಯತ್ನ, ಈ ಮೂಲಕ ಉನ್ನತ ಶಿಕ್ಷಣವನ್ನು ವಂಚಿತ ವಿಭಾಗಗಳಿಗೆ ಮತ್ತೆ ವಂಚಿಸುವ ಹುನ್ನಾರವೂ ಇದರ ಹಿಂದೆ ಇದ್ದಂತಿದೆ. ಐಐಟಿಗಳಲ್ಲಿ ಶುಲ್ಕವನ್ನು 90,000 ರೂ.ಗಳಿಂದ 2.5ಲಕ್ಷ ರೂ.ಗೆ ಏರಿಸಲಾಗಿದೆ.

ಶಿಕ್ಷಣದ ವ್ಯಾಪಾರೀಕರಣ ಮತ್ತು ಖಾಸಗಿ ಲೂಟಿ

ಮೋದಿ ಸರಕಾರ ಯೋಜನಾ ಆಯೋಗವನ್ನು ರದ್ದು ಮಾಡಿ ರಚಿಸಿದ 'ನೀತಿ ಆಯೋಗ' ಪಿಪಿಪಿ (ಖಾಸಗಿ-ಸಾರ್ವಜನಿಕ ಭಾಗೀದಾರಿಕೆ) ಹೆಸರಲ್ಲಿ ಖಾಸಗಿಯವರಿಗೆ ಸರಕಾರಿ ಶಾಲೆಗಳನ್ನು ವಹಿಸಿಕೊಡುವ ಅಥವ 'ದತ್ತು ತೆಗೆದುಕೊಳ್ಳುವ' ವ್ಯವಸ್ಥೆಯ ಶಿಫಾರಸು ಮಾಡಿದೆ.

ಈ ನಡುವೆ ಸರಕಾರಿ ಶಾಲೆಗಳ ಬಗ್ಗೆ ಸ್ವತಃ ಸರಕಾರದ ಉಪೇಕ್ಷೆಯಿಂದಾಗಿ ಹೆಚ್ಚೆಚ್ಚು ತಂದೆ-

ಪುಟ 11 ಕ್ಕೆ

ವಿದೇಶಾಂಗ ನೀತಿ ಗೊಂದಲದ ಗೂಡು

ನೆರೆಯವರೊಡನೆ ಸಂಘರ್ಷ, ಅಮೆರಿಕದ ಚೇಲಾಗಿರಿ

ಸ್ವತಂತ್ರ ವಿದೇಶಾಂಗ ನೀತಿಗೆ ಎಳ್ಳು ನೀರು ಬಿಟ್ಟ ಮೋದಿ ಸರಕಾರದ ವಿದೇಶ ನೀತಿಯಿಂದಾಗಿ ಹಲವು ಪ್ರಮುಖ ಅಂತರ್ರಾಷ್ಟ್ರೀಯ ವೇದಿಕೆಯಲ್ಲಿ ಭಾರತದ ಪ್ರತಿಷ್ಟೆ ಕುಂದಿದೆ. ಜಾಗತಿಕವಾಗಿ ಭಾರತವನ್ನು ಅಮೆರಿಕದ ಚೇಲಾ ಆಗಿ ನೋಡಲಾಗುತ್ತಿದೆ. ಅದರ ಹೈಪರ್-ರಾಷ್ಟ್ರೀಯತೆ ಸಾಮ್ರಾಜ್ಯಶಾಹಿ-ವಿರೋಧದ ಮೇಲೆ ಆಧಾರಿತವಾಗಿಲ್ಲ. ಬರಿಯ ಅಬ್ಬರ ಮತ್ತು ಬೊಗಳೆ ಬಡಾಯಿ ಮೇಲೆ ಆಧಾರಿತವಾಗಿದೆ. ಆದ್ದರಿಂದ ಅದು ವಿದೇಶಾಂಗ ನೀತಿಯನ್ನು ಸಮರ್ಥವಾಗಿ ನಿರ್ವಹಿಸುವಲ್ಲಿ ಸೋತಿದೆ. ಮೋದಿ ಸರಕಾರದ ವಿದೇಶಾಂಗ ನೀತಿಯ ವಿಜಯಗಳು ಬಾರತದ ಟಿವಿ ಸ್ಟುಡಿಯೋಗಳಿಗೆ ಸೀಮಿತವಾಗಿದೆ

ನೆರೆಯ ಪಾಕಿಸ್ತಾನ, ಚೀನಾ, ನೇಪಾಳಗಳೊಂದಿಗೆ ಕಾಲು ಕೆರೆದು ಸಂಘರ್ಷ, ಮೂರನೇ ಜಗತ್ತಿನ ಪ್ರಮುಖ ದನಿಯಾಗಿದ್ದ ವಿಶಿಷ್ಟ ಪಾತ್ರದ ಅಂತ್ಯ, ಅಮೆರಿಕದ ಇನ್ನಷ್ಟು ದೈನ್ಯತೆಯ ಜೂನಿಯರ್ ಪಾರ್ಟ್ನರ್, ಆಫ್ರಿಕನ್ ವಿದ್ಯಾರ್ಥಿಗಳ ಮೇಲೆ ಹಿಂಸಾಚಾರದಿಂದ ನಿರ್ಲಕ್ಷದಿಂದಾಗಿ ಆಫ್ರಿಕನ್ ದೇಶಗಳು ಗರಂ – ಇವು ಮೋದಿ ಸರಕಾರದ ವಿದೇಶಾಂಗ ನೀತಿಯ ವೈಫಲ್ಯದ ಕೆಲವು ಕಣ್ಣಿಗೆ ಹೊಡೆಯುವ ಚಿತ್ರಗಳು. ಈ ವೈಫಲ್ಯಗಳನ್ನು ಮುಚ್ಚಿಕೊಳ್ಳಲೋ ಎಂಬಂತೆ ಪ್ರಧಾನಿ ಮೋದಿಯ ಅಗಣಿತ ವಿದೇಶ ಪ್ರವಾಸಗಳಲ್ಲಿ ಅನಿವಾಸಿ ಭಾರತೀಯರ ಜತೆ ಅಬ್ಬರದ ವೈಭವೋಪೇತ ಸಭೆಗಳು. ಆದರೆ ಕೊನೆಗೂ ಶೂನ್ಯ ಸಂಪಾದನೆ. ಮೋದಿ-ಕೇಂದ್ರಿತ ನೀತಿ ನಿರ್ಧಾರ ಪ್ರಕ್ರಿಯೆಯಿಂದಾಗಿ ರಾಯಭಾರಿಗಳಿಗೆ ಯಾವುದೇ ಪಾತ್ರ ಇಲ್ಲದೆ, ವಿದೇಶಾಂಗ ನೀತಿ ಗೊಂದಲದ ಗೂಡಾಗಿದೆ. ಇಂತಹ ಭೇಟಿಗಳಲ್ಲಿ ಇರಬೇಕಾದ ದೇಶದ ದೀರ್ಘಕಾಲೀನ ಹಿತಾಸಕ್ತಿ ಕಾಪಾಡುವ ವ್ಯೂಹಾತ್ಮಕ ದೃಷ್ಟಿಕೋಣ, ಹಾಗು ಅದರೊಂದಿಗೆ ಗಂಭೀರ ರಾಯಭಾರ ಚಟುವಟಿಕೆಗಳು ಇರಲಿಲ್ಲ. ಜಗತ್ತಿನಲ್ಲಿ ಭಾರತದ ಪ್ರತಿಷ್ಠೆಯನ್ನು ಎತ್ತರಿಸುವ ಹೆಸರಲ್ಲಿ ನಡೆದ ಸರ್ಕಸುಗಳಿಂದ, ವಾಸ್ತವದಲ್ಲಿ ಪಾಕಿಸ್ತಾನದೊಂದಿಗೆ ಭಂಡತನದಲ್ಲಿ ಪೈಪೋಟಿಗೆ ಇಳಿಯುವ ದೇಶವಾಗಿ ಜಗತ್ತಿನ ದೃಷ್ಟಿಯಲ್ಲಿ ಪ್ರತಿಷ್ಟೆ ಗಣನೀಯವಾಗಿ ಕುಂದಿದೆ.

ಅಮೆರಿಕದ ಚೇಲಾಗಿರಿ :

ದೇಶದ್ರೋಹಿ ರಕ್ಷಣಾ ಒಪ್ಪಂದಗಳು

ಅಮೆರಿಕದ ಜತೆ 2015ರಲ್ಲಿ 10 ವರ್ಷಗಳ ದೀರ್ಘಕಾಲೀನ ರಕ್ಷಣಾ ಚೌಕಟ್ಟು ಒಪ್ಪಂದಕ್ಕೆ ಸಹಿ ಹಾಕಲಾಯಿತು. ಇದರ ಬೆನ್ನಿಗೆ ಮೂರು – ಸೌಕರ್ಯ ವಿನಿಮಯ ಬೆಂಬಲ (LEMOA), ಸಂಪರ್ಕ ಮತ್ತು ಮಾಹಿತಿ ಭದ್ರತೆ (CISMOA), ಪ್ರಾಥಮಿಕ ವಿನಿಮಯ ಮತ್ತು ಸಹಕಾರ (BECA) – ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ಈ ನಾಲ್ಕೂ ಒಪ್ಪಂದಗಳ ಪ್ರಕಾರ



ಅಮೆರಿಕನ್ ಸೇನೆಗೆ ಬಂದರುಗಳು, ವಿಮಾನ ನಿಲ್ದಾಣಗಳು, ಮಿಲಿಟರಿ ನೆಲೆಗಳನ್ನೂ ಅಗತ್ಯ ಬಿದ್ದಾಗ ಮಿಲಿಟರಿ ಉಪಕರಣಗಳನ್ನೂ ಒದಗಿಸಬೇಕು. ಭಾರತ ಮತ್ತು ಅಮೆರಿಕದ ಉಪಕರಣಗಳು, ಸಮುಚ್ಚಯಗಳು ಒಟ್ಟಿಗೆ ಕೆಲಸ ಮಾಡುವತಿರಬೇಕು. ಇದರ ಅರ್ಥ ಹೆಚ್ಚು ಕಡಿಮೆ ಎಲ್ಲಾ ಉಪಕರಣಗಳು ಮತ್ತು ಸಮುಚ್ಚಯಗಳನ್ನು ಅಮೆರಿಕದಿಂದಲೇ ಖರೀದಿಸಬೇಕಾಗುತ್ತದೆ ಮತ್ತು ಒಂದೇ ನಿಯಂತ್ರಣ ಮತ್ತು ಅಧಿಕರಣಕ್ಕೆ ಒಳಗಾಗಬೇಕಾಗುತ್ತದೆ. ಈ ಪ್ರದೇಶದಲ್ಲಿ ಯಾವುದೇ ಅಮೆರಿಕದ ಮಿಲಟರಿ ದುಸ್ಸಾಹಸದಲ್ಲಿ ಭಾರತಕ್ಕೆ ಇಷ್ಟವಿರಲಿ ಇಲ್ಲದಿರಲಿ ಭಾಗವಹಿಸಬೇಕಾಗುತ್ತದೆ. ಇದು ಸಾಮಾನ್ಯ ಮಿಲಿಟರಿ ಒಪ್ಪಂದಕ್ಕಿಂತ ಬಹಳ ಭಿನ್ನವಾದ ಒಪ್ಪಂದ. ಇದು ದೇಶದ ದೀರ್ಘಕಾಲೀನ ವ್ಯೂಹಾತ್ಮಕ ಹಿತಾಸಕ್ತಿಗಳನ್ನು ಬಲಿ ಕೊಡುವ ಹಿಂದೆಂದೂ ಕಂಡು ಕೇಳರಿಯದ ದೇಶದ್ರೋಹಿ ಕೃತ್ಯ.

ಕಳೆದ ವರ್ಷ ದಕ್ಷಿಣ ಚೀನಾ ಸಮುದ್ರದ ಹತ್ತಿರದ ಜಪಾನ್ ಸಮುದ್ರದ ಒಕಿನಾವ ಬಳಿ ಭಾರತ, ಅಮೆರಿಕ ಮತ್ತು ಜಪಾನಿ ಸೇನೆಗಳ ಜಂಟಿ ಯುದ್ಧಾಭ್ಯಾಸ ನಡೆಸಲಾಯಿತು. ಇದು ಚೀನಾ, ವಿಯೆಟ್ನಾಂ ಮತ್ತು ಫಿಲಿಪ್ಪೀನ್ಸ್ ಗಳ ನಡುವೆ ದಕ್ಷಿಣ ಚೀನಾ ಸಮುದ್ರದ ಬಗ್ಗೆ ಇರುವ ವಿವಾದದಲ್ಲಿ ಅಮೆರಿಕದ ಬಾಲಂಗೋಚಿಯಾಗಿ ಅನವಶ್ಯಕವಾಗಿ ಮೂಗು ತೂರಿಸುವ ಪ್ರಯತ್ನ.

ಸಾಲದು ಎಂಬಂತೆ ರಕ್ಷಣಾ ಉಪಕರಣಗಳು ಮತ್ತು ಶಸ್ತ್ರಾಸ್ತ್ರಗಳ ತಯಾರಿಕಾ ಕ್ಷೇತ್ರದಲ್ಲಿ ಶೇ. 100 ವಿದೇಶಿ ಹೂಡಿಕೆಗೆ ಅವಕಾಶ ಕೊಡಲಾಗಿದೆ. ಇದರೊಂದಿಗೆ ಅಮೆರಿಕದ ರಕ್ಷಣಾ ಉಪಕರಣ/ಶಸ್ತ್ರಾಸ್ತ್ರ ತಯಾರಿಕಾ ಕಂಪನಿಗಳು ಭಾರತದಲ್ಲಿ ಒಂದು ಅಧೀನ ಕಂಪನಿ ತೆರೆದರೆ ಸಾಕು ಅವರಿಗೆ ಎಲ್ಲಾ ಪೂರೈಕೆ ಆರ್ಡರುಗಳು ಸಿಗುತ್ತವೆ. ಇದು ಮೋದಿ ಸ್ಟೈಲ್ "ಮೇಕ್ ಇನ್ ಇಂಡಿಯಾ".

ನೆರೆಯವರೊಂದಿಗೆ ಸಂಘರ್ಷ

ಮೋದಿ ಮತ್ತು ಬಿಜೆಪಿ, ದೇಶೀಯ ನೀತಿಗಳಂತೆ ಅಬ್ಬರದ ಬೊಗಳೆ ಪ್ರಚಾರದಿಂದ ವಿದೇಶಾಂಗ ನೀತಿ ಮತ್ತು ನೆರೆಯ ದೇಶಗಳೊಂದಿಗೆ ಸಂಬಂಧವನ್ನೂ ನಿರ್ವಹಿಸಬಹುದು ಎಂಬ ದಡ್ಡ ತಿಳುವಳಿಕೆ ಹೊಂದಿದ್ದಾರೆ. ವಿದೇಶಾಂಗ ಸಚಿವಾಲಯವನ್ನು ನಿರ್ಲಕ್ಷಿಸಿರುವುದರಿಂದ ಎಲ್ಲಾ ವಿದೇಶಿ ಸರಕಾರದ ನಾಯಕರ ಜತೆ ಮಾತುಕತೆಗಳಲ್ಲಿ ಅಗತ್ಯ ತಯಾರಿ, ಸಮಗ್ರ ಧೋರಣೆಯ ಅಭಾವ ಕಂಡು ಬಂದಿದೆ. ವಿದೇಶ ಭೇಟಿಗಳು ಅರ್ಥಹೀನ ಮತ್ತು ಬರಿಯ ಮಾಧ್ಯಮ ಸರ್ಕಸುಗಳಾಗಿ ಬಿಟ್ಟಿವೆ. ಇದರಿಂದಾಗಿ ನೆರೆಯ ದೇಶಗಳ ಜತೆ ಸಂಬಂಧಗಳಿಗೆ ದೀರ್ಘಕಾಲೀನ ಆಘಾತಗಳು ಉಂಟಾಗಿವೆ.

ನೆರೆಯ ದೇಶಗಳ ಮುಖ್ಯಸ್ಥರನ್ನು ಪ್ರಧಾನಿ ಪ್ರಮಾಣ ವಚನಕ್ಕೆ ಆಹ್ವಾನಿಸಿ ಉತ್ತಮ ಆರಂಭ ಮಾಡಿದರೂ, ಅದು ಬರಿಯ ಆರಂಭಶೂರತ್ವವಾಗಿತ್ತು. ಆದರೆ ಅದರ ನಂತರ ನಡೆದ ಘಟನಾವಳಿಗಳು ಪಾಕಿಸ್ತಾನ-ಭಾರತಗಳ ನಡುವೆ ಹಿಂದೆಂದೂ ಕಂಡಿರದಷ್ಟು ಹದಗೆಟ್ಟಿದೆ. ಪಾಕಿಸ್ತಾನದ ರಾಯಭಾರಿಯ ಭೇಟಿಯನ್ನು ಅವರು ಹುರಿಯತ್ ನಾಯಕರನ್ನು ಭೇಟಿ ಮಾಡಿದರು ಎಂಬ ಕಾರಣಕ್ಕಾಗಿ ರದ್ದು ಮಾಡಿದ್ದರಿಂದ ಆರಂಭವಾಗಿ, ಲಾಹೋರ್ ಗೆ ಮೋದಿ ದಿಢೀರ್ ಭೇಟಿ ಮತ್ತು ಭೋಜನಕೂಟ, ಪಠಾಣಕೋಟ್ ಭಯೋತ್ಪಾದಕ ಕೃತ್ಯ, ತನಿಖಾ ದಳದ ಭೇಟಿಯ ಗೊಂದಲ, 'ಪ್ರತೀಕಾರ'ವಾಗಿ ತಥಾಕಥಿತ 'ಸರ್ಜಿಕಲ್ ಸ್ಟ್ರೈಕ್', ಅದು ಅತ್ಯಂತ ವೀರ ನಿರ್ಧಾರ ಎಂಬ ಅಬ್ಬರದ ಪ್ರಚಾರ, ಭಾರತ-ಪಾಕಿಸ್ತಾನ ಶಾಂತಿ ಮಾತುಕತೆ ಬಯಸುವವರು ದೇಶದ್ರೋಹಿಗಳು ಎಂಬ ಹೈಪರ್-ರಾಷ್ಟ್ರೀಯತೆಯ ವಾತಾವರಣದ ನಿರ್ಮಾಣದ ವರೆಗೆ ಬಂದು; ಎರಡು ಪರಮಾಣು ಸಜ್ಜಿತ ದೇಶಗಳು ಯಾವುದೇ ಕ್ಷಣದಲ್ಲಿ ಯುದ್ಧಕ್ಕೆ ಹೋಗಬಹುದು ಎಂಬ ಸ್ಥಿತಿ ನಿರ್ಮಾಣ ಮಾಡಲಾಗಿದೆ.

ಭಾರತದಂತಹ ದೊಡ್ಡ ದೇಶವೊಂದು ಪಾಕಿಸ್ತಾನವನ್ನು ಬೆದರಿಸಿ ಮಣಿಸಬಹುದು. ಬಾರತ-ಪಾಕಿಸ್ತಾನ "ಸಮಸ್ಯೆ"ಯನ್ನು ಇಂತಹ ದಿಟ್ಟ ಕ್ರಮಗಳಿಂದ ಬಗೆಹರಿಸಬಹುದು ಎಂಬ ಮೋದಿ ಸರಕಾರದ ದಡ್ಡ ತಿಳುವಳಿಕೆ, ವಾಸ್ತವದಿಂದ ದೂರವಾದದ್ದು ಎಂದು ಕಳೆದ 3 ವರ್ಷಗಳಲ್ಲಿ ಸಿದ್ಧವಾಗಿದೆ. ವಾಸ್ತವದಲ್ಲಿ ಭಯೋತ್ಪಾದಕ ಹಿಂಸಾಚಾರವಾಗಲಿ, ಗಡಿಯಾಚೆಗಿಂದ ನುಸುಳುವವರಾಗಲಿ, ಗಡಿ ಘರ್ಷಣೆ ಮತ್ತು ಭಯೋತ್ಪಾದಕ ಕೃತ್ಯಗಳಲ್ಲಿ ಸೈನಿಕರು ಮತ್ತು ನಾಗರಿಕರ ಸಾವುನೋವುಗಳಾಗಲಿ

ಪುಟ 10 ಕ್ಕೆ

ಮಹಿಳೆಯ ಕಣ್ಣಲ್ಲಿ ಮೋದಿಯ ಮೂರು ವರ್ಷಗಳು

ಪುಟ 8 ರಿಂದ

ಗಳಾಗಿಯೂ ಉದ್ಯೋಗ ಸಿಗದ ಮಹಿಳೆಯರ ಅಭಿಪ್ರಾಯಗಳಿಂದ ತಿಳಿದ ಮಾಹಿತಿಯಾಗಿದೆ. ಅತ್ಯಂತ ದುರ್ಭರ ಸಂದರ್ಭದಲ್ಲಿಯೂ ಉದ್ಯೋಗವಿಲ್ಲದೇ ಮನೆಯಲ್ಲಿಯೇ ಇರುವ ಸ್ಥಿತಿ ಮಹಿಳೆಯರದು. ಮೋದಿ ಸರಕಾರ ಆರ್.ಎಸ್.ಎಸ್ ಪ್ರೇರಿತ ಪುರುಷ ಪ್ರಧಾನ ಮೌಲ್ಯಗಳಿಗೆ ಒತ್ತು ಕೊಡುವುದರಿಂದ ಇದನ್ನು ಮೀರುವ ಯಾವ ಇರಾದೆಯೂ ಸರಕಾರಕ್ಕಿಲ್ಲ.

2015ರಲ್ಲಿ ಮೇನಕಾ ಗಾಂಧಿಯವರು ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವ ಅರುಣ್ ಜೈಟ್ಲಿಯವರಿಗೆ–ಎಲ್ಲ ಕಂಪನಿಗಳಲ್ಲಿ ಲೈಂಗಿಕ ಕಿರುಕುಳ ತಡೆ ಕಾಯ್ದೆಯನ್ವಯ ಆಂತರಿಕ ದೂರು ಸಮಿತಿಯನ್ನು ರಚಿಸಿರುವ ಬಗ್ಗೆ ಮಾಹಿತಿ ಕೊಡುವುದನ್ನು ಕಡ್ಡಾಯ ಮಾಡುವಂತೆ ಪ್ರಸ್ತಾಪಿಸಿದ್ದರು. ಆದರೆ ಅರುಣ್ ಜೈಟ್ಲಿಯವರು ಕಂಪನಿಗಳು ಈ ತೆರನ ಮಾಹಿತಿ ಹಂಚಿಕೆಯ ಒತ್ತಾಯವನ್ನು ಇಷ್ಟಪಡುವುದಿಲ್ಲವಾದ್ದರಿಂದ ಅದನ್ನು ಮಾಡಲಾಗುವುದಿಲ್ಲವೆಂದು ತಳ್ಳಿಹಾಕಿದ್ದರು. ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಸುರಕ್ಷತೆಯನ್ನು ಖಾತ್ರಿಗೊಳಿಸುವ ವಿಶಾಖಾ ಮಾನದಂಡಗಳನ್ನು ಉಪೇಕ್ಷಿಸಿದರೂ ಸರಿಯೇ ಕಂಪನಿಗಳು ಖುಷಿಯಾಗಿದ್ದರೆ ಸಾಕು ಎಂಬುದೇ ಈ ಧೋರಣೆ.

ಮಹಿಳೆಯರ ಕುರಿತಿರುವ

ಹಿಂದುತ್ವವಾದೀ ಧೋರಣೆ:

ಯಾವುದೇ ಯೋಜನೆಗಳು ಅಥವಾ ಅದಕ್ಕೆ ಸಂಬಂಧಿಸಿದ ನೀತಿಗಳ ಜಾರಿಯಲ್ಲಿ ಇರಬಹುದಾದ ತಪ್ಪು ಸರಿಗಳನ್ನು ಸರಿಪಡಿಸಲು ಸಾಧ್ಯವಿದೆ. ಆದರೆ ಮೋದಿ ಮತ್ತು ಅವರ ಸೈದ್ಧಾಂತಿಕ ಗುರುವಾದ ಆರ.ಎಸ್.ಎಸ್ ಸರಿಪಡಿಸಲಾಗದ ರೀತಿಯಲ್ಲಿ ಈ ದೇಶದ ಮೂಲ ಲಕ್ಷಣಕ್ಕೇ ಕೊಡಲಿ ಪೆಟ್ಟು ಹಾಕುತ್ತಿದ್ದಾರೆ. ಬಿ.ಜೆ.ಪಿ ಯ ನಾಯಕರು ಸಚಿವರುಗಳು ಆರ್.ಎಸ್.ಎಸ್ ಸದಸ್ಯರುಗಳು ಕೊಡುತ್ತಿರುವ ಹೇಳಿಕೆಗಳು ಮತ್ತು ಮಾಡುವ ಟೀಕೆ ಟಿಪ್ಪಣಿಗಳಿಂದ ಇದು ವ್ಯಕ್ತವಾಗುತ್ತದೆ.

* ಈ ವರ್ಷ ಮಾರ್ಚಿ ತಿಂಗಳಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಮನೇಕಾ ಗಾಂಧಿಯವರು ಹದಿ ಹರೆಯದಲ್ಲಿ ಹೆಣ್ಣು ಮಕ್ಕಳಿಗೆ ಹಾರ್ಮೋನುಗಳಲ್ಲಿ ವ್ಯತ್ಯಾಸವಾಗುವುದರಿಂದ ಅವರು ತಮಗೆ ತಾವು ಲಕ್ಷ್ಮಣ ರೇಖೆ ವಿಧಿಸಿಕೊಳ್ಳಬೇಕೆಂದು ಹೇಳಿದ್ದರಲ್ಲದೇ, ಸಂಜೆಯ ನಂತರ ಹಾಸ್ಟೆಲ್ಗಳಿಂದ ಹೊರಗಿರಬಾರದೆಂಬಿತ್ಯಾದಿ ಪಾಳೆಯಗಾರೀ ಮೌಲ್ಯಗಳನ್ನೇ ಪ್ರತಿಪಾದಿಸುವ ಮಾತುಗಳನ್ನಾಡಿದ್ದರು. ಅವರ ಪ್ರಕಾರ ಹೆಣ್ಣು ಅವಳ ರಕ್ಷಣೆಯನ್ನು ಅವಳೇ ಮಾಡಿಕೊಳ್ಳಬೇಕು.
* ಯೋಗಿ ಆದಿತ್ಯನಾಥರನ್ನು ಉತ್ತರ ಪ್ರದೇಶದ ಮುಖ್ಯಮಂತ್ರಿಯನ್ನಾಗಿ ಮಾಡುವುದರ ಮೂಲಕ ಮಹಿಳೆಯರ ಬದುಕಿಗೆ ಮಾರಕವಾಗಿರುವ ಹಿಂದುತ್ವ ಅಜೆಂಡಾವನ್ನು ಮುಂತಳ್ಳುವುದೇ ತಮಗೆ ಪ್ರಾಮುಖ್ಯ ಎಂದು ತೋರಿಸಿಕೊಟ್ಟಿದ್ದಾರೆ. ಇದೇ ವ್ಯಕ್ತಿ ಹಿಂದೆ ತಮ್ಮ ಭಾಷಣದಲ್ಲಿ 'ಲವ್ ಜಿಹಾದ್'ನ ಸೇಡು ತೀರಿಸಿಕೊಳ್ಳಬೇಕೆಂದರೆ ಗೋರಿಗಳಲ್ಲಿರುವ ಮುಸ್ಲಿಂ ಮಹಿಳೆಯರ ಹೆಣಗಳನ್ನು ಬಗೆದು ತೆಗೆದು ಅತ್ಯಾಚಾರ ಮಾಡಬೇಕು ಎಂದು ಹೇಳಿದ್ದರು. ಜೀವಂತ ಅಥವಾ ಸತ್ತ ಮಹಿಳೆಯರನ್ನು ಅತ್ಯಾಚಾರ ಮಾಡುವ ಮನಃಸ್ಥಿತಿಯನ್ನು ಹೊಂದಿರುವ ವ್ಯಕ್ತಿ ಈಗ ಒಂದು ದೊಡ್ಡ ರಾಜ್ಯದ ಮುಖ್ಯಮಂತ್ರಿ. ಇದು ಆರ್.ಎಸ್.ಎಸ್ ಮತ್ತು ಅದರ ರಾಜಕೀಯ ಮುಖವಾದ ಬಿ.ಜೆ.ಪಿ ಯ ಸಿದ್ಧಾಂತ.

ಮುಖ್ಯಮಂತ್ರಿಯಾದ ತಕ್ಷಣ ಯೋಗಿ ಆದಿತ್ಯನಾಥ್ ಹೆಣ್ಣು ಮಕ್ಕಳನ್ನು ಚುಡಾಯಿಸುವುದನ್ನು ತಡೆಯಲು ರೋಮಿಯೋ ನಿಗ್ರಹ ದಳ ರಚಿಸಿದ್ದರು. ಆ ದಳವು ಯುವ ಜೋಡಿಗಳನ್ನು ಗುರಿಯಾಗಿಸಿಕೊಂಡು ಧಾಳಿ ನಡೆಸಿದ್ದು, ಹೊಡೆದು ಬಡಿದು ಮಾಡುತ್ತಿರುವುದು ಸಾಮಾಜಿಕ ಜಾಲತಾಣದಲ್ಲಿ ಮತ್ತು ಮಾಧ್ಯಮಗಳಲ್ಲಿ ವರದಿಯಾಯಿತು. ಇದು ದೌರ್ಜನ್ಯಗಳಿಂದ ಮಹಿಳೆಯರನ್ನು ರಕ್ಷಿಸುವ ಉದ್ದೇಶದ ಬದಲು ಅಂತರ್ಜಾತೀಯ ಮತ್ತು ಅಂತರ್ಧರ್ಮೀಯ ವಿವಾಹಗಳನ್ನು ಹತ್ತಿಕ್ಕಲು ಕೈಗೊಂಡ ಕ್ರಮವೆಂಬುದು ಸಾಬೀತಾಗಿದೆ. ಇದು ಮತ್ತೊಮ್ಮೆ ಮಹಿಳೆಯರ ಆಯ್ಕೆ ಹಕ್ಕುಗಳ ಮೇಲೆ ನಡೆಸಿದ ಪ್ರಹಾರವಾಗಿದೆ.

* ಅಂತೆಯೇ ಮನೋಹರ ಲಾಲ ಖಟ್ಟಾರ್– ಅತ್ಯಾಚಾರಗಳಾಗಲು ಮಹಿಳೆಯರೇ ಕಾರಣ ಎಂದಿದ್ದ ಇನ್ನೊಬ್ಬ ಬಿ.ಜೆ.ಪಿ ನಾಯಕ ಕಳೆದ ಮೂರು ವರ್ಷಗಳಿಂದ ಹರ್ಯಾಣಾದ ಮುಖ್ಯಮಂತ್ರಿ.

ಮಹಿಳೆಯರ ಮೇಲಿನ ದೌರ್ಜನ್ಯಗಳು:

ಕಳೆದ ಮೂರು ವರ್ಷಗಳಲ್ಲಿ ಮಹಿಳೆಯರ ಮೇಲಿನ ಅಪರಾಧಗಳು, ಮೋದಿಯಿಲ್ಲದ 2013ಕ್ಕೆ ಹೋಲಿಸಿದರೆ 5.8% ಹೆಚ್ಚಳ ವಾಗಿದೆ. ಮಹಿಳೆಯರನ್ನು ಮಾತೆಯರು ಸೋದರಿಯರೆಂದು ಗೌರವಿಸುತ್ತೇವೆನ್ನುವ ಬಿ.ಜೆ.ಪಿ.ಯ ರಾಜ್ಯಭಾರದಲ್ಲಿ ಮಹಿಳೆಯರ ಸುರಕ್ಷೆ ಪ್ರಮುಖವೆನಿಸಿಕೊಂಡಿಲ್ಲ. "ನಮ್ಮ ತಾಯಿ ಮತ್ತು ಸೋದರಿಯರನ್ನು" ರಕ್ಷಿಸುತ್ತೇವೆ ಎಂದು ಎದೆ ತಟ್ಟಿ ಬಿಜೆಪಿಯ ಜನ ಬೊಬ್ಬಿಟ್ಟರೂ, ಮೋದಿಯ ಆಡಳಿತದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಅವ್ಯಾಹತವಾಗಿ ಮುಂದುವರಿದೇ ಇದೆ. ಪೋಲೀಸ್ ದಾಖಲೆಗಳಲ್ಲಿನ ಅತ್ಯಾಚಾರ, ಅತ್ಯಾಚಾರ ಯತ್ನ, ಅಪಹರಣ, ಹಲ್ಲೆ, ಕೌಟುಂಬಿಕ ಹಿಂಸೆ ಮುಂತಾದ ಮಹಿಳೆಯರ ಮೇಲಿನ ದೌರ್ಜನ್ಯಗಳು ಎದುರಿಗಷ್ಟೆ ಕಾಣುವ ಕೃತ್ಯಗಳು. ವಾಸ್ತವದಲ್ಲಿ ಅವುಗಳ ಸಂ–ಖ್ಯೆಗೆ ಲೆಕ್ಕವೇ ಇಲ್ಲ. ವರದಕ್ಷಿಣೆ ಮತ್ತು ವರದಕ್ಷಿಣೆ ಸಾವುಗಳ ಸಂಖ್ಯೆ ಕಡಿಮೆ ದಾಖಲಾಗಿರುವುದು ಸಂಘ ಪರಿವಾರ ಮತ್ತು ಬಿಜೆಪಿಯವರ ಧೋರಣೆಯಿಂದಾಗಿ. ವರದಕ್ಷಿಣೆಯಂತಹ ಪಿಡುಗು ಸಂಘಿಗಳಿಗೆ ಸದಾ ಮುಜುಗರದ ವಿಚಾರ.

ಕೋರ್ಟುಗಳಲ್ಲಿ ಮಹಿಳೆಯರ ಮೇಲಿನ ಅಪರಾಧಗಳಲ್ಲಿ ಶಿಕ್ಷೆಯ ಪ್ರಮಾಣ ಮೋದಿಯ ಕಾಲದಲ್ಲೂ ತೀರ ನಿಕೃಷ್ಟವಾಗಿಯೇ ಮುಂದುವರೆದಿದೆ. ಇನ್ನೂ ಕೆಟ್ಟದಾಗಿದೆ ಎಂದರೂ ತಪ್ಪಲ್ಲ. ಅತ್ಯಾಚಾರ, ಅತ್ಯಾಚಾರ ಯತ್ನ, ಅಪಹರಣಗಳಂತಹ ಅಪರಾಧಗಳಿಗೆ ಶಿಕ್ಷೆಯಾಗುತ್ತಿರುವುದು ತುಸು ಏರಿಕೆ ಕಂಡರೂ, ಈಗಲೂ 75% ಮೊಕದ್ದಮೆಗಳಲ್ಲಿ ವಿಚಾರಣೆಯ ಸಮಯದಲ್ಲಿಯೇ ಅಪರಾಧಿಗಳನ್ನು ಖುಲಾಸೆ ಮಾಡಲಾಗುತ್ತಿದೆ. ಇನ್ನು ಮಾನಭಂಗ ಮತ್ತು ಗಂಡ ಮತ್ತಿತರ ನೆಂಟರಿಷ್ಟರಿಂದ ಆಗುವ ಹಿಂಸಾತ್ಮಕ ಹಲ್ಲೆಗಳಂತಹ ಅಪರಾಧಗಳಿಗೆ ಶಿಕ್ಷೆ ನೀಡುವ ದರ ಮೋದಿಯ ಕಾಲದಲ್ಲಿ ಇನ್ನೂ ತಗ್ಗಿದೆ. ಒಟ್ಟಿನಲ್ಲಿ ಮೋದಿಯ ಕಾಲದಲ್ಲಿ ಶಿಕ್ಷೆಯ ದರ 22.4%(2013) ನಿಂದ 21.7%(2015) ಗೆ ಇಳಿದಿದೆ.

ಮುಸ್ಲಿಂ ಮಹಿಳೆಯರ ಬಗ್ಗೆ ಇದ್ದಕ್ಕಿದ್ದ ಹಾಗೆ ಮೋದಿಗೆ ಅಪಾರ ಸಹಾನುಭೂತಿ, ಕಾಳಜಿ ಬಂದಂತಿದೆ. ಕಳೆದೊಂದು ವರ್ಷದಿಂದ ತ್ರಿವಳೀ ತಲಾಕ್‌ನ್ನು ರದ್ದುಗೊಳಿಸುವ ಜವಾಬ್ದಾರಿ ಹೊತ್ತಿದ್ದಾರೆ. ಈ ಪದ್ಧತಿ ನಿಜವಾಗಲೂ ಮಹಿಳಾ ವಿರೋಧಿಯೇ ಅದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಬಿ.ಜೆ.ಪಿ ಸರ್ಕಾರ ನಿಜವಾಗಿಯೂ ಮುಸ್ಲಿಂ ಮಹಿಳೆಯರ ಪರವಾಗಿ ಇದೆಯೇ? ಇಲ್ಲಿ ಪ್ರಾಮಾಣಿಕ ಉದ್ದೇಶವಿದ್ದಂತೆ ಕಾಣುವುದಿಲ್ಲ. ಬಿ.ಜೆ.ಪಿ ಮತ್ತು ಮೋದಿಯವರ ಚಿತ್ತ ಸಮಾನ ನಾಗರಿಕ ಸಂಹಿತೆಯನ್ನು ಹೇರುವತ್ತ ಮಾತ್ರ. ಸಮಾನ ನಾಗರಿಕ ಸಂಹಿತೆ ಎಂದರೆ ದೇಶದ ಬಹುತ್ವ ಗುಣ ಲಕ್ಷಣಗಳನ್ನು ನಾಶಪಡಿಸಿ ಆರ್.ಎಸ್.ಎಸ್ ನ ಕಲ್ಪನೆಯ ಹಿಂದೂ ರಾಷ್ಟ್ರಕ್ಕೆ ದೇಶವನ್ನು ಸಜ್ಜುಗೊಳಿಸುವುದು. ಆದರೆ ಇದೇ ಮೋದಿ ಮತ್ತವರ ಸಂಘ ಗ್ಯಾಂಗ್ ಹಿಂದೂ ಧರ್ಮದ ವಾರಸುದಾರರಂತೆ ವರ್ತಿಸುತ್ತಾರಾದರೂ ಅದೇ ಹಿಂದೂ ಧರ್ಮದೊಳಗಿನ ಮಹಿಳೆಯರನ್ನು ಹಿಂಡಿ ಹಿಪ್ಪೆ ಮಾಡುವ ಹಲವು ಕ್ರೂರ, ಕ್ಷುಲ್ಲಕ ಮಹಿಳಾ ವಿರೋಧೀ ಸಂಪ್ರದಾಯಗಳ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ವರದಕ್ಷಿಣೆ, ವರದಕ್ಷಿಣೆಗಾಗಿ ನಡೆಯುವ ಕೊಲೆಗಳು, ಸ್ತ್ರೀ ಭ್ರೂಣಹತ್ಯೆ ಮತ್ತು ಶಿಶುಹತ್ಯೆ ಇನ್ನಿತರ ಹಲವು ಪದ್ಧತಿಗಳು ಮಹಿಳೆಯರನ್ನು ಪುರುಷರ ಗುಲಾಮರನ್ನಾಗಿಸಿದೆ. ಇವುಗಳ ಬಗ್ಗೆ ತಲೆ ಕೆಡಿಸಿಕೊಳ್ಳದೇ ಕೇವಲ ಮುಸ್ಲಿಂ ಪದ್ಧತಿಗಳ ಸುದ–ಾರಣೆಯ ಬಗ್ಗೆ ಮಾತನಾಡುವುದು ಅವರೊಳಗಿನ ಟೊಳ್ಳುತನವನ್ನು ಬಯಲು ಮಾಡಿದೆ.

ಎಂದ ಮೇಲೆ ಮೋದಿಯ ಮೂರು ವರ್ಷಗಳೆಂದರೆ ಮಹಿಳೆಯರಿಗೆ ಸಮಸ್ಯೆಗಳ ಸರಮಾಲೆ. ಬೆಳಕಿಗೆ ಬರಲಾರದ ನೆರಳಿನಂತೆ ಪುರುಷ ಪ್ರಧಾನ ಸಮಾಜದ ಸೇವಕಿಯಾಗಿ ಉಳಿಯುವುದೇ ಗತಿಯಾಗುತ್ತದೆ.

ನೆರೆಯವರೊಡನೆ ಸಂಘರ್ಷ, ಅಮೆರಿಕದ ಚೇಲಾಗಿರಿ

ಪುಟ 9 ರಿಂದ

ಕಿಂಚಿತ್ತೂ ಕಡಿಮೆಯಾಗಿಲ್ಲ. ಬದಲಾಗಿ ವಿಪರೀತವಾಗಿ ಹೆಚ್ಚಾಗಿವೆ.

ಚೀನಾದ ಜತೆಗಿನ ಸಂಬಂಧಗಳೂ ಇದೇ ರೀತಿಯ ಹಾದಿ ನಡೆದಿದೆ. ಅಹ್ಮದಾಬಾದ್ ನಲ್ಲಿ ಅಬ್ಬರದಿಂದ ಆರಂಭವಾದ ಮೊದಮೊದಲಿನ ಪ್ರೇಮಸಲ್ಲಾಪ ಬೇಗನೆ ಲಡಾಕ್ ವಿವಾದದಿಂದ ವಿರಸಕ್ಕೆ ತಿರುಗಿತು. ದಕ್ಷಿಣ ಚೀನಾ ಸಮುದ್ರ ವಿವಾದದ ಬಗ್ಗೆ ಅಮೆರಿಕದ ನಿಲುವಿಗೆ ಬೆಂಬಲ, ಅಮೆರಿಕ ಮತ್ತು ಜಪಾನ್ ಜತೆ ಯುದ್ಧಾಭ್ಯಾಸದಲ್ಲಿ ಭಾಗವಹಿಸುವಿಕೆ, ಪರಮಾಣು ಪೂರೈಕೆದಾರರ ಗುಂಪಿನಲ್ಲಿ (ಎನ್.ಎಸ್.ಜಿ.) ಭಾರತದ ಸದಸ್ಯತ್ವಕ್ಕೆ ಚೀನಾದ ವಿರೋಧ, ಪಾಕಿಸ್ತಾನದ ಭಯೋತ್ಪಾದಕ ಮಸೂದ್ ಅಝರ್ ನ್ನು ವಿಶ್ವಸಂಸ್ಥೆ ಭಯೋತ್ಪಾದಕ ಎಂದು ಘೋಷಿಸಲು ಚೀನಾದ ವಿರೋಧ, ಅದಕ್ಕೆ 'ಪ್ರತೀಕಾರ'ವಾಗಿ ಇಂಟರ್ ಪೋಲ್ ಭಯೋತ್ಪಾದಕ ಎಂದೂ ಘೋಷಿಸಿರುವ ಚೀನಾದ ಉಯ್ಗುರ್ ನಾಯಕನಿಗೆ ಭಾರತದ ಆಹ್ವಾನ, ಅರುಣಾಚಲ ಪ್ರದೇಶಕ್ಕೆ ದಲೈ ಲಾಮಾ ಭೇಟಿಗೆ ಭಾರತದ ಕುಮ್ಮಕ್ಕು – ಹೀಗೆ ಸರಣಿ ಘಟನಾವಳಿಗಳ ಮೂಲಕ ಎರಡು ದೇಶಗಳ ಸಂಬಂಧ ದಶಕಗಳಲ್ಲೇ ಅತ್ಯಂತ ಕೆಳಮಟ್ಟ ಎನ್ನಬಹುದಾದ ಮಟ್ಟ ಮುಟ್ಟಿದೆ.

ಇದು ಎಂತಹ ಘಟ್ಟ ಮುಟ್ಟಿದೆ ಎಂದರೆ ನೂರು ದೇಶಗಳು ಭಾಗವಹಿಸುತ್ತಿರುವ ಚೀನಾದ 'ಒನ್ ಬೆಲ್ಟ್ ಒನ್ ರೋಡ್' ಪ್ರಾಜೆಕ್ಟಿನಲ್ಲಿ ಭಾಗವಹಿಸಲು ನಿರಾಕರಿಸಿದೆ. ಯುರೇಶಿಯಾ–ಆಫ್ರಿಕಾಗಳ ನಡುವೆ ರೈಲು, ರೋಡು, ಸಮುದ್ರ ಸಂಪರ್ಕ ಸ್ಥಾಪಿಸುವ ಮೂಲಕ ವ್ಯಾಪಾರ ಜಾಲ ಕಟ್ಟುವ 'ಒನ್ ಬೆಲ್ಟ್ ಒನ್ ರೋಡ್' ಪ್ರಾಜೆಕ್ಟಿನ ಚೀನಾ–ಪಾಕಿಸ್ತಾನ ಆರ್ಥಿಕ ಕಾರಿಡಾರ್ ಬಗ್ಗೆ ವಿವಾದದ ಕಾರಣಕ್ಕೆ ಭಾರತ ಅದಕ್ಕೆ ಬಹಿಷ್ಕಾರ ಹಾಕಿದೆ. "ಒನ್ ಬೆಲ್ಟ್ ಒನ್ ರೋಡ್"ಗೆ ಬಹಿಷ್ಕಾರ ಹಾಕಲು ಕುಮ್ಮಕ್ಕು ಕೊಟ್ಟ ಅಮೆರಿಕವೇ ಈ ಬಗೆಗಿನ ಅಂತರ್ರಾಷ್ಟ್ರೀಯ ಸಭೆಗೆ ಪ್ರತಿನಿಧಿ ಕಳಿಸಿದೆ! ಆದರೆ ಭಾರತ ಬಹಿಷ್ಕಾರ ಹಾಕಿ ಜಗತ್ತಿನಲ್ಲಿ ಒಂಟಿಯಾಗಿದೆ.

ನೇಪಾಳದ ವಿಷಯದಲ್ಲೂ ಹೀಗೆ ಆಗಿದೆ. ನೇಪಾಳದ ಮಾದೇಸಿಗಳ ದೀರ್ಘ ಮುಷ್ಕರಕ್ಕೆ ಕುಮ್ಮಕ್ಕು ಕೊಟ್ಟು ನೇಪಾಳ–ಭಾರತ ವ್ಯಾಪಾರಕ್ಕೆ ದಿಗ್ಬಂಧನ ವಿಧಿಸಿದಂತಾಗಿತ್ತು. ನೇಪಾಳದ ಭಾರತ–ಪರ ಶಕ್ತಿಗಳನ್ನೂ ರೊಚ್ಚಿಗೆಬ್ಬಿಸಿದ ಈ ಕ್ರಮ ಭಾರತದ ಬಗ್ಗೆ ನೇಪಾಳದಲ್ಲಿ ಜನ ಹೊಂದಿದ್ದ ಉತ್ತಮ ಧೋರಣೆಗೆ ಕುತ್ತು ತಂದಿದೆ. ಇತ್ತೀಚೆಗೆ ಆಧಿತ್ಯನಾಥರಂತಹವರು ನೇಪಾಳದಲ್ಲಿ ಆಕ್ರೋಶಕ್ಕೆ ಗುರಿಯಾಗಿದ್ದ ಹಿಂದೂ ರಾಜಾಡಳಿತವನ್ನು ಪುನಃ ಸ್ಥಾಪಿಸಬೇಕೆಂದು ಒತ್ತಾಯಿಸಿರುವುದು ಇದನ್ನು ಇನ್ನಷ್ಟು ಬಿಗಡಾಯಿಸಲಿದೆ.

ಅಮೆರಿಕ ಅಣು ಒಪ್ಪಂದ ಖಲಾಸ್!

ವಿದೇಶಾಂಗ ವ್ಯವಹಾರಗಳಲ್ಲಿ ಒಂದೇ ಒಂದು ಉತ್ತಮ ಬೆಳವಣಿಗೆ ಎಂದರೆ ಎಡ ಪಕ್ಷಗಳು ವಿರೋಧಿಸಿದ್ದ ಅಮೆರಿಕ ಅಣು ಒಪ್ಪಂದ ಖಲಾಸ್ ಆಗಿದ್ದು! ಇದೇನು ಮೋದಿ ಸರಕಾರದಿಂದಾಗಿ ಅಲ್ಲ. ಅಮೆರಿಕ ಅಣು ಒಪ್ಪಂದದ ಪ್ರಕಾರ ಭಾರತದಲ್ಲಿ ಅಣು ಸ್ಥಾವರಗಳನ್ನು ಕಟ್ಟಬೇಕಾಗಿದ್ದ ವೆಸ್ಟಿಂಗ್ ಹೌಸ್ ಕಂಪನಿ ದೀವಾಳಿಯಾಗಿದೆ. ತೀರಾ ತಲೆತಿರುಕರು ಮಾತ್ರ ದೀವಾಳಿಯಾದ ಕಂಪನಿಗೆ ಅಣು ಸ್ಥಾವರಗಳನ್ನು ಕಟ್ಟಲು ಹೇಳಬಹುದು. ಆದರೆ ಎನ್ರೋನ್ ನ ಜತೆ ಒಪ್ಪಂದದಲ್ಲಿ ಅದರ ಎಲ್ಲಾ ನಷ್ಟಗಳಿಗೆ ಗ್ಯಾರಂಟಿ ಕೊಟ್ಟ ವಾಜಪೇಯ ಸರಕಾರದಂತೆ, ವೆಸ್ಟಿಂಗ್ ಹೌಸ್ ಗೆ ಮೋದಿ ಸರಕಾರ ಏನು ಗ್ಯಾರಂಟಿ ಕೊಟ್ಟಿದೆ ಎಂಬುದು ದೇಶವನ್ನು ಭೂತದಂತೆ ಕಾಡಿಸದು ಎಂದು ಹೇಳುವಂತಿಲ್ಲ.

ಇಸ್ರೇಲ್

ರಾಷ್ಟ್ರೀಯ ವಿಮೋಚನಾ ಹೋರಾಟಗಳನ್ನು ಬೆಂಬಲಿಸುವ ನೀತಿಯನ್ನು ಭಾರತ ಬಿಟ್ಟುಕೊಟ್ಟಿದ್ದು, ಜಗತ್ತಿನ ಏಕಮಾತ್ರ ಆಕ್ರಮಿತ ದೇಶವಾದ ಪ್ಯಾಲೆಸ್ಟಿನಿನ ಆಕ್ರಮಣಕಾರ ಇಸ್ರೇಲ್ ನ್ನು ಖಂಡಿಸಲು ತಯಾರಿಲ್ಲ. ಭಾರತ ಈಗ ಇಸ್ರೇಲಿನ ರಕ್ಷಣಾ ಉಪಕರಣಗಳ ಮತ್ತು ಶಸ್ತ್ರಾಸ್ತ್ರಗಳ ನಂಬರ್ 1 ಖರೀದಿದಾರ. ಕಳೆದ 15 ವರ್ಷಗಳಲ್ಲಿ 1 ಸಾವಿರ ಕೋಟಿ ಡಾಲರುಗಳಷ್ಟು ರಕ್ಷಣಾ ಉಪಕರಣಗಳನ್ನು ಖರಿದಿಸಿದ್ದು, ಇದು ಇಸ್ರೇಲಿನದ್ದೇ ಸೈನ್ಯ ಖರೀದಿಸಿದ್ದಕ್ಕಿಂತ ಹೆಚ್ಚು! ರಕ್ಷಣಾ ಉಪಕರಣಗಳ ಪೂರೈಕೆಯಲ್ಲಿ ದೊಡ್ಡ ವಿಳಂಬಗಳು ಮತ್ತು ಭ್ರಷ್ಟಾಚಾರ ಕಂಡು ಬಂದಿದ್ದರೂ ಇದು ಮುಂದುವರೆದಿದೆ. ಬಾರಾಕ್ ನೌಸೇನಾ ಕ್ಷಿಪಣಿ ಪೂರೈಕೆಯಲ್ಲಿ 6 ವರ್ಷಗಳ ವಿಳಂಬ ಆಗಿದ್ದರೂ, ಭೂ ಮತ್ತು ವಾಯುಸೇನೆಗೆ 263 ಕೋಟಿ ಡಾಲರುಗಳ ಬಾರಾಕ್ ಕ್ಷಿಪಣಿಗಳಿಗೆ ಆರ್ಡರು ಕೊಡಲಾಗಿದೆ.

ಈ ಜುಲೈಯಲ್ಲಿ ಮೋದಿಯ ಇಸ್ರೇಲ್ ಭೇಟಿಗೆ ಭವ್ಯ ಸ್ವಾಗತ ಸಿಗಲು ಇವೆಲ್ಲಾ ಮಾಡಲಾಗುತ್ತಿದೆಯಂತೆ. ಹಿಂದೆ ಫ್ರಾನ್ಸಿಗೆ 850 ಕೋಟಿ ಡಾಲರುಗಳ ರಾಫೆಲ್ ಯುದ್ಧ ವಿಮಾನಗಳ ಆರ್ಡರನ್ನು ಹೀಗೆ ಫ್ರಾನ್ಸ್ ಭೇಟಿ ಸಮಯದಲ್ಲಿ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ರಾತ್ರೋರಾತ್ರಿ ಕೊಡಲಾಗಿತ್ತು. ಹೀಗೆ ಮೋದಿಗೆ ಸ್ವಾಗತದ ಭವ್ಯತೆ ಹೆಚ್ಚಲು ವಿದೇಶಾಂಗ ನೀತಿ ಮತ್ತು ರಕ್ಷಣಾ ಖರೀದಿಗಳು ಬಳಕೆಯಾಗುತ್ತಿವೆ, ಭಾರತದ ದೀರ್ಘಕಾಲೀನ ಹಿತಾಸಕ್ತಿಗಳನ್ನು ರಕ್ಷಿಸಲು ಅಲ್ಲ.

ಆಫ್ರಿಕಾ

ಆಫ್ರಿಕನ್ ವಿದ್ಯಾರ್ಥಿಗಳ ಮೇಲೆ ದೆಹಲಿ ಮತ್ತಿತರ ನಗರಗಳಲ್ಲಿ ಗಂಭೀರ ದಾಳಿಗಳಲ್ಲಿ ಕಂಡ ಜನಾಂಗೀಯವಾದದ ಬಗ್ಗೆ ನಿರ್ಲಕ್ಷ ಸೃಷ್ಟಿಸಿದ ವಿದೇಶಾಂಗ ನೀತಿ ಬಿಕ್ಕಟ್ಟು ವಿದೇಶಾಂಗ ನೀತಿ ಬಗ್ಗೆ ಮೋದಿ ಸರಕಾರದ ಗೊಂದಲದ ಪ್ರತೀಕವಾಗಿತ್ತು. ಆಫ್ರಿಕನ್ ವಿದ್ಯಾರ್ಥಿಗಳ ಮೇಲೆ ಗಂಭೀರ ದಾಳಿಗಳಿಗೆ ಮೋದಿ ಸರಕಾರ ತೋರಿದ ನಿರ್ಲಕ್ಷದಿಂದ ಆಕ್ರೋಶಕ್ಕೆ ಒಳಗಾದ 44 ಆಫ್ರಿಕನ್ ದೇಶಗಳ ರಾಯಭಾರಿಗಳು ದೆಹಲಿಯಲ್ಲಿ ಸಭೆ ನಡೆಸಿ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿ ಸ್ವತಂತ್ರ ತನಿಖೆ ನಡೆಸಬೇಕೆಂದು ಒತ್ತಾಯಿಸಿದರು.

ಸ್ವತಂತ್ರ ವಿದೇಶಾಂಗ ನೀತಿಗೆ ಎಳ್ಳು ನೀರು ಬಿಟ್ಟ ಮೋದಿ ಸರಕಾರದ ವಿದೇಶ ನೀತಿಯಿಂದಾಗಿ ಹಲವು ಪ್ರಮುಖ ಅಂತರ್ರಾಷ್ಟ್ರೀಯ ವೇದಿಕೆಯಲ್ಲಿ ಭಾರತದ ಪ್ರತಿಷ್ಠೆ ಕುಂದಿದೆ. ಮೊದಲ ಬಾರಿಗೆ ಅಲಿಪ್ತ ದೇಶಗಳ ಕೂಟದ (ನಾಮ್) ಸ್ಥಾಪಕನಾಗಿದ್ದ ಭಾರತದ ಪ್ರಧಾನಿ ಅದರ ಶೃಂಗಸಭೆಯಲ್ಲಿ ಭಾಗವಹಿಸಲಿಲ್ಲ. ಜಾಗತಿಕವಾಗಿ ಭಾರತವನ್ನು ಅಮೆರಿಕದ ಚೇಲಾ ಆಗಿ ನೋಡಲಾಗುತ್ತಿದೆ. ಅದರ ಹೈಪರ್–ರಾಷ್ಟ್ರೀಯತೆ ಸಾಮ್ರಾಜ್ಯಶಾಹಿ ವಿರೋಧದ ಮೇಲೆ ಆಧಾರಿತವಾಗಿಲ್ಲ. ಬರಿಯ ಅಬ್ಬರ ಮತ್ತು ಬೊಗಳೆ ಬಡಾಯಿ ಮೇಲೆ ಆಧಾರಿತವಾಗಿದೆ. ಆದ್ದರಿಂದ ಅದು ವಿದೇಶಾಂಗ ನೀತಿಯನ್ನು ಸಮರ್ಥವಾಗಿ ನಿರ್ವಹಿಸುವಲ್ಲಿ ಸೋತಿದೆ. ಮೋದಿ ಸರಕಾರದ ವಿದೇಶಾಂಗ ನೀತಿಯ ವಿಜಯಗಳು ಬಾರತದ ಟಿವಿ ಸ್ಟುಡಿಯೋಗಳಿಗೆ ಸೀಮಿತವಾಗಿದೆ.

ಕೆ.ಆರ್.ಶ್ರೀಯಾನ್: ಮೆಲುದನಿಯ ಕಮ್ಯೂನಿಸ್ಟ್ ಹೋರಾಟಗಾರ

ವಾಸುದೇವ ಉಚ್ಚಿಲ

ಆರು ದಶಕಗಳಿಗೂ ಮೀರಿ ಕಮ್ಯೂನಿಸ್ಟ್ ಪಕ್ಷದಲ್ಲಿ ಸಕ್ರಿಯರಾಗಿರುವ ಕೆ.ಆರ್.ಶ್ರೀಯಾನ್ ಸ್ವಾತಂತ್ರ್ಯೋತ್ತರ ಭಾರತ ಹಾಗೂ ದಕ್ಷಿಣ ಕನ್ನಡದ ರಾಜಕೀಯ ಸಾಮಾಜಿಕ ತಲ್ಲಣ ಹಾಗೂ ಪರಿವರ್ತನೆಗೆ ಸಾಕ್ಷೀಪ್ರಜ್ಞೆಯಾಗಿದ್ದು, ಕರಾವಳಿ ಕರ್ನಾಟಕದ ಮುನ್ನಡೆಗೆ ಚಾಲಕಶಕ್ತಿಯಾಗಿ ಕಾರ್ಯನಿರತರಾದವರು. ತಮ್ಮ 83ನೇ ವಯಸ್ಸಿನಲ್ಲಿ ಅವರು ಬರೆದ ಆತ್ಮಕತೆ 'ನನ್ನ ಜೀವನ ಕಥನದ ನೆನಪಿನಂಗಳದಿಂದ' ಮೇ 28 ರಂದು ಸಾಹಿತಿ ಹಾಗೂ ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯಿಲಿಯವರಿಂದ ಲೋಕಾರ್ಪಣೆಗೊಂಡಿದೆ. ಈ ಸಂದರ್ಭದಲ್ಲಿ ಕೆ.ಆರ್.ಶ್ರೀಯಾನ್ ಕುರಿತು ಬರಹದ ಭಾಗ 2. ಭಾಗ 1 ಸಂಚಿಕೆ 22 ರಲ್ಲಿ ಪ್ರಕಟವಾಗಿತ್ತು.

ಕೆ.ಆರ್.ಶ್ರೀಯಾನ್ ಅವರ ಶಿಸ್ತು ಮತ್ತು ಬದ್ಧತೆಗಳಿಂದಾಗಿ ಕಮ್ಯೂನಿಸ್ಟ್ ಪಕ್ಷದಲ್ಲಿ ಹೆಚ್ಚೆಚ್ಚು ಜವಾಬ್ದಾರಿಗಳು ಅವರಿಗೆ ಬಂದುವು. ಪಕ್ಷದ 'ಅರುಣ' ಪತ್ರಿಕೆ ಪಕ್ಷದ್ದೇ ಪ್ರೆಸ್‌ನಲ್ಲಿ ಮುದ್ರಣವಾಗುತ್ತಿತ್ತು. 1957ರಲ್ಲಿ ರೈತ ಸಂಘದ ಜವಾಬ್ದಾರಿಯಿಂದ ಪ್ರಿಂಟಿಂಗ್ ಪ್ರೆಸ್‌ನ ಜವಾಬ್ದಾರಿ ಶ್ರೀಯಾನರಿಗೆ ಒದಗಿತು. ಪ್ರಕಾಶನ ಹಾಗೂ ಪುಸ್ತಕ ಮಾರಾಟವನ್ನು ಪಕ್ಷ 'ಪ್ರಭಾತ್ ಬುಕ್ ಹೌಸ್' ಮೂಲಕ ಆರಂಭಿಸಿದಾಗ, ಅದರ ಜವಾಬ್ದಾರಿಯನ್ನು ಶ್ರೀಯಾನರು ನಿರ್ವಹಿಸಿದ್ದರು. 1964ರಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಪಕ್ಷ ವಿಭಜನೆಯಾಯಿತಷ್ಟೆ. ದ.ಕ. ಜಿಲ್ಲೆಯಲ್ಲಿ ಹೆಚ್ಚಿನ ನಾಯಕರು ಸಿಪಿಐ ಪಕ್ಷದ ಜೊತೆಗಿದ್ದರು. ಸಿಪಿಐ(ಎಂ) ಜೊತೆಗೆ ದೃಢವಾಗಿ ನಿಂತವರು ಎಂ.ಎಚ್.ಕೃಷ್ಣಪ್ಪ, ಎ.ಕೃಷ್ಣ ಶೆಟ್ಟಿ, ಪಿ.ರಾಮಚಂದ್ರರಾವ್, ಕೆ.ಆರ್.ಶ್ರೀಯಾನ್ ಮಾತ್ರ. ಇವರುಗಳ ನಾಯಕತ್ವದಲ್ಲಿ ಕಾರ್ಮಿಕ ಹಾಗೂ ರೈತ ಸಂಘಟನೆಗಳ ಬಹುಜನ ವಿಭಾಗ ಸಿಪಿಐ(ಎಂ) ಪಕ್ಷವನ್ನು ಬೆಂಬಲಿಸಿ ಆಧರಿಸಿತು. ವಿಭಜನೆಯ ಪರಿಣಾಮ ಕಾರ್ಮಿಕ, ರೈತ ಸಂಘಟನೆಗಳ ಮೇಲೂ ಆಯಿತು. ಇಂದಿಗೂ ಸಿಪಿಐ(ಎಂ) ಬೆಂಬಲಿಸುವ ಕರ್ನಾಟಕ ಪ್ರಾಂತ ರೈತ ಸಂಘ, ಕಾರ್ಮಿಕ ಸಂಘಟನೆ ಸಿಐಟಿಯು ಜನಹೋರಾಟದ ಮುಂಚೂಣಿಯಲ್ಲಿರುವುದು ಎಲ್ಲರಿಗೂ ತಿಳಿದದ್ದೇ ಆಗಿದೆ. ಸಿಪಿಐ(ಎಂ)ಗೆ ಹೊಸ ಪತ್ರಿಕೆಯ ಅವಶ್ಯಕತೆ ಉಂಟಾಯಿತು. ಮಂಗಳೂರಿನಲ್ಲಿ ಪಕ್ಷ ವಿಭಜನೆಯ ಬೆನ್ನಿಗೇ ಆರಂಭವಾದ "ಐಕ್ಯರಂಗ' ಪತ್ರಿಕೆಯ ವ್ಯವಸ್ಥಾಪಕರಾಗಿ–ಅದು 1978ರಲ್ಲಿ ಬೆಂಗಳೂರಿಗೆ ಸ್ಥಾನಪಲ್ಲಟವಾಗುವವರೆಗೂ– ಕೆ.ಆರ್.ಶ್ರೀಯಾನ್ ಕಾರ್ಯ ನಿರ್ವಹಿಸಿದ್ದಾರೆ. 1956ರಲ್ಲಿ ಭಾರತ ಪಾಕಿಸ್ಥಾನ ಗಡಿ ಘರ್ಷಣೆ ಹಿನ್ನೆಲೆ ಕಮ್ಯೂನಿಸ್ಟ್ ಪಕ್ಷಗಳ ಮೇಲೆ ದಾಳಿ ನಡೆದ ಸಂದರ್ಭದಲ್ಲಿ ಸಂಪಾದಕರಾದ ಪಿ.ರಾಮಚಂದ್ರರಾಯರನ್ನು ಒಂದೂವರೆ ವರ್ಷ ಬಂಧಿಸಿ ಸೆರೆಮನೆಯಲ್ಲಿಟ್ಟಿದ್ದಾಗ ಶ್ರೀಯಾನ್‌ರವರೇ ಪತ್ರಿಕೆ ಸಿದ್ಧಪಡಿಸುತ್ತಿದ್ದರು. ಮುಂದೆ ತುರ್ತು ಪರಿಸ್ಥಿತಿ ವೇಳೆ ಪ್ರಮುಖ ಸಿಪಿಐ(ಎಂ) ನಾಯಕರು ಭೂಗತರಾಗಿದ್ದಾಗಲೂ ಶ್ರೀಯಾನ್‌ರವರೇ ಪತ್ರಿಕೆಯನ್ನು ಮುನ್ನಡೆಸಿದರು. ಅಲ್ಲದೆ ಕಾರ್ಮಿಕ ಸಂಘಟನೆಗಳು ಸಿಐಟಿಯುವಿಗೆ ಸಂಯೋಜನೆಗೊಂಡ ಬಳಿಕ ಶ್ರೀಯಾನರು ವಿವಿಧ ಸಂದರ್ಭಗಳಲ್ಲಿ ಹಂಚಿನ ಕಾರ್ಮಿಕರ ಸಂಘಟನೆ, ಬೀಡಿ ಕಾರ್ಮಿಕರ ಜಿಲ್ಲಾ ಫೆಡರೇಶನ್, ಗೋಡಂಬಿ ಕಾರ್ಮಿಕರ ಯೂನಿಯನ್ ಮೊದಲಾದ ಮುಖ್ಯ ಕಾರ್ಮಿಕ ಸಂಘಟನೆಗಳಲ್ಲದೆ ಇತರ ಕಾರ್ಮಿಕ ಸಂಘಟನೆಗಳಿಗೂ ಮುಖಂಡತ್ವ ನೀಡಿದ್ದರು ಹಾಗೂ ಹಲವು ಹೋರಾಟಗಳನ್ನು ನಡೆಸಿದ್ದರು.

1969ರಲ್ಲಿ ವಿಜಯಾ ಅವರೊಂದಿಗೆ ಕೆ.ಆರ್.ಶ್ರೀಯಾನರ ವಿವಾಹವಾಯಿತು. ಇವರಿಗೆ ನಾಲ್ವರು ಮಕ್ಕಳು – ಮೂರು ಗಂಡು, ಒಂದು ಹೆಣ್ಣು. ಎಲ್ಲರಿಗೂ ಮದುವೆಯಾಗಿದೆ. ಶ್ರೀಯಾನರದು ಸುಖೀ ಸಂಸಾರ. ಶ್ರೀಮತಿ ವಿಜಯಾ ಅವರು ಕಳೆದ ವರ್ಷವಷ್ಟೇ ಅನಾರೋಗ್ಯದಿಂದ ತೀರಿಕೊಂಡಿದ್ದಾರೆ.

ರೈತ ಸಂಘದ ಮೂಲಕ ನಡೆದ ಗೇಣಿ ರೈತರ ಹೋರಾಟ 1974 ರಲ್ಲಿ ರಾಜ್ಯ ಸರಕಾರ ಭೂಸುಧಾರಣಾ ಶಾಸನ ಜಾರಿಗೊಳಿಸುವವರೆಗೂ ನಡೆದಿದೆ. ಅವುಗಳಲ್ಲಿ ಎಂಎಚ್.ಕೃಷ್ಣಪ್ಪ ಅವರ ನೇತೃತ್ವದಲ್ಲಿ 1966 ಮತ್ತು 1974ರಲ್ಲಿ ಬೆಂಗಳೂರಿನವರೆಗೆ ಜಿಲ್ಲೆಯಿಂದ ನಡೆದ ರೈತ ಜಾಥಾಗಳು ಪ್ರಮುಖವಾಗಿವೆ. ಮುಂದಿನ ಹಂತದಲ್ಲಿ ಭೂನ್ಯಾಯ ಮಂಡಲಿಗಳಲ್ಲಿ ರೈತಸಂಘಕ್ಕೆ ಪ್ರಾತಿನಿಧ್ಯ ನೀಡಬೇಕೆಂದು ಹೋರಾಟ ನಡೆದಿದೆ. ಈ ಮಧ್ಯೆ ನವಮಂಗಳೂರು ಬಂದರಿಗೆ ಹತ್ತಿರವಿರುವ ಕೂಳೂರು, ದೇರೆಬೈಲ್, ಕೋಡಿಕಲ್ ಗ್ರಾಮಗಳ ಭೂಸ್ವಾಧೀನಕ್ಕೆ ಸರಕಾರ ಆಜ್ಞೆ ಪ್ರಕಟಿಸಿದಾಗ 1970ರಲ್ಲಿ ಕೆ.ಆರ್.ಶ್ರೀಯಾನ್ ಅವರ ನೇತೃತ್ವದಲ್ಲಿ



ನಡೆದ ಹೋರಾಟದಿಂದಲಾಗಿ ಸರಕಾರ ಭೂಸ್ವಾಧೀನ ಆಜ್ಞೆಯನ್ನು ಹಿಂದೆಗೆದುಕೊಂಡಿತು.

1978ರಲ್ಲಿ ನಡೆದ ಸಿಪಿಐ(ಎಂ) ಪಕ್ಷದ ದ.ಕ. ಜಿಲ್ಲಾ ಸಮ್ಮೇಳನದಲ್ಲಿ ಕೆ.ಆರ್.ಶ್ರೀಯಾನ್ ಅವರು ಪಕ್ಷದ ಜಿಲ್ಲಾ ಕಾರ್ಯದರ್ಶಿಯಾಗಿ ಆಯ್ಕೆಗೊಂಡವರು, 30 ವರ್ಷಕಾಲ ಅಂದರೆ 2008ರ ವರೆಗೆ ಜಿಲ್ಲೆಯಲ್ಲಿ ಪಕ್ಷವನ್ನು ಬೆಳೆಸಲು ಕಾರಣರಾದರು. ಪಕ್ಷದ ರಾಜ್ಯ ಸಮಿತಿಗೂ, 1982ರಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಲಿಗೂ ಆಯ್ಕೆಯಾಗಿ 2015ರ ವರೆಗೂ ಪಕ್ಷದ ರಾಜ್ಯ ಸಮಿತಿ ಕಾರ್ಯನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಪಕ್ಷದ ರಾಜ್ಯ ಕಾರ್ಯದರ್ಶಿಯಾಗಿದ್ದ ಎಂ.ಎಚ್.ಕೃಷ್ಣಪ್ಪನವರು ಸೈದ್ಧಾಂತಿಕ ಭಿನ್ನಾಭಿಪ್ರಾಯದಿಂದ 1978ರಲ್ಲಿ ಪಕ್ಷವನ್ನು ತೊರೆದುದರಿಂದ, ಪ್ರಭಾವೀ ನಾಯಕರಾಗಿದ್ದ ಅವರ ಪ್ರಭಾವದಿಂದ ಜಿಲ್ಲೆಯ ಪಕ್ಷ ಸದಸ್ಯರನ್ನು ಸಿಪಿಐ(ಎಂ) ಒಳಗೆ ಉಳಿಸಿಕೊಳ್ಳುವಲ್ಲಿ ಕೆ.ಆರ್.ಶ್ರೀಯಾನ್ ಮತ್ತು ಪಿ.ರಾಮಚಂದ್ರರಾವ್ ತುಂಬಾ ಶ್ರಮಿಸಬೇಕಾಯಿತು. ಮುಂದಿನ ದಿನಗಳಲ್ಲಿ ಪಕ್ಷದ ಜಿಲ್ಲೆಯ ಜವಾಬ್ದಾರಿ ಬಂದುದರಿಂದ, ಕೆ.ಆರ್.ಶ್ರೀಯಾನ್ ಅವಿಭಜಿತ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಸಂಚರಿಸಿ ಪಕ್ಷವನ್ನು ಪುನಸ್ಸಂಘಟಿಸಿದರು. ಈ ಪ್ರಯತ್ನಗಳಿಂದಾಗಿ ಇವತ್ತು ಕೂಡಾ ದ.ಕ.ಮತ್ತು ಉಡುಪಿಗಳಲ್ಲಿ ಸಿಪಿಐ(ಎಂ) ಪಕ್ಷ ಬಲಿಷ್ಟವಾಗಿದೆ.

1969ರಲ್ಲಿ ಮಂಗಳೂರು ತಾಲೂಕು ಬೋರ್ಡಿಗೆ ನಡೆದ ಚುನಾವಣೆಯಲ್ಲಿ ಗೆದ್ದ ಐವರು ಕಮ್ಯೂನಿಸ್ಟರಲ್ಲಿ ಒಬ್ಬರು ಕೆ.ಆರ್.ಶ್ರೀಯಾನ್. ಅವರು ಪದವು ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಉಳ್ಳಾಲ ವಿಧಾನಸಭಾ ಕ್ಷೇತ್ರದಲ್ಲಿ 1989 ಮತ್ತು 1994 ರಲ್ಲಿ ಕೆ.ಆರ್. ಶ್ರೀಯಾನ್ ಸಿಪಿಐ(ಎಂ) ನಿಂದ ಸ್ಪರ್ಧಿಸಿದ್ದರು. 1989ರಲ್ಲಿ ಕೇವಲ 5100 ಮತಗಳಿಂದ ಹಿಂದೆ ಬಿದ್ದು ದ್ವಿತೀಯ ಸ್ಥಾನಿಯಾಗಿದ್ದರು. 1991 ರಲ್ಲಿ ಉಡುಪಿ ಲೋಕಸಭಾ ಕ್ಷೇತ್ರದಲ್ಲೂ ಪಕ್ಷದ ವತಿಯಿಂದ ಸ್ಪರ್ಧಿಸಿದ್ದರು. ಏನಿದ್ದರೂ ಕಮ್ಯೂನಿಸ್ಟರಿಗೆ ಚುನಾವಣೆಯ ಗೆಲುವಷ್ಟೇ ಪ್ರಧಾನವಾಗಿರುವುದಿಲ್ಲವಷ್ಟೇ?

ಜಿಲ್ಲೆಯ ಪಕ್ಷದ ಮುಖ್ಯಸ್ಥಾನಕ್ಕೆ ಬಂದ ಮೇಲೆ ಹಲವು ಜನಪರ ಚಳುವಳಿಗಳಲ್ಲಿ ಕೆ.ಆರ್.ಶ್ರೀಯಾನ್ ಪ್ರಮುಖ ಪಾತ್ರ ವಹಿಸಿದ್ದಾರೆ. ಬೀಡಿ ಕಾರ್ಮಿಕರು ಪ್ರಾವಿಡೆಂಟ್ ಫಂಡಿಗಾಗಿ ನಡೆಸಿದ ಜೂನ್ 1982ರ ಅನ್ನಸತ್ಯಾಗ್ರಹ, ಧೂಮಪಾನ ನಿಷೇಧ ಕಾಯಿದೆ ವಿರುದ್ಧವಾಗಿ ಆಗಸ್ಟ್ 2016ರಲ್ಲಿ ನಡೆದ ಪ್ರತಿಭಟನಾ ರ್‍ಯಾಲಿ, ಕೋಟ್ಪಾ ಕಾಯಿದೆ ವಿರುದ್ಧ ಮಾರ್ಚ್ 2015ರ ಪ್ರತಿಭಟನೆ, ಆಗಸ್ಟ್ 1988ರಲ್ಲಿ ರೇಶನ್ ಕೋಟಾ ಹೆಚ್ಚಿಸಲು ಆಗ್ರಹಿಸಿದ ಅನ್ನಕ್ಕಾಗಿ ಹೋರಾಟ, ಅಡಿಕೆ ತೆಂಗು ಬೆಳೆಗಾರರ ರಕ್ಷಣೆಗಾಗಿ 1985, 1988, 2000 ಮತ್ತು 2010ರಲ್ಲಿ ನಡೆಸಿದ ಸಮಾವೇಶ ಹಾಗೂ ಹೋರಾಟಗಳು, ನಿವೇಶನ ರಹಿತರು ಹಕ್ಕುಪತ್ರ ವಂಚಿತರು ನಡೆಸುತ್ತಿರುವ 1984 ಮತ್ತು 2011 ರಿಂದಿತ್ತೀಚೆಗಿನ ಭೂಮಿ ಹೋರಾಟಗಳು, ಗ್ಯಾಟ್ ಒಪ್ಪಂದದ ವಿರುದ್ಧ ಸಪ್ಟೆಂಬರ್ 1994ರ ಹೋರಾಟ, ಕೊಂಕಣ ರೈಲ್ವೇ ಹಾಗೂ ತೈಲಾಗಾರ ಸ್ಥಾಪಿಸಲು ಒತ್ತಾಯಿಸಿ 1985ರ ರೈಲ್ ರೋಖೋ ಮತ್ತು ಫೆಬ್ರವರಿ 1988ರ ವಾಹನ ಜಾಥಾಗಳು, ಮಂಗಳೂರು–ಬೆಂಗಳೂರು ರೈಲು ರಸ್ತೆ ಬ್ರಾಡ್‌ಗೇಜ್‌ಗೆ ಪರಿವರ್ತಿಸಲು 2007ರಲ್ಲಿ ನಡೆಸಿದ ರೈಲುತಡೆ ಕಾರ್ಯಕ್ರಮಗಳು, ಚರ್ಚ್‌ದಾಳಿ ಮತೀಯ ಗಲಭೆ ಸಂದರ್ಭಗಳಲ್ಲಿ ನಡೆಸಿದ ಹತ್ತಾರು ಪ್ರತಿಭಟನೆ ಹಾಗೂ ಪ್ರದರ್ಶನಗಳು, ಮಡೆಸ್ನಾನ ಪಂಕ್ತಿಭೇದಗಳ ವಿರುದ್ಧ ನಡೆದ ಪ್ರತಿಭಟನೆ ಹಾಗೂ ಜಾಥಾಗಳು – ಹೀಗೆ ನೂರಾರು ಜನಚಳುವಳಿಗಳಲ್ಲಿ ಕೆ.ಆರ್.ಶ್ರೀಯಾನರು ಜಿಲ್ಲೆಯ ಕಮ್ಯೂನಿಸ್ಟ್ ಚಳುವಳಿಗೆ ಮಾರ್ಗದರ್ಶಕರಾಗಿದ್ದರು.

ಸಿಪಿಐ(ಎಂ) ಪಕ್ಷದ ಜಿಲ್ಲಾ ಕಚೇರಿ ಸ್ವಂತ ಕಟ್ಟಡ 'ಎಕೆಜಿ ಭವನ' 1997 ನವಂಬರದಲ್ಲಿ ಉದ್ಘಾಟನೆಗೊಂಡಿದೆ. ಒಂದೇ ವರ್ಷದ ಅವಧಿಯಲ್ಲಿ ನಿಧಿ ಸಂಗ್ರಹಿಸಿ ಕಾಮಗಾರಿ ಪೂರ್ಣಗೊಳಿಸುವಲ್ಲಿ ಕೆ.ಆರ್.ಶ್ರೀಯಾನರ ಕರ್ತೃತ್ವಶಾಲಿತ್ವ ಕಾಣಿಸುತ್ತದೆ. 'ಸಮುದಾಯ' ಸಾಂಸ್ಕೃತಿಕ ಸಂಘಟನೆಯ ಮಂಗಳೂರು ಘಟಕ 1977ರಲ್ಲಿ ಪ್ರಾರಂಭವಾದಾಗ ಅದರ ಪ್ರಥಮ ಕಾರ್ಯದರ್ಶಿಯಾಗಿ ಪ್ರಸನ್ನರ ನಾಟಕ ಪ್ರದರ್ಶಿಸಿದವರು ಕೆ.ಆರ್.ಶ್ರೀಯಾನರು. 1980ರಲ್ಲಿ ದ.ಕ.ಪಕ್ಷಕ್ಕೆ ಆರ್ಥಿಕ ಮುಗ್ಗಟ್ಟು ಉಂಟಾದಾಗ, ಶ್ರೀಯಾನ್‌ರೇ 'ಇಲ್ಲ್ ದೆತ್ತಿ ಮಗೆ' ನಾಟಕ ಬರೆದು ನಿರ್ದೇಶಿಸಿ ನೀಡಿದ ಪ್ರದರ್ಶನದಿಂದ

ಪುಟ 13 ಕ್ಕೆ

ಸಾರ್ವಜನಿಕ ಶಿಕ್ಷಣದ ನಾಶ–ವ್ಯಾಪಾರೀಕರಣ–ಕೇಸರೀಕರಣದ ತ್ರಿಶೂಲ

ಪುಟ 9 ರಿಂದ

ತಾಯಿ ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ದುಬಾರಿ ಶುಲ್ಕ ಕೊಟ್ಟು ಸೇರಿಸಬೇಕಾಗಿ ಬರುತ್ತಿದೆ. ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿ(ಸಿಬಿಎಸ್‌ಇ) ಶಿಕ್ಷಣದ ಹೆಸರಲ್ಲಿ ದುರಾಚರಣೆಗಳನ್ನು ನಡೆಸಬಾರದೆಂದು ಸುತ್ತೋಲೆ ಕಳಿಸಿದ್ದರೂ ಯಾರೂ ಅ ಬಗ್ಗೆ ಕ್ಯಾರೇ ಅನ್ನುತ್ತಿಲ್ಲ. ಕೇಂದ್ರ–ರಾಜ್ಯ ಸರಕಾರಗಳೂ ಮೌನವಾಗಿವೆ. ಏಕೆಂದರೆ ಶಿಕ್ಷಣದ ಖಾಸಗೀಕರಣ–ವ್ಯಾಪಾರೀಕರಣವೇ ಅವುಗಳ ಧೋರಣೆಯೂ ಆಗಿದೆ.

ಶೈಕ್ಷಣಿಕ ಸುಧಾರಣೆಯ ಹೆಸರಲ್ಲಿ 'ಒಳ್ಳೆ ದಾಖಲೆ' ಇರುವ ಕಾಲೇಜು, ವಿವಿಗಳಿಗೆ 'ಅಟಾನಮಿ' (ಸ್ವಾಯತ್ತತೆ)ಯ ಹೆಸರಲ್ಲಿ ಅವರು ತಮ್ಮದೇ ಕೋರ್ಸುಗಳನ್ನು ರೂಪಿಸಿ ತಮಗೆ ಸರಿಕಂಡಂತೆ ಶುಲ್ಕಗಳನ್ನು ವಿಧಿಸಲು ಸ್ವಾತಂತ್ರ್ಯ ನೀಡುವ ಯೋಜನೆ ಸರಕಾರದ ಶೈಕ್ಷಣಿಕ ಖರ್ಚುಗಳನ್ನು ಕಡಿಮೆ ಮಾಡಿಕೊಳ್ಳುವ ಹುನ್ನಾರವಲ್ಲದೆ ಬೇರೇನೂ ಅಲ್ಲ.

ಈ 'ಸ್ವಾಯತ್ತತೆ'ಯ ಪರಿಕಲ್ಪನೆ ತಂದದ್ದು ವಾಜಪೇಯಿ ನೇತೃತ್ವದ ಎನ್‌ಡಿಎ–1 ಸರಕಾರ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅದು ನೇಮಿಸಿದ ಬಿರ್ಲಾ–ಅಂಬಾನಿ ಸಮಿತಿಯ ಶಿಫಾರಸು ಇದು. ಈಗ 575 'ಸ್ವಾಯತ್ತ' ಶಿಕ್ಷಣ ಸಂಸ್ಥೆಗಳಿವೆ. ಇದರಲ್ಲಿ 167 ಸರಕಾರೀ ಸಂಸ್ಥೆಗಳು. ಈ ಸರಕಾರಿ ಸ್ವಾಯತ್ತ ಕಾಲೇಜುಗಳಲ್ಲಿ ಹೆಚ್ಚಿನವು ಈಗ ಸ್ವಾಯತ್ತತೆಯ ಶೈಕ್ಷಣಿಕ ಮತ್ತು ಹಣಕಾಸು ಅಂಶಗಳಲ್ಲಿ ತೊಂದರೆಗಳಲ್ಲಿ ಸಿಲುಕಿಕೊಡಿವೆ. ಈ ಇಡೀ ಸ್ವಾಯತ್ತತೆಯ ಪ್ರಕ್ರಿಯೆಯ ದಾವೆಗಳಿಗೂ ಮತ್ತು ವಾಸ್ತವಿಕತೆಗೂ ಹೊಂದಾಣಿಕೆ ಇರುವಂತೆ ಕಾಣುತ್ತಿಲ್ಲ.

ಈ 'ಸ್ವಾಯತ್ತತೆ'ಗೂ ಶೈಕ್ಷಣಿಕ ಶ್ರೇಷ್ಟತೆಗೂ ತಳುಕು ಹಾಕುವ ಕ್ರಿಯೆಯನ್ನೂ ಈ ಸರಕಾರ 2016ರಲ್ಲಿ ಶೈಕ್ಷಣಿಕ ಸಂಸ್ಥೆಗಳ ರಾಷ್ಟ್ರೀಯ ರ್‍ಯಾಂಕಿಂಗ್ ವ್ಯವಸ್ಥೆಯನ್ನು ತಂದಿದೆ.. ಈ 'ಸ್ವಾಯತ್ತತೆ' ಮತ್ತು 'ರ್‍ಯಾಂಕಿಂಗ್' ನಿಜವಾಗಿ ಶಿಕ್ಷಣದ ಖಾಸಗೀಕರಣದ ವಾಹಕಗಳಷ್ಟೇ ಎಂಬುದೀಗ ಸ್ಪಷ್ಟವಾಗುತ್ತಿದೆ. ಶಿಕ್ಷಣ ಒಂದು ವ್ಯಾಪಾರ ಆಗುತ್ತಿದೆ, ಅಂದರೆ ವೆಚ್ಚದಾಯಕವಾಗುತ್ತಿದೆ, ಆ ಮೂಲಕ ಅದು ಕೆಲವೇ ಉಳ್ಳವರಿಗೆ ಸೀಮಿತಗೊಳ್ಳುತ್ತದೆ, ಬಹುಪಾಲು ಜನರ ಅಳವಿಗೆ ನಿಲುಕದಾಗುತ್ತಿದೆ.

ಖಾಸಗಿ ಶಿಕ್ಷಣದ ವ್ಯಾಪಾರಿಗಳಿಗೆ ಅನುಕೂಲವಾಗುವಂತೆ ಒಂದೆಡೆ ಶುಲ್ಕಗಳನ್ನು ಹೆಚ್ಚಿಸಿ, ಇನ್ನೊಂದೆಡೆಗಳಲ್ಲಿ ಶೈಕ್ಷಣಿಕ ಸಾಲಕ್ಕೆ ಉತ್ತೇಜನೆ ನೀಡಿ, ವಿದ್ಯಾರ್ಥಿದೆಸೆಯಿಂದಲೇ ಸಾಲದ ಬಲೆ ಹೆಣೆಯಲಾಗುತ್ತಿದೆ.

ಕೇಸರೀಕರಣದ ದಾಳಿ

ಸಂಘ ಪರಿವಾರದ ಹಿಂದುತ್ವ ಅಜೆಂಡಾದಲ್ಲಿ ಶಿಕ್ಷಣಕ್ಕೆ ಮೊದಲಿಂದಲೂ ಬಹಳ ಪ್ರಾಮುಖ್ಯತೆ ಕೊಡಲಾಗಿದೆ. ಆರೆಸ್ಸೆಸ್ ನಡೆಸುವ ಶಾಲೆಗಳ ಮೂಲಕ ಮಕ್ಕಳ ತಲೆಗಳಲ್ಲಿ ಅದನ್ನು ತುರುಕುವುದು, ಶಾಲಾ ಪಠ್ಯಕ್ರಮವನ್ನು, ಚರಿತ್ರೆಯ ಪುಸ್ತಕಗಳನ್ನು ಬದಲಿಸುವುದು, ಉನ್ನತ ಶಿಕ್ಷಣ ಸಂಸ್ಥೆಗಳಿಗೆ ತಮ್ಮ 'ಭಕ್ತರು'ಗಳನ್ನು ತುಂಬಿ ಅವನ್ನು ಬುಡಮೇಲು ಮಾಡುವುದು ಇತ್ಯಾದಿ ಅದರ ಕಾರ್ಯವೈಖರಿ. ಅದು ಜಾರಿಯಾಗುತ್ತಲೇ ಇದೆ. ಇತ್ತ ನವ–ಉದಾರವಾದದ ಅಡಿಯಲ್ಲಿ ಶಿಕ್ಷಣದ ವ್ಯಾಪಾರೀಕರಣ ವಿಶ್ವವಿದ್ಯಾಲಯಗಳಿಗೂ ಒಟ್ಟು ಸಾಮಾಜಿಕ ಬೆಳವಣಿಗೆಗೂ ಇರುವ ಕೊಂಡಿಯನ್ನು ಕಳಚಿ ಹಾಕುತ್ತಿದೆ.

ಮೋದಿಯವರು ಅಧಿಕಾರಕ್ಕೆ ಬಂದ 100ದಿನಗಳಲ್ಲೇ ಹೊಸ ಶಿಕ್ಷಣ ಧೋರಣೆಯನ್ನು ತರುವುದಾಗಿ ಹೇಳಿದ್ದರು. ಆದರೆ ಮೂರು ವರ್ಷಗಳು ಕಳೆದರೂ ಅದರ ಪತ್ತೆಯಿಲ್ಲ. ಟಿಎಸ್‌ಆರ್ ಸುಬ್ರಮಣ್ಯ ಸಮಿತಿ ತಯಾರಿಸಿದ ವರದಿಯನ್ನು ಬದಿಗಿಡಲಾಗಿದೆ. ಮಾನವ ಸಂಪನ್ಮೂಲ ಮಂತ್ರಾಲಯದ ಕರಡು ವರದಿಗೂ ಅದೇ ಗತಿಯಾಗಿದೆ. ವಾಸ್ತವವಾಗಿ ಈ ಸರಕಾರ ಶಿಕ್ಷಣ ಕ್ಷೇತ್ರದಲ್ಲಿ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂಬುದು ಸ್ಪಷ್ಟವಿಲ್ಲ.

ಆದರೆ ಅದಕ್ಕೊಂದು ಸಾರ್ವಜನಿಕ ಧೋರಣೆ ಇಲ್ಲವೆಂದರೆ ಅದರರ್ಥ ಅದರ ಬಳಿ ಒಂದು ಕಣ್ಣೋಟವೇ ಇಲ್ಲವೆಂದಲ್ಲ. ಅದು ಇಬ್ಬಗೆಯ ಗುರಿಗಳನ್ನಿಟ್ಟುಕೊಂಡು ನಿರ್ದಯವಾಗಿ ಸಾಗುತ್ತಿದೆ– ಒಂದು, ಸಾರ್ವಜನಿಕ ಶಿಕ್ಷಣವನ್ನು ನಾಶ ಮಾಡುವುದು, ಇನ್ನೊಂದು ಪ್ರಾಥಮಿಕ ಹಂತದಿಂದ ಹಿಡಿದು ಉನ್ನತ ಶಿಕ್ಷಣದ ವರೆಗೆ ಖಾಸಗೀಕರಣ ಮತ್ತು ಕೇಸರೀಕರಣಕ್ಕೆ ದಾರಿ ಮಾಡಿಕೊಡುವುದು.

ಮೋದಿ ಸರಕಾರದ ಮೂರು ವರ್ಷಗಳು ಸಾರ್ವಜನಿಕ ಶಿಕ್ಷಣ ಮತ್ತು ಸಬಲೀಕರಣ ಅದರ ಆದ್ಯತೆಗಳಲ್ಲ ಎಂಬುದನ್ನಂತೂ ಸ್ಪಷ್ಟ ಗೊಳಿಸಿವೆ. ಶಿಕ್ಷಣಕ್ಕೆ ಸರಕಾರ ಖರ್ಚು ಮಾಡುವುದು ವ್ಯರ್ಥ, ಜನ ಅದನ್ನು ಖಾಸಗಿಯಾಗಿ ಮಾಡಿಕೊಳ್ಳಲಿ ಎಂದು ಅದು ನಂಬಿದಂತಿದೆ. ಅದರಿಂದಾಗಿ ಇದುವರೆಗೆ ಪ್ರಜಾಪ್ರಭುತ್ವ ಚಳುವಳಿಗಳ ಹೋರಾಟಗಳಿಂದ ಆಗಿರುವ ಅಲ್ಪ–ಸ್ವಲ್ಪ ಶಿಕ್ಷಣ–ಸ್ನೇಹಿ, ವಿದ್ಯಾರ್ಥಿ–ಸ್ನೇಹಿ ರಚನೆಗಳನ್ನೂ ಕಳಚಿ ಹಾಕಲಾಗುತ್ತಿದೆ.

ಆದರೆ ಇವೆಲ್ಲದಕ್ಕೂ ಸವಾಲುಗಳು, ಪ್ರತಿರೋಧಗಳು ಕೂಡ ಹೆಚ್ಚುತ್ತಿವೆ ಎಂಬುದು ಆಶಾದಾಯಕ ಸಂಗತಿ. ಕೇಸರಿ ಗಲಭೆಕೋರರಿಂದ ಹಲ್ಲೆಗಳು ಹೆಚ್ಚುತ್ತಿರುವಂತೆ ಇನ್ನೊಂದೆಡೆಯಲ್ಲಿ ಹೊಸ–ಹೊಸ ವಿಭಾಗಗಳು ಪ್ರತಿರೋಧದ ಕಣಕ್ಕೆ ಇಳಿಯುತ್ತಿವೆ, ಅಂಚಿಗೆ ತಳ್ಳಲ್ಪಟ್ಟ ವಿಭಾಗಗಳ ಹೊಸ–ಹೊಸ ರಾಜಕೀಯ ಅಭಿವ್ಯಕ್ತಿಗಳು ಕಾಣ ಬರುತ್ತಿವೆ.

ಈಗ ಜಿಡಿಪಿ ಲೆಕ್ಕಾಚಾರದಲ್ಲೂ ನೋಟು ರದ್ದತಿಯ ನಿಜ ಬಯಲು



ಮೇ 31ರಂದು ಕೇಂದ್ರೀಯ ಸಾಂಖ್ಯಿಕ ಸಂಘಟನೆ(ಸಿಎಸ್‌ಒ) 2016-17ರ ನಾಲ್ಕನೇ ತ್ರೈಮಾಸಿಕದ ಜಿಡಿಪಿ ಲೆಕ್ಕಾಚಾರಗಳನ್ನು ಪ್ರಕಟಿಸಿದೆ. ಅದರ ಪ್ರಕಾರ ಜಿಡಿಪಿ ಬೆಳವಣಿಗೆ ದರ 6.1%ಕ್ಕೆ ಇಳಿದಿದೆ. ಮೂರು ತಿಂಗಳ ಹಿಂದೆ ಅದು ಮೂರನೆ ತ್ರೈಮಾಸಿಕದ ಜಿಡಿಪಿ ಬೆಳವಣಿಗೆ ದರ 7% ಎಂದು ಪ್ರಕಟಿಸಿದಾಗ ಅದು ನೋಟುರದ್ದತಿ ಕುರಿತ ಟೀಕೆಗಳನ್ನೆಲ್ಲ ಗಾಳಿಗೆ ತೂರಿದೆ, ನೋಟು ರದ್ದತಿಯಿಂದ ಆರ್ಥಿಕ ಬೆಳವಣಿಗೆಗೇನೂ ತೊಂದರೆ ಆಗಿಲ್ಲ ಎಂದು ಸರಕಾರದ ಬೆಂಬಲಿಗರು ಕುಣಿದಾಡಿದರು, ಟೀಕಾಕಾರರನ್ನು ಗೇಲಿ ಮಾಡಿದರು. ಅವರೆಲ್ಲ ವಾಸ್ತವಿಕತೆ ತಿಳಿಯಲಾರದ ಪೊಳ್ಳು ಪಂಡಿತರು ಎಂದು ನಗೆಯಾಡಿದರು. ಪ್ರಧಾನ ಮಂತ್ರಿಗಳಂತೂ 'ಹಾರ್ವರ್ಡ್ ವರ್ಸಸ್ ಹಾರ್ಡ್ ವರ್ಕ್'(ಪಾಂಡಿತ್ಯದ ಎದುರು ಕಠಿಣ ಶ್ರಮ) ಎಂಬ ಹೊಸದೊಂದು ಪದಪುಂಜವನ್ನೇ ಸೃಷ್ಟಿಸಿದರು.. ಆದರೆ ಆಗ ಅವರಿಗೆ ನೆರವಾದ ಸಿಎಸ್‌ಒ ಈಗ ಪ್ರಕಟಿಸಿರುವ 4ನೇ ತ್ರೈಮಾಸಿಕದ ಅಂದರೆ ಜನವರಿ-ಮಾರ್ಚ್ 2017 ಲೆಕ್ಕಾಚಾರದಲ್ಲಿ ಅವರ ನೆರವಿಗೆ ಬಂದಿಲ್ಲ, ಮಾತ್ರವಲ್ಲ, ಅವರ ಗೇಲಿಗಳನ್ನೇ ಈಗ ಗಾಳಿಗೆ ಹಿಡಿದಿದೆ.

ಸಿಎಸ್‌ಒ ದ 3ನೇ ತ್ರೈಮಾಸಿಕ ಲೆಕ್ಕಾಚಾರದ ಆಧಾರದ ಮೇಲೆ 4ನೇ ತ್ರೈಮಾಸಿಕದಲ್ಲಿ 7.1% ಜಿಡಿಪಿ ಬೆಳವಣಿಗೆ ದಾಖಲಾಗಬಹುದು ಎಂದು ಹೇಳಲಾಗುತ್ತಿತ್ತು. ನಿಜವಾಗಿ ಅದು ಬರೋಬ್ಬರಿ 1% ಕಡಿಮೆಯಾಗಿರುವುದು ನೋಟು ರದ್ದತಿ ದೇಶದ ಆರ್ಥಿಕದ ಮೇಲೆ ತೀವ್ರ ಪರಿಣಾಮ ಬೀರಿರುವುದು ಖಂಡಿತ ಎಂಬುದನ್ನು ತೋರಿಸಿ ಕೊಟ್ಟಿದೆ ಎಂದು ಆರ್ಥಿಕ ತಜ್ಞರು ಹೇಳುತ್ತಿದ್ದಾರೆ. ಇದು ಕೇವಲ ಔಪಚಾರಿಕ ವಲಯದ ಮಾಹಿತಿಗಳನ್ನು ಆಧರಿಸಿರುವಂತದ್ದು, ನೋಟು ರದ್ದತಿ ಇನ್ನೂ ಹೆಚ್ಚಾಗಿ ತಟ್ಟಿರುವ ಅನೌಪಚಾರಿಕ ವಲಯವನ್ನೂ ಪರಿಗಣಿಸಿದರೆ ನಿಜವಾದ ಜಿಡಿಪಿ ಬೆಳವಣಿಗೆ ದರ ಇನ್ನೂ ಕಡಿಮೆ ಇರುವ ಸಂಭವವೇ ಹೆಚ್ಚು ಎನ್ನಲಾಗಿದೆ.

ಜಿಡಿಪಿಗಿಂತಲೂ, ಅಂದರೆ ಒಟ್ಟು ಉತ್ಪನ್ನಕ್ಕಿಂತಲೂ ಹೆಚ್ಚಾಗಿ ಒಟ್ಟು ಮೌಲ್ಯ ಸೇರ್ಪಡೆ(ಜಿವಿಎ) ದರ ಆರ್ಥಿಕ ಬೆಳವಣಿಗೆಯನ್ನು ಹೆಚ್ಚು ಸ್ಪಷ್ಟವಾಗಿ ಬಿಂಬಿಸುವ ಲೆಕ್ಕಾಚಾರ ಎಂದು ಈಗ ಹಲವು ಆರ್ಥಿಕ ತಜ್ಞರು ಭಾವಿಸುತ್ತಿದ್ದಾರೆ. ಇದಂತೂ ಜಿಡಿಪಿಗಿಂತ ಹೆಚ್ಚಿನ ಪ್ರಮಾಣ ಇಳಿಕೆ ದಾಖಲಿಸಿದೆ. ಕಳೆದ ವರ್ಷ ಈ ಅವಧಿಯಲ್ಲಿ 8.7% ಇದ್ದದ್ದು ಈಗ 5.6%ಕ್ಕೆ ಇಳಿದಿದೆ. 3ನೇ ತ್ರೈಮಾಸಿಕದಲ್ಲಿ ಇದು 6.7% ಇತ್ತು. ಸರಕಾರ ಖರ್ಚುಗಳನ್ನು, ಅಂದರೆ ಸಾರ್ವಜನಿಕ ಆಡಳಿತ, ರಕ್ಷಣೆ ಮತ್ತು ಸೇವಾ ವಲಯವನ್ನು ಬಿಟ್ಟರೆ ಇದು ಕೇವಲ 4.1% ಎಂದೂ ಈ ಅಂಕಿ-ಅಂಶಗಳು ಹೇಳುತ್ತಿವೆ. ಕೈಗಾರಿಕಾ ಉತ್ಪಾದನೆ ಮತ್ತು 3ನೇ ತ್ರೈಮಾಸಿಕದ 8.2% ದಿಂದ 5.3% ಕ್ಕೆ ಇಳಿದಿದೆ, ಕಟ್ಟಡ ನಿರ್ಮಾಣ ಬೆಳವಣಿಗೆಯೇ ಇಲ್ಲ, ಇಳಿಕೆಯಾಗಿದೆ, 3ನೇ ತ್ರೈಮಾಸಿಕದಲ್ಲಿ 3.4% ಇದ್ದದ್ದು 4ನೇ ತ್ರೈಮಾಸಿಕದಲ್ಲಿ -3.7%ಕ್ಕೆ ತೀವ್ರವಾಗಿ ಇಳಿದಿದೆ. ಸಾಗಾಣಿಕೆ ವಲಯದಲ್ಲೂ ಜಿವಿಎ ಬೆಳವಣಿಗೆ ದರ 8.3% ದಿಂದ 6.5%ಕ್ಕೆ ಇಳಿದಿದೆ.

ನೋಟು ರದ್ದತಿಯಿಂದ ಆರ್ಥಿಕ ಇನ್ನೂ ವೇಗವಾಗಿ ಬೆಳೆಯುತ್ತದೆ ಎಂಬುದೇ ಟೊಳ್ಳು ಪಾಂಡಿತ್ಯ ಎಂಬುದನ್ನು ಈಗ ಸರಕಾರದ ಒಡೆತನದ ಸಿಎಸ್‌ಒ ನೇ ತೆರೆದಿಟ್ಟಿದೆ. ಮೂರು ವರ್ಷಗಳ 'ಸಾಧನೆ'ಗಳ ಮಹೋತ್ಸವದ ಸಂದರ್ಭದಲ್ಲಿ ಇದು ಬಯಲಾಗಿದೆ.

ಸಾರ್ವಜನಿಕ ವಲಯದ ಉದ್ದಿಮೆಗಳ ಖರ್ಚಿನಲ್ಲಿ 'ಅಚ್ಛೇ ದಿನ್'ಗಳ 3ನೇ ವಾರ್ಷಿಕೋತ್ಸವ!

ಸಾರ್ವಜನಿಕ ವಲಯದ ಉದ್ದಿಮೆ(ಪಿಎಸ್‌ಯು)ಗಳು ಮತ್ತು ಸರ್ಕಾರಿ ಒಡೆತನದ ಸಂಸ್ಥೆಗಳು ಮೋದಿ ಸರಕಾರದ 3ನೇ ವಾರ್ಷಿಕೋತ್ಸವದ ಖರ್ಚುಗಳನ್ನು ವಹಿಸಿಕೊಳ್ಳಬೇಕೆಂದು ಕೇಂದ್ರ ಸರಕಾರ ಹೇಳಿರುವುದಾಗಿ ಟೈಮ್ಸ್ ನ್ಯೂಸ್ ನೆಟ್‌ವರ್ಕ್ ಮೇ 30ರಂದು ವರದಿ ಮಾಡಿದೆ. ಸರಕಾರದ 'ಉತ್ತಮ ಆಳ್ವಿಕೆ'ಯ ಫಲಿತಾಂಶಗಳನ್ನು ಜನತೆಗೆ ತಿಳಿಸುವುದು ಇದರ ಉದ್ದೇಶವಂತೆ. 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಸಮ್ಮೇಳನ್ 'ಎಂಬ ಈ ಇವೆಂಟ್‌ಗಳು 543 ಜಿಲ್ಲೆಗಳಲ್ಲಿ ಮೇ 27ರಿಂದ ಜೂನ್ 18 ರ ನಡುವೆ ನಡೆಯುತ್ತಿವೆ. ಇದರ ಖರ್ಚು-ವೆಚ್ಚಗಳನ್ನು ನಿಭಾಯಿಸಲು 45 ಘಟಕಗಳಿಗೆ ಅಧಿಕೃತ ನಿರ್ದೇಶನ ಹೋಗಿದೆಯಂತೆ. ತೈಲ ವಲಯದ ಘಟಕಗಳು, ಅಂದರೆ ಇಂಡಿಯನ್ ಆಯಿಲ್, ಹಿಂದುಸ್ತಾನ್ ಪೆಟ್ರೋಲಿಯಂ, ಒಎನ್‌ಜಿಸಿ ಮುಂತಾದವುಗಳಿಗೆ 223 ಇವೆಂಟ್‌ಗಳ ಹೊಣೆ ಹೇರಲಾಗಿದೆ. ವಿದ್ಯುತ್ ಉತ್ಪಾದನೆ ವಲಯದ ಘಟಕಗಳು, ಹೆದ್ದಾರಿ ಪ್ರಾಧಿಕಾರ, ಬಂದರುಗಳು, ಹುಡ್ಕೊ , ಬಿಎಸ್‌ಎನ್‌ಎಲ್ ಇತ್ಯಾದಿ ಸರಕಾರೀ ಸಂಸ್ಥೆಗಳು ಈ ಪಟ್ಟಿಯಲ್ಲಿವೆ.

ಈ ಇವೆಂಟ್‌ಗಳ ಮೊದಲು ಮತ್ತು ನಂತರ ಈ ಎಲ್ಲ ಘಟಕಗಳು ಏನೇನೆಲ್ಲ ಮಾಡಬೇಕು ಎಂದು ಪಟ್ಟಿ ಮಾಡಿ ಕೊಡಲಾಗಿದೆಯಂತೆ. ಇವೆಂಟ್‌ನ ಮೊದಲಿನ ಪ್ರಚಾರ, 2500 ಮಂದಿ ಭಾಗವಹಿಸಬಹುದಾದಂತಹ ಸಭಾಂಗಣ ಬುಕ್ಕಿಂಗ್ ಇತ್ಯಾದಿ, ಎರಡು ಗಂಟೆಗಳ ಕಾರ್ಯಕ್ರಮ, ಇವೆಂಟ್ ನಂತರದ ಚಟುವಟಿಕೆಗಳು, ಅಂದರೆ ಪ್ರೆಸ್ ಕಾನ್ಫರೆನ್ಸ್, ಫೋಟೋಗಳನ್ನು, ಸುದ್ದಿ ಕ್ಲಿಪಿಂಗ್‌ಗಳನ್ನು ಸಿದ್ಧಪಡಿಸಿ ಮಾಧ್ಯಮಗಳಿಗೆ ಕೊಡುವುದು ಎಲ್ಲವನ್ನೂ ಈ ಸಾರ್ವಜನಿಕ ವಲಯದ ಉದ್ದಿಮೆಗಳು ಮಾಡಬೇಕಾಗಿದೆ. ಇದಕ್ಕಾಗಿ ನೋಡಲ್ ಅಧಿಕಾರಿಗಳನ್ನು ನೇಮಿಸಬೇಕು ಎಂದೂ ಈ ಅಧಿಕೃತ ನಿರ್ದೇಶನದಲ್ಲಿ ಹೇಳಲಾಗಿದೆಯಂತೆ.

ಪ್ರಚಾರ-ಜಾಹೀರಾತೇ ಜೀವಾಳವಾಗಿರುವ, ಆಳುವ ಪಕ್ಷದ 'ಮಾರ್ಗದರ್ಶಕ' ಹಿರಿಯರಿಂದಲೇ 'ಒಳ್ಳೆಯ ಇವೆಂಟ್ ಮಾಸ್ಟರ್' ಎನಿಸಿಕೊಂಡವರು ತಮ್ಮ ಇವೆಂಟ್‌ಗಳಿಗೆ ತಾವು ಇಷ್ಟಪಡದ ಸಾರ್ವಜನಿಕ ವಲಯದ ಉದ್ದಿಮೆಗಳನ್ನೇ ಹಿಂಡಲು ನಿರ್ಧರಿಸಿದ್ದಾರೆ, ಈ ರೀತಿ ಹಿಂಡಿ-ಹಿಪ್ಪೆ ಮಾಡಿದ ನಂತರ ಅವು ನಷ್ಟದಲ್ಲಿವೆ ಎಂದು ಬೊಬ್ಬೆ ಹೊಡೆಯುವುದು ಖಾಸಗೀಕರಣವಾಲಾಗಳಿಗೆ ಇನ್ನೂ ಸುಲಭ ಮಾಡಿಕೊಟ್ಟಂತೆಯೂ ಆಗುತ್ತದೆ. ಅಂತೂ ಸಾರ್ವಜನಿಕ ಹಣದಲ್ಲಿ ಬಿಜೆಪಿಯ ಸುಳ್ಳಿನ ಕಂತೆಗಳ ಪ್ರಚಾರ ಎಂದು ಈ ಬಗ್ಗೆ ಟಿಪ್ಪಣಿ ಮಾಡುತ್ತ ಸೀತಾರಾಮ್ ಯೆಚುರಿ ಹೇಳಿದ್ದಾರೆ.



ವ್ಯಂಗ್ಯಚಿತ್ರ : ಸತೀಶ್ ಆಚಾರ್ಯ

ಈ ಪರಿಯ 'ಸ್ವಚ್ಛ ಭಾರತ'

ಉತ್ತರಪ್ರದೇಶದ ಕುಶಿನಗರ್ ಜಿಲ್ಲೆಯ ಮೈನ್‌ಪುರ್ ದೀನಾಪಟ್ಟಿ ಎಂಬ ಹಳ್ಳಿಯ ಸುಮಾರು ನೂರು ಮುಶಹರ್ ದಲಿತ ಕುಟುಂಬಗಳಿಗೆ ಕಳೆದ ವಾರ ಲೈಫ್‌ಬಾಯ್ ಮತ್ತು ಘಡೀ ಸೋಪುಗಳನ್ನು ಮತ್ತು ಒಂದೊಂದು ಶಾಂಪೂ ಪೊಟ್ಟಣಗಳನ್ನು ಹಂಚಲಾಯಿತಂತೆ. ಏಕೆಂದರೆ ಮೇ 26 ಕ್ಕೆ ಅಲ್ಲಿಗೆ ರಾಜ್ಯ ಮುಖ್ಯಮಂತ್ರಿಗಳ ಭೇಟಿಯ ಕಾರ್ಯಕ್ರಮವಿತ್ತು. ಆದಿನ ನಡೆಯಲಿದ್ದ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸುವ ಮುನ್ನ ತಮ್ಮನ್ನು ಸ್ವಚ್ಛ ಪಡಿಸಿಕೊಂಡು ಬರಬೇಕೆಂದು ಅವರಿಗೆ ಸೂಚಿಸಲಾಗಿತ್ತು ಎಂದು ವರದಿಯಾಗಿದೆ,

ಸಹಜವಾಗಿ ಈ ಸುದ್ದಿ ಕೆಲವು ಪತ್ರಕರ್ತರನ್ನು ಅಲ್ಲಿಗೆ ಆಕರ್ಷಿಸಿತು. ಅವರು ಕಲೆ ಹಾಕಿದ ಕೆಲವು ಮಾಹಿತಿಗಳು:

"ಅಂಗನವಾಡಿ ಮಹಿಳೆಯರು ನನಗೆ ಸೋಪುಗಳನ್ನು ಕೊಟ್ಟರು. ಆದರೆ ಶಾಂಪೂ ಸಿಗಲಿಲ್ಲ. ಸಭೆಗೆ ಹೋಗುವ ಮೊದಲು ಈ ಸೋಪುಗಳನ್ನು ಬಳಸಿ ಸ್ನಾನ ಮಾಡಿ ಹೋಗು ಎಂದರು. ನಾವು ಆಗಲೇ ಸೋಪುಗಳನ್ನು ಬಲಸುತ್ತಿದ್ದೇವೆ, ಇಲಲಿನ ಅಂಗಡಿಯಿಂದ ಖರೀದಿಸುತ್ತೇವೆ. ಕೇವಲ ಈ ಎರಡು ಸೋಪಿನಿಂದ ಏನು ವ್ಯತ್ಯಾಸವಾಗುತ್ತದೆ?" -ಅರವತ್ತು ದಾಟಿದ ಮಹಿಳೆಯ ಪ್ರಶ್ನೆ ಇದು.

ಹೆಚ್ಚಾಗಿ ಹುಲ್ಲು ಗುಡಿಸಲುಗಳನ್ನೇ ಹೊಂದಿರುವ ಈ ಹಳ್ಳಿಯಲ್ಲಿ ಆ ಒಂದು ವಾರ ಬಹಳ ಚಟುವಟಿಕೆಗಳಿದ್ದವಂತೆ. ಸಿಮೆಂಟ್, ಇಟ್ಟಿಗೆಗಳು ಬಂದವು, ಹೊಸ ಕಾಲ್ದಾರಿಗಳು ಆದವು, ಶೌಚಾಲಯಗಳಿಗೆ ಹತ್ತಾರು ಗುಂಡಿಗಳು ತೋಡಲ್ಪಟ್ಟವು ಮತ್ತು ಎಲ್ಲಕ್ಕೂ ಹೆಚ್ಚಾಗಿ ಸ್ವಚ್ಛ ಬಾರತ್ ಮಿಶನ್ ಪೋಸ್ಟರುಗಳು ರಾರಾಜಿಸಿದವು.

ಇಲ್ಲಿನ ಮುಖ್ಯ ಸಮಸ್ಯೆ ಆದಾಯದ ಕೊರತೆ, ಅದರಿಂದ ಮಕ್ಕಳಿಗೆ ಪೌಷ್ಟಿಕ ಆಹಾರದ ಕೊರತೆ. ಯಾರು ಸೋಪುಗಳನ್ನು ಹಂಚಿದರೋ ಗೊತ್ತಾಗಿಲ್ಲ ಎಂದು ಒಬ್ಬ ಅಂಗನವಾಡಿ ಕಾರ್ಯಕರ್ತೆ ಹೇಳಿದಳು. ಜಿಲ್ಲಾ ಆಡಳಿತಗಾರರಿಗೂ ಗೊತ್ತಿಲ್ಲ. ಇದು ಸ್ವಚ್ಛತೆಯನ್ನು ಪ್ರೋತ್ಸಾಹಿಸುವ ಕಾರ್ಯಕ್ರಮವಾಗಿತ್ತು, ಯಾರೇ ಕೊಟ್ಟಿರಲಿ, ಒಳ್ಳೆಯದೇ ತಾನೇ ಎಂದು ಜಿಲ್ಲಾ ಮ್ಯಾಜಿಸ್ಟ್ರೇಟ್ ಹೇಳಿದರಂತೆ. ಈ ಗ್ರಾಮದ ಪ್ರಧಾನರಿಗೂ ಯಾರು ಕೊಟ್ಟರು ಎಂದು ಗೊತ್ತಿಲ್ಲ. ಆದರೆ ಈ ದಲಿತರಿಗೆ ಮತ್ತು ಕೃಷಿ ಕೂಲಿಕಾರರಿಗೆ ಶುಚಿತ್ವದ ಸೂಚನೆಗಳನ್ನು ಕೊಟ್ಟಿರುವುದು ಇದೇ ಮೊದಲೇನಲ್ಲವಂತೆ.

'ನವಭಾರತ' ಸೃಷ್ಟಿಸುತ್ತಿರುವ ಈ ವಾರದ ಮೂರು ಘಟನೆಗಳು

ಮೊದಲನೆಯದು, ಕಾಶ್ಮೀರದ ಶ್ರೀನಗರದಲ್ಲಿ ಕಾಶ್ಮೀರಿ ಯುವಕರು ಒಬ್ಬ ಸಿಆರ್‌ಪಿಎಫ್ ಸೈನಿಕನನ್ನು ಥಳಿಸುತ್ತಿರುವ ದೃಶ್ಯ ಎನ್ನಲಾದ ವಿಡಿಯೋ. ದಯವಿಟ್ಟು ಯಾರಾದರೂ ಇದನ್ನು ನ್ಯೂಸ್ ಚಾನಲ್‌ಗಳಿಗೆ ತಲುಪಿಸಿ ಎಂದು ಈ ವಾಟ್ಸ್‌ಆಪ್ ಸಂದೇಶ ಕಳಿಸಿದಾತ ಬರೆದಿದ್ದ. ಅದರೆ ಇದೇ ವೀಡಿಯೋ ಕೆಲವು ದಿನಗಳ ಹಿಂದೆ ಪಶ್ಚಿಮ ಬಂಗಾಲದಲ್ಲಿ ಒಬ್ಬ ಹಿಂದುವನ್ನು ಕೊಲ್ಲುತ್ತಿರುವ ದೃಶ್ಯ ಎಂದು ವೈರಲ್ ಆಗಿತ್ತು, ಅದಕ್ಕೆ ಮೊದಲು ಬಿಹಾರದ ನವಡದಲ್ಲಿ ಹಿಂದೂ ಒಬ್ಬನನ್ನು ಮುಸ್ಲಿಮರು ಕೊಲ್ಲುತ್ತಿರುವುದು ಎಂದು ಪ್ರಚಾರವಾಗಿತ್ತು. ವಾಸ್ತವವಾಗಿ ಇದು ಎಪ್ರಿಲ್ 1ರಂದು ಬಾಂಗ್ಲಾದೇಶದ ಕೊಮಿಲ್ಲಾ ಸಬ್‌ಡಿವಿಜನ್ನಿನ ಚಿತಸ್‌ನಲ್ಲಿ ಅವಾಮಿ ಲೀಗ್ ಮುಖಂಡ ಮೊನಿರ್ ಸರ್ಕಾರ್‌ರನ್ನು ಕೊಂದವರು ಎಂದು ಗುಮಾನಿಯಿರುವ ಇಬ್ಬರನ್ನು ಅಪರಿಚಿತ ಮಂದಿ ಹೊಡೆಯುವ ದೃಶ್ಯ ಎಂದು ಪತ್ತೆಯಾಗಿದೆ ಎಂದು ಸಬ್‌ರಂಗ್‌ಇಂಡಿಯಾ ಪತ್ತೆ ಮಾಡಿದೆ.

ಎರಡನೆಯದ್ದು ಕೇರಳದ ಬಿಜೆಪಿ ಮುಖಂಡರು ಮೇ 29ರಂದು ತಮ್ಮ ಫೇಸ್‌ಬುಕ್‌ನಲ್ಲಿ ಹಾಕಿರುವ ಫೊಟೊ. ಕೇಂದ್ರ ಸರಕಾರ ದೇಶವ್ಯಾಪಿಯಾಗಿ ಗೋವಧೆ ನಿಷೇಧ ತರುವ ಪ್ರಯತ್ನದ ಭಾಗವಾಗಿ ಅಧಿಸೂಚನೆ ಹೊರಡಿಸಿದ್ದಕ್ಕೆ ಪ್ರತಿಭಟನೆಯಾಗಿ ಕೇರಳದಲ್ಲಿ ಯುವಕಾಂಗ್ರೆಸ್ ಗುಂಪೊಂದು ಸಾರ್ವಜನಿಕವಾಗಿಯೇ ಕರುವನ್ನು ಕೊಂದ ಘಟನೆ ಎಲ್ಲರಿಂದಲೂ ಖಂಡನೆಗೆ ಒಳಗಾಗಿತ್ತು. ಈ ಬಿಜೆಪಿ ಮುಖಂಡರು ಇದನ್ನು ಬಳಸಿಕೊಂಡು ರಸ್ತೆಯಲ್ಲಿ ಸಾಲುಸಾಲಾಗಿ ದನಗಳ ಹೆಣಗಳು ಬಿದ್ದಿರುವ ಫೋಟೋ ಒಂದನ್ನು ಹಾಕಿ ಕೇರಳದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಗೋವಧೆ ನಡೆಯುತ್ತಿದೆ, ಎಡಪಕ್ಷಗಳ ಮತ್ತು ಕಾಂಗ್ರೆಸ್ ಕಾರ್ಯಕರ್ತರು ಇದನ್ನು ಮಾಡುತ್ತಿದ್ದಾರೆ, ಬೀಫ್‌ಹಬ್ಬ ನಡೆಸುತ್ತಿದ್ದಾರೆ, ಸರಕಾರ ಕ್ರಮ ಕೈಗೊಳ್ಳಬೇಕು ಎಂದೆಲ್ಲ ಉದ್ರೇಕಕಾರಿಯಾಗಿ ಬರೆದಿದ್ದಾರೆ. ಬರೆದಿರುವುದು ಏನೇ ಇರಲಿ ಅವರು ಹಾಕಿದ ಫೋಟೋ ಕೇರಳದ್ದು ಅಲ್ಲ ಎಂಬುದು ಸ್ಪಷ್ಟ. ಏಕೆಂದರೆ ಕೇರಳದಲ್ಲಿ ಇಂತಹ ಒಂದೇ ಘಟನೆ ನಡೆದಿದ್ದು ಪೋಲಿಸರು ಕೂಡಲೆ ಕ್ರಮ ಕೈಗೊಂಡಿದ್ದಾರೆ. ಈ ಫೋಟೋವನ್ನು ಹಿಗ್ಗಿಸಿ ನೋಡಿದಾಗ ಹಿಂದೆ ಬಂಗಾಲಿ ಭಾಷೆಯ ಬೋರ್ಡ್ ಕಾಣುತ್ತದೆ, ಅಂಗಡಿಗಳು ಮುಚ್ಚಿದ್ದು ಕಾಣುತ್ತದೆ. ಅಲ್ಲದೆ ಈ ಫೋಟೋ 2011ರಿಂದ ಹಲವು ಬಾರಿ ಮತ್ತೆ-ಮತ್ತೆ ಭಿನ್ನ ಸುದ್ದಿಗಳೊಂದಿಗೆ ಕಾಣಿಸಿಕೊಂಡಿವೆ ಎಂದೂ ಸಬ್‌ರಂಗ್ ವೆಬ್ ಮಾಧ್ಯಮದ ಸಿಬ್ಬಂದಿ ಪತ್ತೆ ಹಚ್ಚಿದ್ದಾರೆ.

ಮೂರನೆಯದ್ದು, ಇದೇ ಕೇರಳದ ಯುವ ಕಾಂಗ್ರೆಸಿಗರ ಕೃತ್ಯದ ಹಿನ್ನೆಲೆಯಲ್ಲಿ ಬೆಳಕಿಗೆ ಬಂದಿರುವ ಮತ್ತೊಂದು ಗೋಸುಂಬೆತನ. ಬಿಜೆಪಿ ಮುಖಂಡರು ಟ್ವಿಟರ್ ಆಕ್ರೋಶಗಳ ಮೂಲಕ ಈ ಘಟನೆಯ ಸಂಪೂರ್ಣ ಲಾಭ ಪಡೆಯಲು ಪ್ರಯತ್ನಿಸಿದ್ದಾರೆ-ಸಹಜವಾಗಿಯೇ. ಸಿಟಿಝನ್.ಇನ್ ವೆಬ್ ಪತ್ರಿಕೆಯ ಪ್ರತೀಕ್ ಸಿನ್ಹ ಈ ರೀತಿ ಟ್ವೀಟ್ ಮಾಡಿದ 100 ಬಿಜೆಪಿ 'ಶಾಸಕರು./ಎಂಪಿಗಳು/ ಮಂತ್ರಿಗಳ ಟೈಮ್‌ಲೈನ್‌ಗಳನ್ನು ಪರೀಕ್ಷಿಸಿದಾಗ ಅವರಲ್ಲಿ ಒಬ್ಬರೂ ಕೂಡ ಹರ್ಯಾಣದ ರೈತ ಪೆಹ್ಲೂ ಖಾನ್‌ನನ್ನು ಸಾರ್ವಜನಿಕವಾಗಿ ಸಾಯಿಸಿದ ಬಗ್ಗೆ ಏನೂ ಬರೆದಿಲ್ಲ ಎಂಬುದು ಕಂಡು ಬಂದಿದೆ.

ಸುಪ್ರಿಂ ಕೋರ್ಟ್ ಆದೇಶದ ಮೇರೆಗೆ ಬಾಬ್ರಿಮಸೀದಿ ಧ್ವಂಸದ ಪಿತೂರಿ ವಿಚಾರಣೆ ಆರಂಭವಾದ ಮರುದಿನ ಉತ್ತರಪ್ರದೇಶ ಮುಖ್ಯಮಂತ್ರಿಗಳು ಅಯೋಧ್ಯೆಗೆ ಭೇಟಿ ನೀಡಿ ವಿವಾದಿತ ಸ್ಥಳದಲ್ಲಿ 'ಮಂದಿರ್ ವಹೀಂ ಬನಾಯೇಂಗೆ' ಕೂಗುಗಳ ನಡುವೆ 'ರಾಮ್ ಲಲ್ಲಾ' ದರ್ಶನ ಪಡೆದರು
-ಸುದ್ದಿ

ಸಂದೇಹವೇ ಇಲ್ಲ, ಅದೇ ರಾಜ್ಯ, ಅದೇ ಗೂಂಡಾಗಿರಿ, ಅವೇ ಗ್ಯಾಂಗ್‌ರೇಪ್, ಅವೇ ದಂಗೆಗಳು, ಅವೇ ಲೂಟಿ; ವ್ಯತ್ಯಾಸ ಇಷ್ಟೇ- ಆಗ ಗೂಂಡಾರಾಜ್ಯ, ಈಗ ರಾಮರಾಜ್ಯ- ಇದೇನು ಕಮ್ಮಿ ವ್ಯತ್ಯಾಸನಾ?



ವ್ಯಂಗ್ಯಚಿತ್ರ: ಶೇಖರ್ ಗುರೇರ

ಅರ್ಧಕ್ಕಿಂತಲೂ ಹೆಚ್ಚು ಜನತೆಯ ಬದುಕಿನಲ್ಲಿ ಅಚ್ಛೇ ದಿನಗಳು ಬಂದಿಲ್ಲ, ಸದ್ಯಕ್ಕೆ ಬರುವಂತೆಯೂ ಇಲ್ಲ



ಎನ್ನುತ್ತಾರೆ ಪ್ರೊ. ಪ್ರಭಾತ್ ಪಟ್ನಾಯಕ್.

ಇದಕ್ಕೆ ಒಂದು ಸರಳ ಲೆಕ್ಕಾಚಾರ ಸಾಕು ಎನ್ನುತ್ತಾರೆ ಅವರು. ಬಹಳಷ್ಟು ಸಂದೇಹಾಸ್ಪದವಾದ ಮೋದಿ ಸರಕಾರದ ಮೂರನೇ ವರ್ಷದ ಮೂರನೇ ತ್ರೈಮಾಸಿಕದ ಜಿಡಿಪಿ ಅಂಕಿ–ಅಂಶಗಳು ಆಧಾರದಲ್ಲೇ ಕೃಷಿ ಸಂಬಂಧಿತ ಚಟುಚಟಿಕೆಗಳ ಆದಾಯದಲ್ಲಿ ಈ ಮೂರು ವರ್ಷಗಳಲ್ಲಿ ಆದ ನಿಜ ಆದಾಯದ ಹೆಚ್ಚಳವನ್ನು ಲೆಕ್ಕ ಹಾಕಿದರೆ ಅರ್ಧಕ್ಕಿಂತಲೂ ಹೆಚ್ಚು ಜನರ ಆದಾಯ ವಾಸ್ತವವಾಗಿ ಇಳಿದಿದೆಯೇ ಹೊರತು ಏರಿಲ್ಲ ಎಂಬುದು ಸ್ಪಷ್ಟವಾಗಿ ಕಾಣುತ್ತೆ. ಇಮತಹ ಸಂದರ್ಭದಲ್ಲಿ ಜಿಡಿಪಿ ದರ ವೃದ್ಧಿಯ ಬಗ್ಗೆ ಕುಣಿದಾಡುವುದು ನಿಜಕ್ಕೂ ಸಂಕಟ ಉಂಟುಮಾಡಬೇಕು ಎನ್ನುತ್ತಾರೆ ಅವರು.

ಮೋದಿ ಸರ್ಕಾರ ತನ್ನ ಮೂರು ವರ್ಷಗಳ ಅಧಿಕಾರವನ್ನು ಭಾರಿ ಆಡಂಬರ–ಗದ್ದಲದೊಂದಿಗೆ ಮತ್ತು ಈ ಅವಧಿಯಲ್ಲಿನ ತನ್ನ ಸಾಧನೆಗಳೊಂದಿಗೆ ಪ್ರಚಾರಗಳನ್ನು ಮಾಡುತ್ತಾ ಆಚರಿಸುತ್ತಿದೆ. 2016–17ನೇ ಸಾಲಿನಲ್ಲಿ ಜಿಡಿಪಿ ಪ್ರಗತಿ ದರ ಶೇ.7.11 ಇರಲಿದೆ ಎಂಬ ಅಂದಾಜು ದರವೂ ಈ ಪ್ರಚಾರದಲ್ಲಿ ನೆರವಾಗಿದೆ. ಈ ದರ ಕಳೆದ ವರ್ಷದ ಶೇ.7.93ಕ್ಕೆ ಹೋಲಿಸಿದರೆ ಕಡಿಮೆಯಾದರೂ ಉತ್ತೇಜನಕಾರಿಯಾದದ್ದು ಎಂಬುದರಲ್ಲಿ ಎರಡು ಮಾತಿಲ್ಲ. ಈ ಅಂದಾಜು ಅಂಕಿಅಂಶಗಳು ಪ್ರಸಕ್ತ ಹಣಕಾಸು ಸಾಲಿನ ಏಪ್ರಿಲ್–ಅಕ್ಟೋಬರ್ ನಡುವಿನ ಅವಧಿಯದು. ನೋಟು ಅಮಾನ್ಯದ ಅವಧಿಯಲ್ಲಿ ಇದರಲ್ಲಿ ಒಳಗೊಂಡಿಲ್ಲ ಎಂದು ದೇಶದ ಮುಖ್ಯ ಅಂಕಿಅಂಶ ಅಧಿಕಾರಿ ಹೇಳಿರುವ ನಡುವೆಯೂ ಪ್ರಚಾರ ಮಾತ್ರ ಜೋರಾಗಿ ನಡೆಯುತ್ತಿದೆ.

ಭಾರತದ ಅಂಕಿಅಂಶ ಕ್ರೋಢೀಕರಣ ಪದ್ಧತಿ ಒಂದು ಅವಧಿಯಲ್ಲಿ ವಿಶ್ವದಲ್ಲೇ ಉತ್ತಮವಾಗಿತ್ತು ಮತ್ತು ಮೂರನೆ ಜಗತ್ತಿನ ದೇಶಗಳಲ್ಲಿ ಅತ್ಯುತ್ತಮ. ಆಗ ನಡೆಸುತ್ತಿದ್ದ ಮಾದರಿ ಸಮೀಕ್ಷೆ ಹೆಚ್ಚು ವ್ಯಾಪ್ತಿಯನ್ನು ಹೊಂದಿತ್ತು ಮತ್ತು ಅತ್ಯುತ್ತಮ, ಉತ್ಕೃಷ್ಟ ಸೈದ್ಧಾಂತಿಕ ಆಧಾರದಲ್ಲಿತ್ತು. ನಿಜ ಎಂದರೆ ಅತಿದೊಡ್ಡ ಅಸಂಘಟಿತ ವಲಯವನ್ನು ಹೊಂದಿರುವ ಭಾರತದಂತಹ ದೇಶದಲ್ಲಿ ರಾಷ್ಟ್ರೀಯ ಆದಾಯ ಮತ್ತು ಇತರೆ ದೇಶದ ಪ್ರಗತಿಯ ಅಂದಾಜು ಅಂಕಿಅಂಶಗಳ ಸತ್ಯಾಸತ್ಯತೆ ಕುರಿತು ಸದಾ ಒಂದು ಸಣ್ಣ ಅನುಮಾನ ಇದ್ದೇ ಇರುತ್ತದೆ. ಆದರೆ ಇದನ್ನು ಅನುಸರಿಸುವ ಎಲ್ಲರಿಗೂ ಇಲ್ಲಿನ ಲೋಪಗಳೇನು ಎಂಬುದು ಗೊತ್ತು ಮತ್ತು ಅದಕ್ಕೆ ಅನುಗುಣವಾಗಿ ಹೊಂದಾಣಿಕೆ ಮಾಡುತ್ತಾರೆ. ಹೀಗಾಗಿ ಒಟ್ಟಾರೆ ಅಂಕಿಅಂಶಗಳಲ್ಲಿ ಸಣ್ಣಪುಟ್ಟ ಲೋಪಗಳಿದ್ದರೂ ರಾಷ್ಟ್ರೀಯ ಆರ್ಥಿಕತೆಯ ಅಂದಾಜು ಅಂಕಿಅಂಶಗಳಲ್ಲಿ ಭಾರಿ ವ್ಯತ್ಯಾಸ ಇರುತ್ತಿರಲಿಲ್ಲ.

ಆದರೆ ಈಗ ನಾಲ್ಕು ಪ್ರಮುಖ ಅಂಶಗಳಿಂದಾಗಿ ಅಂತಹ ಯಾವುದೇ ನಂಬಿಕೆ ಇಲ್ಲ.

ಮೊದಲನೆಯದಾಗಿ ಮೋದಿ ಸರ್ಕಾರ ಅಂಕಿಅಂಶಗಳ ಕ್ರೋಢೀಕರಣ ವಿಚಾರದಲ್ಲಿ ಅತಿ ಹೆಚ್ಚು ಮಧ್ಯಪ್ರವೇಶಿಸುತ್ತಿರುವುದು. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಅಮಾನ್ಯಗೊಳಿಸಿದ ನೋಟುಗಳು ಬ್ಯಾಂಕಿಂಗ್ ವ್ಯವಸ್ಥೆಗೆ ಎಷ್ಟು ಬಂತು ಎಂಬುದನ್ನು ಆರ್‌ಬಿಐ ಇನ್ನೂ ಬಹಿರಂಗಪಡಿಸದಿರುವುದು. ನೋಟು ರದ್ಧತಿಯಿಂದ ಕಪ್ಪುಹಣ ಹೊರತರಲಾಗುವುದು ಎಂಬುದು ಸಂಪೂರ್ಣ ವಿಫಲವಾಗಿದೆ ಎಂಬುದನ್ನು ಬಯಲು ಮಾಡುತ್ತದೆ ಎಂಬ ಕಾರಣಕ್ಕೆ ಬಹಿರಂಗಪಡಿಸಿಲ್ಲ.

ಎರಡನೆಯದಾಗಿ, ಜಿಡಿಪಿಯನ್ನು ಲೆಕ್ಕ ಹಾಕಲು ಹೊಸ ಪದ್ಧತಿ ಅಳವಡಿಸಿಕೊಂಡಿರುವುದು. ಈ ಪದ್ಧತಿ ಅಸ್ಪಷ್ಟ ಮತ್ತು ಸರ್ಕಾರದ ಆರ್ಥಿಕ ಸಮೀಕ್ಷೆಯನ್ನೇ ತಮಗಿಷ್ಟದಂತೆ ಹೊಂದಾಣಿಕೆ ಮಾಡಬಹುದಾಗಿದೆ.

ಮೂರನೆಯದಾಗಿ, ಜಿಡಿಪಿ ಅಂದಾಜು ಅಂಕಿಅಂಶಗಳಿಗಾಗಿ ಸಂಗ್ರಹಿಸುವ ಮಾಹಿತಿ ಬಹುತೇಕ ಕಾರ್ಪೊರೇಟ್ ವಲಯದಿಂದ ಕೂಡಿರುತ್ತದೆ ಮತ್ತು ಆರಂಭದಲ್ಲೇ ಸಂಗ್ರಹಿಸಿರುತ್ತದೆ. ಹೀಗಾಗಿ ಅಂಕಿಅಂಶಗಳನ್ನು ಪೂರ್ಣಗೊಳಿಸುವ ಕಾಲಕ್ಕೆ ಸಾಕಷ್ಟು ವ್ಯತ್ಯಾಸವಿರಲಿದ್ದು ಇದನ್ನು ಸರಿಪಡಿಸುವ ಸಾಧ್ಯತೆಗಳು ಕಡಿಮೆ.

ನಾಲ್ಕನೆಯದಾಗಿ ನಾಲ್ಕನೆ ತ್ರೈಮಾಸಿಕದ ಅಂಕಿಅಂಶಗಳು ಸಂಪೂರ್ಣ ಅನುಮಾನದಿಂದ ಕೂಡಿರುತ್ತವೆ ಮತ್ತು ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಅನುಕೂಲವಾಗುವಂತೆ ಸಿದ್ಧಗೊಳಿಸಲಾಗುತ್ತದೆ. ಮೋದಿ ಸರ್ಕಾರ ಕಳೆದ ಸಾಲಿನ ಮೂರನೆ ತ್ರೈಮಾಸಿಕದ ಅಂದಾಜು ಅಂಕಿಅಂಶಗಳನ್ನು ಪ್ರಕಟಿಸಿದಾಗ ನೋಟುರದ್ಧತಿ ಯಾವುದೇ ಪರಿಣಾಮ ಬೀರಲಿಲ್ಲ ಎಂದು ಹೇಳಿದಂತೆ.

ಹೀಗಾಗಿ 2016–17ನೇ ಸಾಲಿನ ಜಿಡಿಪಿ ಅಂದಾಜು ಅಂಕಿಅಂಶಗಳು ಹೆಚ್ಚು ದೃಢತೆ ಹೊಂದಿಲ್ಲ. ಹಾಗಿದ್ದರೂ ಈ ಅಂಕಿಅಂಶಗಳನ್ನು ಒಪ್ಪಿಕೊಂಡೆವು ಎಂದಿಟ್ಟುಕೊಳ್ಳಿ. ಈ ಅಂಕಿಅಂಶಗಳು ದೇಶದ ಆರ್ಥಿಕ ಪರಿಸ್ಥಿತಿ ಅತ್ಯಂತ ಶೋಚನೀಯವಾಗಿದೆ ಎಂಬುದನ್ನು ತೋರಿಸುತ್ತದೆ. ವಾಸ್ತವ ಎಂದರೆ ಮೋದಿಯವರ ಮೂರು ವರ್ಷಗಳ ಆಡಳಿತದಲ್ಲಿ ದೇಶದಲ್ಲಿ ಕೃಷಿಯನ್ನು ಅವಲಂಬಿಸಿರುವ ಜನಸಮುದಾಯದ ತಲಾ ಆದಾಯ ಕುಸಿದಿದೆ. ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಅಧಿಕೃತ ಅಂಶಗಳ ಆಧಾರದಲ್ಲೇ ಇತ್ತ ನೋಟ ಹರಿಸೋಣ.

ಮೋದಿ ಸರ್ಕಾರ 2014ರ ಮೇನಲ್ಲಿ ಅಧಿಕಾರ ವಹಿಸಿಕೊಂಡ ಹಣಕಾಸು ಸಾಲು 2013–14ನ್ನೇ ಮೂಲ ವರ್ಷವಾಗಿ ತೆಗೆದುಕೊಂಡು 2016–17ನೇ ಸಾಲಿನ ಜಿಡಿಪಿ ಅಂದಾಜು ಅಂಕಿಅಂಶಗಳನ್ನು ನೋಡೋಣ. ಫ್ಯಾಕ್ಟರ್ ಕಾಸ್ಟ್ (ವಸ್ತುವೊಂದರ ತಯಾರಿಕೆ ವರೆಗೆ ತಗಲುವ ವೆಚ್ಚ) ಆಧಾರದಲ್ಲಿ ಕಳೆದ ಸಾಲಿಗೆ ಹೋಲಿಸಿದರೆ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಲ್ಲಿ 2016–17ನೇ ಸಾಲಿನ ಜಿಡಿಪಿ ಅಂದಾಜು ಪ್ರಸಕ್ತ ಬೆಲೆಗಳಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ.9.64ರಷ್ಟು ಹೆಚ್ಚಳ ಕಂಡಿದೆ. ಇದೇ ಲೆಕ್ಕಾಚಾರದಲ್ಲಿ 2013–14ನೇ ಸಾಲಿಗೆ ಹೋಲಿಸಿದಲ್ಲಿ ಶೇ.20.6ರಷ್ಟು ಏರಿಕೆ ದಾಖಲಿಸಿದೆ.

ಈ ಅಂಕಿ–ಅಂಶ ಸುಮಾರಾಗಿ ಈ ಕೃಷಿ ಚಟುವಟಿಕೆಗಳಲ್ಲಿ ತೊಡಗಿರುವವರ ಆದಾಯ ಪ್ರಸಕ್ತ ಬೆಲೆಗಳಲ್ಲಿ ಬಿಂಬಿಸುವುದರಿಂದ ಈ ಸರಕಾರದ ಕಳೆದ ಮೂರು ವರ್ಷಗಳಲ್ಲಿ ಅದು ಇಷ್ಟು ಹೆಚ್ಚಿದೆ ಎಂದಾಗುತ್ತದೆ.

ಈ ಮೂರು ವರ್ಷಗಳಲ್ಲಿ ಅಧಿಕೃತ ಅಂದಾಜುಗಳ ಪ್ರಕಾರ ಜನಸಂಖ್ಯೆ 3.9% ದಷ್ಟು ಹೆಚ್ಚಿರುತ್ತದೆ ಎಂದಿಟ್ಟುಕೊಳ್ಳಬಹುದು. ಅಂದರೆ ಕೃಷಿಯನ್ನು ಅವಲಂಬಿಸಿರುವ ಜನರ ಆದಾಯದಲ್ಲಿ ಆಗಿರಬಹುದಾದ ಹೆಚ್ಚಳ 16ಶೇ.

ಇದು ಪ್ರಸಕ್ತ ಬೆಲೆಗಳಲ್ಲಿ. ಹಾಗಿದ್ದರೆ ನಿಜವಾದ ಹೆಚ್ಚಳ ಎಷ್ಟು ಎಂಬ ಪ್ರಶ್ನೆ ಉಳಿಯುತ್ತದೆ. ಇದಕ್ಕೆ ಉತ್ತರ ಪಡೆಯಲು ಬೆಲೆ ಸೂಚ್ಯಂಕವನ್ನು ಬಳಸಬೇಕು. ಇದರ ಪ್ರಕಾರ ಈ ಮೂರು ವರ್ಷಗಳಲ್ಲಿ ಬೆಲೆಗಳಲ್ಲಿ 16.3% ಹೆಚ್ಚಳವಾಗಿದೆ.

ಈ ಎರಡನ್ನು ಜತೆಗಿಟ್ಟು ನೋಡಿದಾಗ ಮೋದಿ ಅಧಿಕಾರ ಅವಧಿಯ ಮೂರು ವರ್ಷಗಳಲ್ಲಿ ಕೃಷಿ ಮೇಲೆ ಅವಲಂಬಿಸಿರುವವರ ಆದಾಯ ಸ್ಥಗಿತಗೊಂಡಿದೆ ಇಲ್ಲವೆ ಸ್ವಲ್ಪ ಮಟ್ಟಿಗೆ ಕುಸಿದಿದೆ ಎಂದೇ ಕಾಣ ಬರುತ್ತದೆ. ಕೃಷಿ ಸಂಬಂಧಿ ಚಟುವಟಿಕೆಗಳಲ್ಲಿ ತೊಡಗಿರುವವರಲ್ಲಿ ಬಡ್ಡಿ, ಗೇಣಿ, ಲಾಭಗಳ ಮೇಲೆ ಬದುಕುವವರರೂ ಸೇರಿರುತ್ತಾರೆ. ಅದನ್ನು ಈ ಲೆಕ್ಕಾಚಾರದಲ್ಲಿ ಪರಿಗಣಿಸಿಲ್ಲ. ಅದನ್ನು ಪರಿಗಣಿಸಿದರೆ ರೈತರು ಮತ್ತು ಕೃಷಿ ಕೂಲಿಕಾರರ ಆದಾಯ ವಾಸ್ತವದಲ್ಲಿ ಕುಸಿದಿದೆ ಎಂದೇ ಹೇಳಬಹುದು.

ದೇಶದ ಅರ್ಧಕ್ಕಿಂತಲೂ ಹೆಚ್ಚು ಜನಸಂಖ್ಯೆಯ ಆದಾಯ ಹೀಗೆ ಈ ಮೂರು ವರ್ಷಗಳಲ್ಲಿ ಹೆಚ್ಚಿಲ್ಲ ಎಂಬುದು ಪರಿಸ್ಥಿತಿಯ ಗಂಭೀರತೆಯನ್ನು ತೋರಿಸುತ್ತದೆ.

ನಿಜ, ಕೃಷಿ ಆದಾಯ ಸ್ಥಗಿತಗೊಳ್ಳಲು ಅಥವ ಕಡಿಮೆಯಾಗಲು ಕೇವಲ ಮೋದಿ ಸರಕಾರವನ್ನೇ ದೂಷಿಸುವಂತಿಲ್ಲ. ಈ ರೀತಿ ಒಟ್ಟು ಕೃಷಿ ಆದಾಯ ಸ್ಥಗಿತಗೊಳ್ಳಲು ಅತ್ಯಂತ ಪ್ರಮುಖ ಕಾರಣ ನವ–ಉದಾರವಾದಿ ಆರ್ಥಿಕ ನೀತಿಗಳು. ಈ ನೀತಿಗಳ ಫಲವಾಗಿ ಸರ್ಕಾರಗಳು ರೈತ ಸಮುದಾಯಕ್ಕೆ ಬೆಂಬಲ ನೀಡದೆ ಸಂಪೂರ್ಣ ಹಿಂದೆ ಸರಿದವು. ರೈತ ಕೃಷಿ ಮತ್ತಿತರ ಸಣ್ಣ ಉತ್ಪಾದನೆಯನ್ನು ಬೆಂಬಲಿಸುವಲ್ಲಿ ಸರಕಾರದ ಪಾತ್ರವಿರಬೇಕಾಗಿತ್ತು. ಅದರೆ ನವ–ಉದಾರವಾದವನ್ನು ಅಪ್ಪಿಕೊಂಡ ಸರಕಾರಗಳು ಇದರ ಬದಲಿಗೆ ಜಗತ್ತೆಲ್ಲ ಓಡಾಡುವ ಜಾಗತಿಕ ಬಂಡವಾಳದ ಮತ್ತು ಅವರೊಂದಿಗೆ ಕೈಹಜೋಡಿಸಿರುವ ಭಾರತೀಯ ಕಾರ್ಪೊರೇಟ್ ಬಂಡವಾಳದ ಹಿತಾಸಕ್ತಿಗಳನ್ನೇ ಕಾಪಾಡಲು ಮುಂದಾದರು. ಈ ನೀತಿಗಳನ್ನು ಮೋದಿ ಅತ್ಯುತ್ಸಾಹದಿಂದ ಜಾರಿಗೊಳಿಸುತ್ತಿದ್ದಾರೆ. ಯಾವ ಮಟ್ಟಕ್ಕೆ ಎಂದರೆ ಇದನ್ನು ಇನ್ನೂ ಬಹಳ ವರ್ಷಗಳ ಕಾಲ ಬದಲಿಸಿಕ್ಕಿಲ್ಲ ಎಂದನಿಸುತ್ತದೆ.ಆದರೆ ಎಲ್ಲಿವರೆಗೂ ಈ ನೀತಿಗಳು ಮುಂದುವರೆಯುವುದೋ ಅಲ್ಲಿವರೆಗೂ ಕೃಷಿ ಮೇಲೆ ಅವಲಂಬಿತವಾಗಿರುವ ಜನಸಮುದಾಯಕ್ಕೆ ಅಚ್ಚೇ ದಿನಗಳೇ ಇಲ್ಲ.

ದೇಶದ ಜನಸಂಖ್ಯೆಯ ಅರ್ಧಕ್ಕಿಂತಲೂ ಹೆಚ್ಚು ಜನಗಳ ಶೋಚನೀಯ ಸ್ಥಿತಿಯಲ್ಲಿ ಏನೊಂದೂ ಉತ್ತಮಗೊಳ್ಳದಿರುವಾಗ ಜಿಡಿಪಿಯಲ್ಲಿ ಭಾರೀ ವೃದ್ಧಿಯಾಗುತ್ತಿದೆ, ಇದೊಂದು 'ಮಹಾನ್ ಸಾಧನೆ' ಎಂದು ಕುಣಿದಾಡುವುದು ನಿಜವಾಗಿಯೂ ಸಂಕಟ ಉಂಟು ಮಾಡುತ್ತದೆ. ಈ ರೀತಿ ಸಂಕಟಪಡಲು ನೀವು ಎಡಪಂಥೀಯರೇ ಆಗಬೇಕೆಂದಿಲ್ಲ. ಜಿಡಿಪಿ ಬೆಳವಣಿಗೆಯೇ ಇಲ್ಲದ ಒಂದು ಆರ್ಥಿಕದಲ್ಲಿ ಕಾರ್ಮಿಕರ ಸ್ಥಿತಿ ಉತ್ತಮಗೊಂಡಿದ್ದರೆ ನನಗೆ ಅದು 'ಚಲನರಹಿತ ಪ್ರಭುತ್ವ'ವಾದರೂ ಏನೂ ತಕರಾರಿಲ್ಲ ಎಂದು ಉದಾರವಾದಿ ಆರ್ಥಿಕ ತಜ್ಞ ಜಾನ್ ಸ್ಟುವರ್ಟ್ ಮಿಲ್ ಹೇಳಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಆತ ಖಂಡಿತವಾಗಿಯೂ ಹೀಗೆ ಅರ್ಧಕ್ಕೂ ಹೆಚ್ಚು ಜನತೆಯ ಬದುಕು ಸ್ಥಗಿತಗೊಂಡಿರುವಾಗ ಜಿಡಿಪಿ ದರ ವೃದ್ಧಿಯ ಬಗ್ಗೆ ಕುಣಿದಾಡುತ್ತಿರಲಿಲ್ಲ.

ನಿಜ, ಬಿಜೆಪಿಗೆ ಬಡವರ ಪರಿಸ್ಥಿತಿಯ ಬಗ್ಗೆ ಪರಿವೆಯಿಲ್ಲ, ಅದಕ್ಕೆ ವಿಜೃಂಭಣೆಯ ಉತ್ಸವಗಳೇ ಮುಖ್ಯ. ಆದರೆ ದೇಶದ ಉದಾರ ಮನೋಭಾವದವರಾದರೂ ಈ ಬಗ್ಗೆ ಗಟ್ಟಿಯಾಗಿ ಕಾಳಜಿ ವ್ಯಕ್ತಪಡಿಸಬಹುದಲ್ಲ ಎಂದು ಆಶಿಸಬೇಕಾಗಿದೆ.

ಸಂಗ್ರಹಾನುವಾದ – ಮುರಳಿ



ವ್ಯಂಗ್ಯಚಿತ್ರ: ಕೇಶವ್, ದಿ ಹಿಂದು

ದೇಶದ ಜನಸಂಖ್ಯೆಯ ಅರ್ಧಕ್ಕಿಂತಲೂ ಹೆಚ್ಚು ಜನಗಳ ಶೋಚನೀಯ ಸ್ಥಿತಿಯಲ್ಲಿ ಏನೊಂದೂ ಉತ್ತಮಗೊಳ್ಳದಿರುವಾಗ ಜಿಡಿಪಿಯಲ್ಲಿ ಭಾರೀ ವೃದ್ಧಿ ಯಾಗುತ್ತಿದೆ, ಇದೊಂದು 'ಮಹಾನ್ ಸಾಧನೆ' ಎಂದು ಕುಣಿದಾಡುವುದು ನಿಜವಾಗಿಯೂ ಸಂಕಟ ಉಂಟು ಮಾಡುತ್ತದೆ. ಈ ರೀತಿ ಸಂಕಟಪಡಲು ನೀವು ಎಡಪಂಥೀಯರೇ ಆಗಬೇಕೆಂದಿಲ್ಲ. ಬಿಜೆಪಿಗೆ ಬಡವರ ಪರಿಸ್ಥಿತಿಯ ಬಗ್ಗೆ ಪರಿವೆಯಿಲ್ಲ, ಅದಕ್ಕೆ ವಿಜೃಂಭಣೆಯ ಉತ್ಸವಗಳೇ ಮುಖ್ಯ. ಆದರೆ ದೇಶದ ಉದಾರ ಮನೋಭಾವದವರಾದರೂ ಈ ಬಗ್ಗೆ ಗಟ್ಟಿಯಾಗಿ ಕಾಳಜಿ ವ್ಯಕ್ತಪಡಿಸಬಹುದಲ್ಲ ಎಂದು ಆಶಿಸಬೇಕಾಗಿದೆ.

ಮೆಲುದನಿಯ ಕಮ್ಯೂನಿಸ್ಟ್ ಹೋರಾಟಗಾರ........

ಪುಟ 11 ರಿಂದ

ಪಕ್ಷದ ನಿಧಿ ತುಂಬಿಸಿಕೊಟ್ಟರು. ಸೋವಿಯತ್ ಒಕ್ಕೂಟ ಕಮ್ಯೂನಿಸ್ಟ್ ಪಕ್ಷದ ಆಮಂತ್ರಣದ ಮೇರೆಗೆ 1987 ಜೂನ್–ಜುಲಾಯಿ ತಿಂಗಳುಗಳಲ್ಲಿ 35 ದಿನಗಳ ಕಾಲ ಸೋವಿಯತ್ ಒಕ್ಕೂಟ ಸಂಚರಿಸುವ ಅವಕಾಶ ಅವರದ್ದಾಗಿತ್ತು. ಇದಕ್ಕೂ ಮೊದಲು ಇಂಡೋ ಸೋವಿಯತ್ ಕಲ್ಚರಲ್ ಸೊಸೈಟಿ (ಇಸ್ಕಸ್) ಘಟಕವನ್ನು ಮಂಗಳೂರಿನಲ್ಲಿ ಸ್ಥಾಪಿಸಿದ್ದಾಗ, ಡಾ|ಎಂ.ಎಸ್.ಶಾಸ್ತ್ರಿ ಅಧ್ಯಕ್ಷರಾಗಿ ಹಾಗೂ ಕೆ.ಆರ್.ಶ್ರೀಯಾನ್ ಕಾರ್ಯದರ್ಶಿಗಳಾಗಿ ಕೆಲವು ಸೌಹಾರ್ದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದು, ಅದರಲ್ಲಿ 1960ರಲ್ಲಿ ಮಂಗಳೂರು ನೆಹರೂ ಮೈದಾನಿನಲ್ಲಿ ನಡೆಸಿದ್ದ 3 ದಿನಗಳ ಸಾಂಸ್ಕೃತಿಕ ಉತ್ಸವ ಪ್ರಮುಖವಾಗಿತ್ತು. 1955–60ರ ಕಾಲಾವಧಿಯಲ್ಲಿ ದೇರೆಬೈಲ್ ಗ್ರಾಮ ಪಂಚಾಯತಿಗೆ ಸದಸ್ಯನೂ ಉಪಾಧ್ಯಕ್ಷನೂ ಆಗಿ ಆಯ್ಕೆಯಾಗಿದ್ದ ಸಂದರ್ಭ ಶ್ರೀಯಾನರ ಮುತುವರ್ಜಿಯಿಂದ ಆರಂಭವಾಗಿದ್ದ ದೇರೆಬೈಲ್ ಸೇವಾ ಸಹಕಾರಿ ಸಂಘವು ಮುಂದಿನ ದಿನಗಳಲ್ಲಿ ಇತರ ಸಹಕಾರಿ ಸಂಘಗಳೊಡನೆ ಒಗ್ಗೂಡಿ ಕಾವೂರು ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್ ಆಗಿ ಅಭಿವೃದ್ಧಿ ಹೊಂದಿದಾಗ, ಅದರ ಅಧ್ಯಕ್ಷರೂ ನಿರ್ದೇಶಕರೂ ಆಗಿ ಅವರು ಸೇವೆ ಕೈಗೊಂಡರು. ಅವರ ಸಾಂಸ್ಕೃತಿಕ ಚಟುವಟಿಕೆಗೆ, ಯುವಕ ಮಂಡಲಕ್ಕೆ ಆಶ್ರಯ ಕೊಟ್ಟಿದ್ದ, ಅವರು ಪ್ರಾಥಮಿಕ ಶಿಕ್ಷಣ ಪಡೆದ ಕೊಂಚಾಡಿ ಶ್ರೀರಾಮಾಶ್ರಮ ಶಾಲೆ ಪದವಿ ಪೂರ್ವ ಕಾಲೇಜು ಆಗಿದ್ದು, 1975 ರಿಂದಲೂ ಅವರು ಅದರ ಟ್ರಸ್ಟ್ ಬೋರ್ಡ್ ಸದಸ್ಯರಾಗಿದ್ದಾರೆ.

ಅವರಷ್ಟು ಸುದೀರ್ಘಕಾಲ (36ವರ್ಷ) ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿಯಲ್ಲಿ ಕಾರ್ಯನಿರ್ವಹಿಸಿದವರಿಲ್ಲ. ಎನ್.ಎಲ್.ಉಪಾಧ್ಯಾಯ, ಎನ್.ಕೆ.ಉಪಾಧ್ಯಾಯ, ಎಸ್.ಸೂರ್ಯನಾರಾಯಣರಾವ್, ಪಿ.ರಾಮಚಂದ್ರರಾವ್, ಸಿ.ನಂಜುಂಡಪ್ಪ ಮೊದಲಾದ ಅಗ್ರ ಕಮ್ಯೂನಿಸ್ಟ್ ನಾಯಕರೊಂದಿಗೆ ಕೆಲಸ ಮಾಡಿದ ಅನುಭವ ಶ್ರೀಯಾನರದು. ಪ್ರಸ್ತುತ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾಗಿರುವವರೂ ಅವರ ಮಾರ್ಗದರ್ಶನ ಪಡೆದವರೇ. 2015ರಲ್ಲಿ ವಯೋಮಾನದ ಕಾರಣ ನೀಡಿ ಅವರು ರಾಜ್ಯ ಸಮಿತಿಯಿಂದ ಬಿಡುಗಡೆಗೊಂಡಿರುವರಾದರೂ, ದ.ಕ. ಜಿಲ್ಲಾ ಸಮಿತಿಯಲ್ಲಿ ಇದ್ದುಕೊಂಡು ಜಿಲ್ಲೆಯ ಕಿರಿಯ ನಾಯಕರಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ.

ಪಕ್ಷದಲ್ಲಿ ಶಿಸ್ತು ಮತ್ತು ಐಕ್ಯತೆಯನ್ನು ಕಾಪಾಡಿಕೊಳ್ಳಿ ಎಂಬುದೇ ಕೆ.ಆರ್.ಶ್ರೀಯಾನರು ಕಿರಿಯ ಪಕ್ಷ ಕಾರ್ಯಕರ್ತರಿಗೆ ನೀಡುವ ಸಂದೇಶ. ಕಠಿಣ ನಿರ್ಧಾರಗಳ ಆದರೆ ಮೆಲುದನಿಯ ಹೋರಾಟಗಾರ ಕೆ.ಆರ್.ಶ್ರೀಯಾನ್. ಚಳುವಳಿಗಳ ಕಾಠಿಣ್ಯದಿಂದ ಬೆಂಡಾಗಿದ್ದರೂ, ನಿರಾಳವಾದ ನಡವಳಿಕೆ ಅವರದು. ಜೊತೆಗೆ ತಿಳಿಹಾಸ್ಯ. ಕಮ್ಯೂನಿಸ್ಟ್ ಚಳುವಳಿ ಬಗ್ಗೆ ಅದಮ್ಯವಾದ ಆಶಾವಾದ. ಅವರ 'ಇಲ್ಲ್ ದೆತ್ತಿ ಮಗೆ' ನಾಟಕದ ಹಾಡೊಂದು ಆ ಆಶಾವಾದದ ಸಂಕೇತ.

'ಬೆನ್ಪಿನ ವರ್ಗದ ಜನಶಕ್ತಿ ಬುಳೆನಗ
ಸುಲಿಪುನ ಕೂಟದ ಆ ಶಕ್ತಿ ಅಳಿವುಂಡು ॥
ಜನಶಕ್ತಿ ಕೊಡಿ ರಾವು ॥'
('ದುಡಿಯುವ ವರ್ಗದ ಜನಶಕ್ತಿ ಬೆಳೆವಾಗ
ಸುಲಿಯುವ ಕೂಟದ ಆ ಶಕ್ತಿ ಅಳಿವುದು ।
ಜನಶಕ್ತಿ ಬಾವುಟ ಹಾರಲಿದೆ ॥')

ತ್ರಿಪುರಾ ಬಿಜೆಪಿಯ ನಿರ್ಣಾಯಕ ಸೋಲಿನ ತಾಣವಾಗಲಿದೆ–ಯೆಚುರಿ ಎಚ್ಚರಿಕೆ

ಬಿಜೆಪಿ ತ್ರಿಪುರಾದ ಎಡರಂಗ ಸರಕಾರದ ಮೇಲೆ ಯುದ್ಧ ಸಾರಿದಂತಿದೆ. ಆ ಪಕ್ಷದ ಕೋಮುವಾದಿ ಹಿಂದುತ್ವ ಸಿದ್ಧಾಂತಕ್ಕೆ ಕಡು ವಿರೋಧ ವ್ಯಕ್ತಪಡಿಸುತ್ತಿರುವ ಎಡಪಂಥೀಯರನ್ನು, ಅದರಲ್ಲೂ ಮುಖ್ಯವಾಗಿ ಸಿಪಿಐ(ಎಂ)ನ್ನು ಅಂಚಿಗೆ ತಳ್ಳುವುದು ಇದರ ಉದ್ದೇಶ. ಅದರೆ ಕೋಮುವಾದದೊಂದಿಗೆ ಜನಾದೇಶಗಳನ್ನು ಧನಬಲ, ಭುಜಬಲದ ಮೂಲಕ ತಿರುಚುವ ಬಿಜೆಪಿ ಪ್ರಯತ್ನಗಳಿಗೆ ತ್ರಿಪುರಾದಲ್ಲಿ ನಿರ್ಣಾಯಕ ಸೋಲು ಉಣ್ಣಿಸಲಾಗುವುದು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಅಗರ್ತಲಾದಲ್ಲಿ ಪತ್ರಿಕಾ ಸಮ್ಮೇಳನವೊಂದರಲ್ಲಿ ಮಾತಾಡುತ್ತ ಎಚ್ಚರಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಮುಂದಿನ ವರ್ಷದ ಆರಂಭದಲ್ಲಿ ನಡೆಲಿರುವ ತ್ರಿಪುರ ವಿಧಾನಸಭಾ ಚುನಾವಣೆಗಳು ತ್ರಿಪುರಕ್ಕಷ್ಟೇ ಅಲ್ಲ, ಈಶಾನ್ಯ ಭಾರತಕ್ಕಷ್ಟೇ ಅಲ್ಲ, ಇಡೀ ದೇಶಕ್ಕೆ ಬಹಳ ಮಹತ್ವದ್ದಾಗಿದೆ ಎಂದು ಅವರು ಹೇಳಿದರು.





ಮುಸ್ಲಿಮರು, ದಲಿತರು ಮತ್ತಿತರರ ಮೇಲೆ ಹಿಂಸಾಚಾರ, ಅದಕ್ಕಾಗಿ 'ಗೋರಕ್ಷಕ' ಪಡೆಗಳು, ರೋಮಿಯೊ–ನಿಗ್ರಹ ಪಡೆಗಳು ಇತ್ಯಾದಿ ಕುಕೃತ್ಯಗಳ ನಂತರವೂ ಸುಳ್ಳು ಪ್ರಚಾರ ಮತ್ತು ಹಣದ ಕಂತೆಗಳ ಮೂಲಕ ತ್ರಿಪುರಾದ ಜನತೆಯನ್ನು ಖರೀದಿಸಬಹುದು ಎಂದು ಬಿಜೆಪಿ ನಂಬಿದ್ದರೆ ಅದು ಮೂರ್ಖರ ಸ್ವರ್ಗದಲ್ಲಿ ಬದುಕುತ್ತಿದೆ ಎಂದು ಅವರು ಕಟುವಾಗಿ ಟೀಕಿಸಿದರು.

ಸಿಪಿಐ(ಎಂ)ನ ತ್ರಿಪುರಾ ರಾಜ್ಯಸಮಿತಿಯ ಸಭೆಯಲ್ಲಿ ಭಾಗವಹಿಸಿದ ನಂತರ ನಡೆದ ಪತ್ರಿಕಾ ಸಮ್ಮೇಳನದಲ್ಲಿ ಅವರು ಈ ಮಾತುಗಳನ್ನು ಹೇಳಿದರು.

ಈಗ ತ್ರಿಪುರಾದಾದ್ಯಂತ ಹಲವಾರು ಸಣ್ಣಪುಟ್ಟ ಸಭೆಗಳು, ಸಮಾರಂಭಗಳು, ಬೈಕ್ ಜಾತಾಗಳು ಬಿಜೆಪಿಯ ವಿಭಜನಕಾರಿ ಧೋರಣೆಗಳನ್ನು ಮತ್ತು ಟಿಎಂಸಿಯ ಪ್ರಜಾಪ್ರಭುತ್ವ–ವಿರೋಧಿ ವರ್ತನೆಗಳನ್ನು ಬಯಲಿಗೆಳೆಯುತ್ತಿವೆ.



ಒಡಿಶಾಕ್ಕೂ ಹರಡಿದ 'ಗೋರಕ್ಷಕ'ರ ಹಾವಳಿ

ಒಡಿಶಾದ ರಾಜಧಾನಿ ಭುವನೇಶ್ವರದ ರೈಲ್ವೆ ನಿಲ್ದಾಣದಲ್ಲಿ ಸುಮಾರು 25 ಸ್ವಯಂಘೋಷಿತ 'ಗೋರಕ್ಷಕರು' ಕೊಚುವೆಲಿ–ಗುವಹಾಟಿ ಎಕ್ಸ್‌ಪ್ರೆಸ್ ರೈಲಿನೊಳಕ್ಕೆ ನುಗ್ಗಿ ಮೇಘಾಲಯಕ್ಕೆ 20 ಹಾಲು ಕರೆಯುವ ದನಗಳನ್ನು ಕಾನೂನುಬದ್ಧವಾಗಿ ಸಾಗಿಸುತ್ತಿದ್ದ ಸಿಬ್ಬಂದಿಯ ಮೇಲೆ ಹಲ್ಲೆ ಮಾಡಿ ಅವನ್ನು ಒಯ್ದಿದ್ದಾರೆ.

ನೊಂಯ್ಡಾದ ಅಗ್ರೊ ಕಂಪನಿಯೊಂದು ತಮಿಳುನಾಡಿನ ಸೇಲಂನಲ್ಲಿರುವ ತಮ್ಮ ಫಾರ್ಮ್‌ನಿಂದ ಈ ದನಗಳನ್ನು ಮೇಘಾಲಯ ಸರಕಾರ ನೀಡಿದ ಆರ್ಡರುಗಳನ್ನು ಪೂರೈಸಲು ಆ ರಾಜ್ಯದ ಅಂಪತಿ ಎಂಬಲ್ಲಿಗೆ ಸಾಗಿಸುತ್ತಿತ್ತು.

ರೈಲ್ವೆ ನಿಲ್ದಾಣ ನುಗ್ಗಿದ ಈ ಮಂದಿ ಏನೂ ಹೇಳದೆ, ಕೇಳದೆ, ದನಗಳನ್ನು ನೋಡಿ ಕೊಳ್ಳುತ್ತಿದ್ದವರನ್ನು, ಇಬ್ಬರು ರೈಲ್ವೆ ಸಿಬ್ಬಂದಿಯನ್ನು ಮತ್ತು ಒಬ್ಬ ಪ್ರಯಾಣಿಕನ್ನು ಕೂಡ ಮನಬಂದಂತೆ ಥಳಿಸಿ ಅವನ್ನು ರೈಲಿನಿಂದ ಇಳಿಸಿ ಒಯ್ದರು ಎಂದು ವರದಿಯಾಗಿದೆ.

ಈ ದನಗಳನ್ನು ಕಾನೂನಬಾಹಿರವಾಗಿ ಸಆಗಿಸುತ್ತಿದ್ದರೆ ಕೇಂದ್ರ ಸರಕಾರದ ಅಡಿಯಲ್ಲಿರುವ ರೈಲ್ವೆ ಇಲಾಖೆ ಅದಕ್ಕೆ ಅನುಮತಿ ಹೇಗೆ ಕೊಡುತ್ತಿತ್ತು ಎಂಬುದು ಈ ಮಂದಿಗೆ ಬೇಕಿರಲಿಲ್ಲ ಎಂದು ಈ ದನಗಳ ಕೇರ್‌ಟೇಕರ್ ಆಗಿದ್ದವರಲ್ಲಿ ಒಬ್ಬರು ಪ್ರಶ್ನಿಸಿದ್ದಾರೆ.

ಝಾರ್ಖಂಡ್‌ನಲ್ಲಿ ಅದಾನಿ ವಿದ್ಯುತ್ ಪ್ರಾಜೆಕ್ಟಿಗೆ ಬಲವಂತದ ಭೂಸ್ವಾಧೀನ ಎಡ ಮತ್ತು ಇತರ ಪ್ರತಿಪಕ್ಷಗಳಿಂದ ರಾಜ್ಯಪಾಲರಿಗೆ ಮನವಿ ಪತ್ರ

ಝಾರ್ಖಂಡ್ ರಾಜ್ಯದ ಗೊಡ್ಡ ಜಿಲ್ಲೆಯಲ್ಲಿ ಸುಮಾರು 2000 ಎಕ್ರೆ ಕೃಷಿ ಜಮೀನನ್ನು ಅದಾನಿ ಕಂಪನಿಯ ವಿದ್ಯುತ್ ಯೋಜನೆಗಾಗಿ ಎಲ್ಲ ನಿಯಮ –ಕಾನೂನುಗಳನ್ನು ಉಲ್ಲಂಘಿಸಿ ಬಲವಂತದಿಂದ ಸ್ವಾಧೀನ ಮಾಡಿಕೊಳ್ಳಲಾಗಿದೆ. ಇದನ್ನು ವಿರೋಧಿಸಿದ ರೈತರ ಚಳುವಳಿಯನ್ನು ದಮನ ಮಾಡಲಾಗುತ್ತಿದೆ. ಇದನ್ನು ಬೆಂಬಲಿಸಿದ ಝಾರ್ಖಂಡ್ ವಿಕಾಸ್ ಮೋರ್ಚಾದ ಶಾಸಕ ಪ್ರದೀಪ್ ಯಾದವ್ ಮೇಲೆ ಸುಳ್ಳು ಮೊಕದ್ದಮೆ ಹಾಕಿ ಬಂಧಿಸಲಾಗಿದೆ. ಇದನ್ನು ಖಂಡಿಸುತ್ತ ಈ ಭೂಸ್ವಾಧೀನದ ಕಾನೂನು ಬಾಹಿರತೆಯನ್ನು ಗಮನಿಸಬೇಕು ಎಂದು ಎಡಪಕ್ಷಗಳು ಮತ್ತು ಪ್ರತಿಪಕ್ಷಗಳ ನಿಯೋಗವೊಂದು ರಾಜ್ಯಪಾಲರನ್ನು ಭೇಟಿಯಾಗಿ ಮನವಿ ಸಲ್ಲಿಸಿತು. ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಗೋಪೀಕಾಂತ ಬಕ್ಸಿ, ಸಿಪಿಐನ ಮಾಜಿ ಎಂಪಿ ಭುನೇಶ್ವರ್ ಮೆಹತ, ಝಾರ್ಖಂಡ್ ವಿಕಾಸ್ ಮೋರ್ಚಾದ ಮುಖಂಡ ಮತ್ತು ಮಾಜಿ ಮುಖ್ಯಮಂತ್ರಿ ಬಾಬುಲಾಲ್ ಮರಾಂಡಿ ಮತ್ತು ಕಾಂಗ್ರೆಸ್‌ನ ಮಾಜಿ ಕೇಂದ್ರ ಮಂತ್ರಿ ಸುಬೋಧ್‌ಕಾಂತ್ ಸಹಾಯ್ ಈ ನಿಯೋಗದಲ್ಲಿದ್ದರು.

ಭೂಮಿ ಬಚಾವ್ ಸಮಿತಿಯ ಚಿಂತಾಮಣಿ ಎಂಬವರ ನೇತೃತ್ವದಲ್ಲಿ ನಡೆಯುತ್ತಿರುವ ಈ ಚಳುವಳಿಯನ್ನು ಬೆಂಬಲಿಸಿ ಎಐಕೆಎಸ್, ಸಿಐಟಿಯು ಮತ್ತು ಸಿಪಿಐ(ಎಂ) ಕೆಲವು ದಿನಗಳ ಹಿಂದೆ ಧರಣಿಯನ್ನು ನಡೆಸಿದ್ದವು. ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಇದರಲ್ಲಿ ಮಾತಾಡುತ್ತ ನಮ್ಮ ಜಮೀನು, ದಿನಕ್ಕೆ 10 ಕೋಟಿ ಲೀಟರ್‌ಗಳಷ್ಟು ನಮ್ಮ ನೀರು ನಮ್ಮ ರೈತರಿಗೆ ವಿದ್ಯುತ್‌ಗಾಗಿ ಅಲ್ಲ, ಬಾಂಗ್ಲಾದೇಶಕ್ಕೆ ಪೂರೈಸಿ ಅದಾನಿಯ ಖಜಾನೆ ತುಂಬಿಸುವ ಈ ಪ್ರಾಜೆಕ್ಟಿನಲ್ಲಿ ಯಾವ 'ಸಾರ್ವಜನಿಕ ಉದ್ದೇಶ' ಇದೆಯೆಂದು ಕೃಷಿ ಜಮೀನನ್ನು ಬಲವಂತದಿಂದ ಸ್ವಾಧೀನ ಪಡಿಸಿಕೊಳ್ಳಲಾಗುತ್ತಿದೆ ಎಂದು ಪ್ರಶ್ನಿಸಿದ್ದರು. ಈ ಧರಣಿಯ ನಂತರ ಬೃಂದಾ ಕಾರಟ್ ಮತ್ತು ಚಿಂತಾಮಣಿ ಅವರ ನೇತೃತ್ವದ ನಿಯೋಗವೊಂದು ಜಿಲ್ಲಾ ಕಲೆಕ್ಟರ್‌ಗೆ ಈ ಪ್ರಾಜೆಕ್ಟನ್ನು ವಿರೋಧಿಸುವ ಕೃಷಿಕರ ವಿವರಗಳನ್ನು ಒಳಗೊಂಡ ಪಟ್ಟಿಯನ್ನು ಸಲ್ಲಿಸಿತ್ತು.

ಸುಳ್ಳುಸುದ್ದಿ ಹರಡಿಸಿ 9 ಜನರನ್ನು ಕೊಚ್ಚಿ ಹಾಕಿರುವ ಘಟನೆಯ ತ್ವರಿತ ನ್ಯಾಯಾಂಗ ವಿಚಾರಣೆಯಾಗಲಿ: ಝಾರ್ಖಂಡ್ ರಾಜ್ಯಪಾಲರಿಗೆ ಸಿಪಿಐ(ಎಂ) ನಿಯೋಗದ ಆಗ್ರಹ

ರಾಜ್ಯದ ಎರಡು ಕಡೆ ಮಕ್ಕಳನ್ನು ಕದಿಯುವರು ಎಂಬ ಗುಮಾನಿಯ ಮೇಲೆ ಒಟ್ಟು 9 ಮಂದಿಯನ್ನು ಬಡಿದು, ಕೊಚ್ಚಿ ಸಾಯಿಸಿದ ವರದಿ ದೇಶವನ್ನು ಎರಡುವಾರಗಳ ಹಿಂದೆ ತಲ್ಲಣಗೊಳಿಸಿತ್ತು. ವಾಸ್ತವವಾಗಿ ಇವು ಕೆಲವು ಬಲಪಂಥೀಯರು ಸಾಮಾಜಿಕ ಮಾಧ್ಯಮವನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಮಾಹಿತಿಗಳನ್ನು ಹರಡಿಸಿರುವ ದುಷ್ಫಲ ಎಂದು ಈಗ ಬೆಳಕಿಗೆ ಬಂದಿದೆ. ರಾಜ್ಯದಲ್ಲಿ ಬುಡಕಟ್ಟು ಜನಗಳ ಜಮೀನುಗಳನ್ನು ಲಪಟಾಯಿಸುವ ಸಿಎನ್‌ಟಿ ಮತ್ತು ಎಸ್‌ಪಿಟಿ ಕಾಯ್ದೆಗಳ ತಿದ್ದುಪಡಿಯ ವಿರುದ್ಧ ಉಂಟಾಗಿರುವ ವ್ಯಾಪಕ ಅಸಂತೃಪ್ತಿಯನ್ನು ಬೇರೆಡೆಗೆ ತಿರುಗಿಸಲಿಕ್ಕಾಗಿ, ಜತೆಗೆ ಈ ಮೂಲಕವೂ ಕೋಮುಧ್ರುವೀಕರಣ ತಂದು ಚುನಾವಣಾ ಪ್ರಯೋಜನ ಪಡೆಯುವುದಕ್ಕಾಗಿಯೂ ಇವನ್ನು ಮಾಡಲಾಗಿದೆ ಎಂದೂ ಬೆಳಕಿಗೆ ಬಂದಿದೆ.

ಈ ಸಂಗತಿಯತ್ತ ರಾಜ್ಯಪಾಲರ ಗಮನ ಸೆಳೆಯಲು ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಗೋಪೀಕಾಂತ ಬಕ್ಸಿಯವರ ನೇತೃತ್ವದಲ್ಲಿ ಸಿಪಿಐ(ಎಂ) ನಿಯೋಗ ಅವರನ್ನು ಭೇಟಿಯಾಗಿ ಒಂದು ಮನವಿ ಪತ್ರವನ್ನು ಸಲ್ಲಿಸಿದೆ.

ಈ ಮನವಿ ಪತ್ರದಲ್ಲಿ ರಾಜ್ಯದಲ್ಲಿ ಆದಷ್ಟು ಬೇಗನೇ ಸಾರ್ವಜನಿಕ ಜೀವನ ಸಾಮಾನ್ಯಗೊಳ್ಳುವಂತೆ ಮಾಡಿ, ಶಾಂತಿ ಮತ್ತು ಸಾಮರಸ್ಯವನ್ನು ಕಾಯ್ದುಕೊಳ್ಳಬೇಕು, ಈ ಘಟನೆಗಳನ್ನು ಕುರಿತಂತೆ ಹೈಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ನಡೆಸಬೇಕು, ಮತ್ತು ಈ ಪ್ರಕ್ರಿಯೆಯನ್ನು 6 ತಿಂಗಳಲ್ಲಿ ಮುಗಿಸಬೇಕು, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು, ಶಾಂತಿ–ಸುವ್ಯವಸ್ಥೆ ಕಾಪಾಡುವಲ್ಲಿ ಉಪೇಕ್ಷೆ ತೋರಿಸಿದ ಅಧಿಕಾರಿಗಳ ವಿರುದ್ಧ ಉಗ್ರ ಕ್ರಮಗಳನ್ನು ಕೈಗೊಳ್ಳಬೇಕು, ಬಲಿಯಾದವರ ಕುಟುಂಬಗಳಿಗೆ ಸೂಕ್ತ ಪರಿಹಾರ, ಪ್ರತಿ ಕುಟುಂಬದಲ್ಲಿ ಒಬ್ಬರಿಗೆ ಸರಕಾರೀ ನೌಕರಿ, ಗಾಯಗೊಂಡವರಿಗೆ ಸೂಕ್ತ ಪರಿಹಾರ ಮತ್ತು ಚಿಕಿತ್ಸೆಗೆ ನೆರವು ಒದಗಿಸಬೇಕು ಹಾಗೂ ಸಾಮಾಜಿಕ ಮಾಧ್ಯಮಗಳ ವೇದಿಕೆಯಿಂದ ಇಂತಹ ಸುಳ್ಳು ಸುದ್ದಿಗಳ ಅಪಪ್ರಚಾರವನ್ನು ತಡೆಯಲು ಅಗತ್ಯ ತಡೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಲಾಗಿದೆ.

ಕೇರಳ ಈಗ ಪ್ರತಿ ಮನೆಗೆ ವಿದ್ಯುತ್ ಪೂರೈಸುವ ಮೊದಲ ರಾಜ್ಯ

ಕೇಂದ್ರ ಸರಕಾರದ ನಿರೂಪಣೆಯ ಪ್ರಕಾರ ಒಂದು ಹಳ್ಳಿಯಲ್ಲಿ 10% ಮನೆಗಳಿಗೆ ವಿದ್ಯುತ್ ಪೂರೈಕೆ ಆಗುತ್ತಿದ್ದರೆ ಅದು ಸಂಪೂರ್ಣ ವಿದ್ಯುದೀಕರಣಕೊಂಡ ಹಳ್ಳಿ ಎಂದೆನಿಸುತ್ತದೆ. ಇದನ್ನು ಕೇರಳ ಈ ಮೊದಲೇ ಸಾಧಿಸಿತ್ತು. ಆದರೆ ಒಂದು ವರ್ಷದ ಹಿಂದೆ ಅಧಿಕಾರ ವಹಿಸಿಕೊಂಡ ಎಲ್‌ಡಿಎಫ್ ಸರಕಾರ ವಿದ್ಯುದೀಕರಣಗೊಳ್ಳದ ಕೊನೆಯ ಮನೆಯ ವರೆಗೂ ವಿದ್ಯುತ್ ಪೂರೈಸುವ ಒಂದು ಪ್ರಕ್ಷೋಭೆಯನ್ನು ಆರಂಭಿಸಿತು.

ಇದಕ್ಕಾಗಿ ಸೆಕ್ಯುರಿಟಿ ಡಿಪಾಸಿಟ್, ಭೂಮಿ ಒಡೆತನ ಮುಂತಾದ ಶರತ್ತುಗಳನ್ನು ಸಡಿಲಗೊಳಿಸಲಾಯಿತು, ಶಾಸಕರ ನಿಧಿಗಳು, ಕಾರ್ಪೊರೇಟ್ ಪ್ರಾಯೋಜ–ಕರು ಇತ್ಯಾದಿಗಳ ಮೂಲಕ ಹಣ ಸಂಗ್ರಹಿಸಿ ಬಡ ಕುಟುಂಬಗಳ ಮನೆಗಳ ವೈರಿಂಗ್ ಕೆಲಸಗಳನ್ನು ನಡೆಸಲಾಯಿತು.

ಈ ಮೂಲಕ ಸುಮಾರು 175 ಕೋಟಿ ರೂ.ಗಳನ್ನು ಖರ್ಚುಮಾಡಿ 1.5 ಲಕ್ಷ ಮನೆಗಳಲ್ಲಿ ವಿದ್ಯುತ್ ದೀಪಗಳು ಬೆಳಗುವಂತಾಗಿದೆ ಎಂದು ರಾಜ್ಯದ ವಿದ್ಯುತ್‌ಮಂತ್ರಿ ಎಂ.ಎಂ.ಮಣಿಯವರು ಹೇಳಿದ್ದಾರೆ. ಇವುಗಳಲ್ಲಿ 1.32 ಲಕ್ಷ ಮನೆಗಳು ಬಡತನದ ರೇಖೆಯ ಕೆಳಗಿರುವವರಿಗೆ ಸೇರಿದವುಗಳು. ಈಗಲೂ ಅರಣ್ಯ ನಿಯಮಾವಳಿಗಳು ಮತ್ತಿತರ ತೊಡಕುಗಳಿಂದಾಗಿ ಔಪಚಾರಿಕವಾಗಿ 'ಮನೆ' ಎಂದು ಕರೆಸಿಕೊಳ್ಳದ ಸುಮಾರು 1000 ಕಟ್ಟಡಗಳಿಗೆ ವಿದ್ಯುತ್ ಪೂರೈಸುವುದು ಸಾಧ್ಯ ವಾಗಿಲ್ಲ. ಆದರೆ ಆ ಪ್ರದೇಶಗಳನ್ನೂ ಬೆಳಗಿಸಲು ಸರಕಾರ ಶ್ರಮಿಸುತ್ತಿದೆ ಎಂದು ಮಂತ್ರಿಗಳು ಹೇಳಿದರು.



ಮೇ 29 ರಂದು ಕೋಝಿಕೋಡ್ ಜಿಲ್ಲೆಯಲ್ಲಿ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಕೇರಳ ದೇಶದಲ್ಲಿ ಪ್ರತಿಮನೆಗೆ ವಿದ್ಯುತ್ ಪೂರೈಸಿರುವ ಮೊದಲ ರಾಜ್ಯ ಎಂದು ಅಧಿಕೃತವಾಗಿ ಘೋಷಿಸಿದರು. ತಾನು ವಿದ್ಯುತ್ ಇಲ್ಲದ ಹಳ್ಳಿಯೊಂದರಲ್ಲಿ ಬೆಳೆದುದನ್ನು ನೆನಪಿಸಿಕೊಂಡ ಮುಖ್ಯ ಮಂತ್ರಿಗಳು, ನಾವೀಗ ಬಹಳ ದೂರ ಸಾಗಿ ಬಂದಿದ್ದೇವೆ, ಮುಂದಿನ ಹಂತದಲ್ಲಿ ಜಲವಿದ್ಯುತ್ ಘಟಕಗಳ ಮೇಲೆ ಅವಲಂಬನೆಯನ್ನು ಕಡಿಮೆ ಮಾಡಿ ಸೌರ ವಿದ್ಯುತ್ ಮುಂತಾದ ನವೀಕರಿಸಬಹುದಾದ ಮೂಲಗಳನ್ನು ಬಳಸುವತ್ತ ಸಾಗಬೇಕಾಗಿದೆ ಎಂದರು.

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಮ್ಯಾಕ್ರನ್ ಫ್ರಾನ್ಸ್ ಅಧ್ಯಕ್ಷ

ಪಾರ್ಲಿಮೆಂಟ್ ಚುನಾವಣೆಗಳಲ್ಲಿ ಎಡ ಮುನ್ನಡೆಯ ಸಾಧ್ಯತೆ

ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಎಮ್ಯಾನುಯಲ್ ಮ್ಯಾಕ್ರನ್ ರವರ ವಿಜಯ, ಮುಂಬರುವ ಪಾರ್ಲಿಮೆಂಟ್ ಚುನಾವಣೆಗಳ ದೃಷ್ಟಿಯಿಂದ ಗಮನಾರ್ಹವಾಗಿದೆ. ಬಲ ಪಂಥೀಯ ನ್ಯಾಷನಲ್ ಫ್ರಂಟ್‌ನ ಅಭ್ಯರ್ಥಿ 'ಮರೀನ್ ಲೆ ಪೆನ್' ಹಾಗೂ ಮ್ಯಾಕ್ರನ್ ಮೊದಲ ಹಂತದ ಚುನಾವಣೆಯಲ್ಲಿ ಪಡೆದಿದ್ದ ಮತಗಳಲ್ಲಿ ಗಣನೀಯವಾದ ವ್ಯತ್ಯಾಸವೇನು ಇರಲಿಲ್ಲ. ಮರೀನ್ ಶೇ.21.5 ರಷ್ಟು ಹಾಗೂ ಮ್ಯಾಕ್ರನ್ ಶೇ. 23.8 ರಷ್ಟು ಮತಗಳನ್ನು ಪಡೆದಿದ್ದರು. ಆದರೆ, ಅಂತಿಮ ಸುತ್ತಿನಲ್ಲಿ ಮರಿನ್ ಲೆ ಪೆನ್ ರವರು ಶೇ. 34.9 ರಷ್ಟು, ಮ್ಯಾಕ್ರನ್ ಶೇ. 65.1 ರಷ್ಟು ಮತಗಳನ್ನು ಪಡೆದು ಭಾರೀ ಅಂತರದಿಂದ ಗೆಲವು ಸಾಧಿಸಿದರು. ಇದೀಗ ಅವರು ಫ್ರಾನ್ಸ್‌ನ ಅತ್ಯಂತ ಕಿರಿಯ ವಯಸ್ಸಿನ ಅಧ್ಯಕ್ಷ ರಾಗಿದ್ದಾರೆ. ಏಪ್ರಿಲ್ 23 ರಂದು ನಡೆದ ಮೊದಲನೆ ಸುತ್ತಿನಲ್ಲಿ ಎಡ ಅಭ್ಯರ್ಥಿಯಾಗಿದ್ದ ಜೀನ್-ಲುಕ್ ಮೆಲೆಂಚನ್'ರವರು ಕೂಡ ಮೂರನೆಯವರಾಗಿ ಶೇ.19.6 ರಷ್ಟು ಮತಗಳನ್ನು ಪಡೆದು ದಾಖಲೆ ಮಾಡಿದ್ದಾರೆ. ಎರಡನೆ ಸುತ್ತಿನಲ್ಲಿ ಇವರ ಮತಗಳು ಬಹುತೇಕ ಮ್ಯಾಕ್ರನ್ ಪರ ಚಲಾವಣೆಯಾಗಿದ್ದರಿಂದ, ಮ್ಯಾಕ್ರನ್ ಗೆಲುವಿಗೆ ಕಾರಣವಾಗಿದೆ. ಜೊತೆಗೆ 2002 ರಿಂದ ಅಧಿಕಾರದಲ್ಲಿದ್ದ ಪ್ರಾಂಕೋಯಿಸ್ ಹೊಲಾಂಡ್ ಅವರ ಸರಕಾರದ ವಿರುದ್ಧ ಆಡಳಿತ-ವಿರೋಧಿ ಅಲೆಯೂ ಕೂಡ ಮ್ಯಾಕ್ರನ್ ಗೆಲುವಿಗೆ ವರವಾಗಿ ಪರಿಣಮಿಸಿದೆ.

ಮುಂದಿನ ಜೂನ್ 11 ಮತ್ತು 18 ರಂದು ಎರಡು ಸುತ್ತಿನಲ್ಲಿ ಫ್ರಾನ್ಸ್‌ನ ಸಂಸತ್‌ಗೆ ನಡೆಯುವ ಅಸೆಂಬ್ಲಿ ಚುನಾವಣೆಯಲ್ಲಿ, ಐಕ್ಯ ಎಡ ಕೂಟ ಜೀನ್-ಲುಕ್-ಮೆಲೆಂಚನ್ ಅವರ ನಾಯಕತ್ವದಲ್ಲಿ ಬಹುಮತ ಸಾಧಿಸಲು ಉತ್ತಮ ಅವಕಾಶಗಳಿವೆ. ಇಂತಹ ಹೊಸ ಬದಲಾವಣೆಯನ್ನು ಫ್ರೆಂಚ್ ಜನತೆ ಬಯಸುತ್ತಿದ್ದು, ಈ ಅವಕಾಶವನ್ನು ಫ್ರೆಂಚ್ ಕಮ್ಯೂನಿಷ್ಟ್ ಪಕ್ಷ ಮತ್ತು ಐಕ್ಯ ಎಡ ಕೂಟ ಹೇಗೆ ಬಳಸಿಕೊಳ್ಳುತ್ತಾರೋ ಕಾದು ನೋಡಬೇಕು.

ನೂತನ ಅಧ್ಯಕ್ಷ ಮ್ಯಾಕ್ರನ್

ಇದೀಗ ನಿರ್ಗಮಿತ ಅಧ್ಯಕ್ಷರಾಗಿದ್ದ ಪ್ರಾಂಕೋಯಿಸ್ ಹೊಲಾಂಡ್ ಆಡಳಿತದಲ್ಲಿ ಹಣಕಾಸು ಮತ್ತು ಕೈಗಾರಿಕಾ ಸಚಿವರಾಗಿ ಮ್ಯಾಕ್ರನ್ ಕೆಲಸ ಮಾಡಿದ್ದಾರೆ, ತತ್ವಶಾಸ್ತ್ರದಲ್ಲಿ ಉನ್ನತ ವ್ಯಾಸಂಗ ಹಾಗೂ ಅರ್ಥಶಾಸ್ತ್ರದಲ್ಲಿ; ಕೈಗಾರಿಕೋದ್ಯಮದಲ್ಲಿ ಪರಿಣತಿಯನ್ನು ಹೊಂದಿದ್ದಾರೆ. 39 ವರ್ಷದ ಮ್ಯಾಕ್ರನ್ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆಲ್ಲುತ್ತಾರೆಂದು ಏಪ್ರಿಲ್ 23 ರಂದು ನಡೆದ ಮೊದಲ ಸುತ್ತಿನಲ್ಲಿ ಹಲವರು ಭಾವಿಸಿರಲಿಲ್ಲ.

ಇವರು ವೃತ್ತಿಯಲ್ಲಿ ಬ್ಯಾಂಕರ್‌ರಾಗಿದ್ದರು 2006 ರಿಂದಲೇ 'ಸೋಷಿಯಲಿಸ್ಟ್ ಪಕ್ಷ' ದ ಒಡನಾಟದಲ್ಲಿದ್ದರೂ ಸಹಾ, ಹೊಲಾಂಡ್ ಅವರ ಮಂತ್ರಿ ಮಂಡಲದ ಸಚಿವರಾಗಿದ್ದರು, ಆಡಳಿತರೂಡ ಪಕ್ಷದ ವಿರೋಧಿ ಅಲೆಯನ್ನು ಅರಿತುಕೊಂಡ ಮ್ಯಾಕ್ರನ್ 2016 ರಲ್ಲಿ ಸರ್ಕಾರದಿಂದ ಆಚೆ ಬಂದು, 'ಎನ್ ಮಾರ್ಚ್' ಎಂಬ ಪಕ್ಷವನ್ನು ಕಟ್ಟಿಕೊಂಡರು, 'ಎನ್ ಮಾರ್ಚ್ ಎಂಬುದರ ಅರ್ಥ "ನಡೆ ಮುಂದೆ" ಎಂದು, ಆದರೆ ಅವರು ಕಂಡುಕೊಂಡ ಮಾರ್ಗ ಅಲ್ಲಿನ ಜನರನ್ನೂ ಆಕರ್ಷಿಸಿದ್ದು ಸ್ವಲ್ಪ ನಿಜವಾದರೂ, ಅನುಷ್ಠಾನ ಇದೀಗ ಅಷ್ಟು ಸಲೀಸಲ್ಲ.

ಐರೋಪ್ಯ ಒಕ್ಕೂಟದಿಂದ ಬ್ರಿಟನ್ ಹೊರಬಂದ ನಂತರ(ಬ್ರೆಕ್ಸಿಟ್) ಫ್ರಾನ್ಸ್ ಕೂಡ ಹೊರಬರಬೇಕೆ? ಅಥವಾ ಬೇಡವೇ? (ಫ್ರೆಕ್ಸಿಟ್), ಎಂಬುದರ ಬಗ್ಗೆ ಪರ-ವಿರುದ್ಧವಾಗಿ ಪ್ರಾನ್ಸ್ ವಿಭಜನೆಗೊಂಡಿತು. ಉಕ್ರೇನ್ ಮತ್ತು ಸಿರಿಯಾದಲ್ಲಿನ ರಾಜಕೀಯ ಅರಾಜಕತೆಯ ಪರಿಣಾಮದಿಂದಾಗಿ ವಲಸೆ ಬಂದವರು, ಐರೋಪ್ಯ ರಾಷ್ಟ್ರಗಳಲ್ಲಿ ಆಶ್ರಯ ಪಡೆಯಲು ಮುಂದಾದಾಗ, ಫ್ರಾನ್ಸ್‌ನಲ್ಲಿ ಬಹುಸಂಖ್ಯಾತರು ಇದನ್ನು ವಿರೋಧಿಸಿದರು. ಇದೇ ಸಂದರ್ಭದಲ್ಲಿ ತಳುಕು ಹಾಕುವಂತ ಭಯೋತ್ಪಾದನೆ ಕೃತ್ಯಗಳು ಫ್ರಾನ್ಸ್‌ನಲ್ಲಿ ನಡೆದವು. ಪ್ರಮುಖವಾಗಿ 'ನೀಸ್' ಎಂಬ ನಗರದಲ್ಲಿ ರಜಾ ದಿನದಂದು ಐಎಸ್ ಉಗ್ರರೆಂದು ಶಂಕಿಸಿದವರಿಂದ, 86 ಮಂದಿ ಹತ್ಯೆಗೀಡಾಗಿದ್ದ ಸ್ಥಳಕ್ಕೆ ಬಲಪಂಥದ ಅಭ್ಯರ್ಥಿ ಲಿ ಪೆನ್ ಮೆರಿನ್ ಭೇಟಿಕೊಟ್ಟಿದ್ದು ಗಮನ ಸೆಳೆಯಿತು. ಹೀಗೆ ಫ್ರೆಕ್ಸಿಟ್, ವಲಸೆಗಾರರ ಮತ್ತು ಭಯೋತ್ಪಾದನೆ ಪ್ರಮುಖ ಪ್ರಶ್ನೆಗಳಾದವು. ಉಗ್ರ ಬಲಪಂಥೀಯ ಮತ್ತು ಅರೆ-ಫ್ಯಾಸಿಸ್ಟ್ ನ್ಯಾಷನಲ್ ಪ್ರಂಟ್ ಮತ್ತು 'ಮರೀನ್ ಲೆ ಪೆನ್' ಬಹುಸಂಖ್ಯಾತರಿಗೆ ಸ್ವಿಕಾರಾರ್ಹರಲ್ಲ. ಅವರಿಗೆ ಇದ್ದಿದ್ದು ಒಂದೇ ಆಯ್ಕೆ – ಮಾಕ್ರನ್.

ಪ್ಯಾರಿಸ್ ಅಮೀನ್ಸ್ ನಗರ ಮ್ಯಾಕ್ರನ್‌ರ ತವರೂರು, 'ನನ್ನ ಬದುಕನ್ನು ಆರಿಸಿಕೊಳ್ಳುವ ಹಕ್ಕು ನನ್ನದೆ' ಎಂಬ ಧ್ಯೇಯದೊಂದಿಗೆ ಊರು ಬಿಟ್ಟಿದ್ದ ಮ್ಯಾಕ್ರನ್, ಸಚಿವ ಸ್ಥಾನವನ್ನು ತ್ಯಜಿಸಿದ ನಂತರ ಮತ್ತೆ 'ಅಮೀನ್' ನಗರದಿಂದಲೇ ತನ್ನ 'ಎನ್ ಮಾರ್ಚ್' ಪಕ್ಷವನ್ನು ಆರಂಭಿಸಿದನು. ನಂತರ ಕಳೆದ ವರ್ಷ ಏಪ್ರಿಲ್ 26 ರಂದು 'ಇಡೀ ನಗರದಲ್ಲಿರುವ ಡ್ರೈಯರ್ ಎಂಬ ಫ್ಯಾಕ್ಟರಿಗೆ ಬೇಟಿಕೊಟ್ಟು, ಅಲ್ಲಿನ ಯೂನಿಯನ್ ಪದಾಧಿಕಾರಿಗಳ ಜೊತೆ ಮಾತುಕತೆ ನಡೆಸಿ, 200 ಕಾರ್ಮಿಕರ ಹುದ್ದೆಗಳ ನಷ್ಟದಿಂದಾಗಿ, ಈ ಪ್ಯಾಕ್ಟರಿಯನ್ನು ಉತ್ತರ ಪ್ಯಾನ್ಸಿನಿಂದ ಪೋಲ್ಯಾಂಡಿಗೆ ವರ್ಗಾಯಿಸಲು ಚರ್ಚೆ ನಡೆಸಿದ್ದು, ಪ್ರಾನ್ಸಿನ ರಾಜಕೀಯ ಬೆಳವಣಿಗೆಯಲ್ಲಿ ನಾಟಕೀಯ ತಿರುವು ಪಡೆಯಲು ನಾಂದಿಯಾಯಿತು. ತನ್ನ ಮತದಾರರ ವಿಸ್ತರಣೆಯ ಭಾಗವಾಗಿ ಮ್ಯಾಕ್ರನ್ ಬೇಟಿಯಿದಾಗಿತ್ತು.



ಆ ನಂತರ ಅವರು ಹಿಂದೆ ಸರಿಯಲೇ ಇಲ್ಲ, ಎಡ ಪಂಥವು ಇಲ್ಲದೆ-ಬಲ ಪಂಥವು ಇಲ್ಲದೆ – ಮದ್ಯಮ ಪಂಥದಂತೆ, ಮುನ್ನಡೆಯಲು ಸಿದ್ದರಾದರು. ಹೆಚ್ಚು ಆರ್ಥಿಕ ಸುದಾರಣಾ ಕ್ರಮಗಳು ಒಳಗೊಂಡಂತೆ, ಕಾನೂನು ರೀತ್ಯ ವಲಸೆ ಪ್ರಮಾಣಕ್ಕೆ ಕಡಿವಾಣ ಹಾಕುವುದು, ನಿರುದ್ಯೋಗದ ಪ್ರಮಾಣ ಕಡಿತಗೊಳಿಸುವುದು, ಭಯೋತ್ಪಾದನೆ ವಿರುದ್ಧ ಕಟ್ಟುಕ್ರಮ, ವಾರಕ್ಕೆ 36 ಗಂಟೆ ಕೆಲಸದ ಅವಧಿ ವಿಸ್ತರಣೆ – ಹೀಗೆ ಇವುಗಳೆಲ್ಲಾ ಜನರ ಗಮನ ಸೆಳೆಯುವಲ್ಲಿ ಯಶಸ್ವಿಯಾದವು. ಪ್ರಾನ್ಸ್ ಜನತೆ ಹಿಂದಿನಿದಲೂ ಯುವಕರಿಗೆ ರಾಜಕೀಯದಲ್ಲಿ ಮಣೆ ಹಾಕುತ್ತಾರೆ, ಅದರ ಭಾಗವಾಗಿ, ಎರಡನೇ ಸುತ್ತಿನಲ್ಲಿ ಸೋಷಿಯಲಿಷ್ಟ್ ಮತ್ತು ರಿಪಬ್ಲಿಕನ್ ಪಕ್ಷಗಳು ಮ್ಯಾಕ್ರನ್ ಬೆಂಬಲಕ್ಕೆ ಕೈ ಜೋಡಿಸಿದ್ದು, ಬಲ ಪಂಥೀಯ ಅಭ್ಯರ್ಥಿ ಮೆರಿನ್ ಲೆ ಪೆನ್ ವಿರುದ್ಧ ಧ್ರುವೀಕರಣಗೊಂಡ ಮತಗಳು – ಯುವ ಮ್ಯಾಕ್ರನ್ ರವರ ಗೆಲುವಿಗೆ ಮೂಲಕಾರಣವಾಯಿತು.

ಆದರೆ ಜೂನ್ 11 ಮತ್ತು 18 ರಂದು ಸಂಸತ್ತಿಗೆ ನಡೆಯಲಿ'ರುವ ಚುನಾವಣೆಗಳಲ್ಲಿ ಪರಿಸ್ಥಿತಿ ಪೂರ್ಣವಾಗಿ ಭಿನ್ನವಾಗಿರುತ್ತದೆ. ಅಧ್ಯಕ್ಷ ಮ್ಯಾಕ್ರನ್ ಅವರ 'ಎನ್ ಮಾರ್ಚ್' ಹೊಸ ಪಕ್ಷವಾಗಿದ್ದು, ಸಂಸತ್ತಿನಲ್ಲಿ ಯಾರೊಬ್ಬರು ಇಲ್ಲ. ಈಗಿನ ಸಂಸತ್‌ನಲ್ಲಿ ಸೋಷಿಯಲಿಷ್ಟ್ (279), ರಿಪಬ್ಲಿಕ್ (195), ಕಮ್ಯೂನಿಸ್ಟ್ (15) ಮೈತ್ರಿಯೊಂದಿದ್ದಾರೆ. ಇಲ್ಲಿ ಅಧ್ಯಕ್ಷೀಯ ಚುನಾವಣೆಯ ಮೊದಲ ಹಂತದಲ್ಲಿ ವ್ಯಕ್ತವಾದ ಜನಾಭಿಪ್ರಾಯ ಮುಖ್ಯವಾಗುತ್ತದೆ. ಅಧ್ಯಕ್ಷ ಮ್ಯಾಕ್ರನ್ ಅವರ 'ಎನ್ ಮಾರ್ಚ್' ಹೊಸ ಪಕ್ಷಕ್ಕೆ ಪಾರ್ಲಿಮೆಂಟಿನಲ್ಲಿ ಅಭ್ಯರ್ಥಿಗಳನ್ನು ಹುಡುಕುವುದು ಕಷ್ಟವಾಗಬಹುದು. ಚುನಾವಣಾ ಪ್ರಚಾರಕ್ಕೆ ಬೇಕಾದ ಕಾರ್ಯಕರ್ತರೂ ಪಕ್ಷದ ಸಂಘಟಕರೂ ಇಲ್ಲ. ಈ ಹಿನ್ನೆಲೆಯಲ್ಲಿ ಮತ್ತು ಈ ವರೆಗೆ ಆಡಳಿತ ನಡೆಸಿದ ನಡು-ಬಲ ನಡು-ಎಡ ಪಕ್ಷಗಳ ಬಗ್ಗೆ ತಿರಸ್ಕಾರ ಮುಂದುವರೆದರೆ, ಐಕ್ಯ ಎಡ ರಂಗ ಪಾರ್ಲಿಮೆಂಟಿನಲ್ಲಿ ನಿರ್ಣಾಯಕ ಪ್ರಾತಿನಿಧ್ಯ ಪಡೆಯುವ ಸಾಧ್ಯತೆಗಳು ತೆರೆದುಕೊಂಡಿವೆ. ಬಹುಮತ ಸಹ ಅಸಾಧ್ಯವೇನಲ್ಲ.

ಫ್ರೆಂಚ್ ಎಡಪಂಥಕ್ಕೊಂದು ಹೊಸ ಅವಕಾಶ

ಫೆಂಚ್ ಎಡಪಂಥಕ್ಕೆ ದೀರ್ಘ ಸ್ಪೂರ್ತಿದಾಯಕ ಇತಿಹಾಸವಿದೆ. 'ಪ್ಯಾರೀಸ್ ಕಮ್ಯೂನ್' ಅಥವಾ ಮೊದಲ ಫ್ರೆಂಚ್ ಕಾರ್ಮಿಕ ಕ್ರಾಂತಿ 1871 ರಲ್ಲಿ ಜರುಗಿತು. ಇದು ಕಾರ್ಮಿಕ ವರ್ಗದ ಕ್ರಾಂತಿಯ ಕಹಳೆಯಾಗಿತ್ತು. ಕೆಲವೇ ದಿನಗಳಲ್ಲಿ ಈ ಕ್ರಾಂತಿಯ ಹಿನ್ನೆಯಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿದ್ದ ಕಾರ್ಮಿಕ ವರ್ಗದ ಆಡಳಿತಕ್ಕೆ ಸೋಲುಂಟಾಯಿತು. ಏಕೆಂದರೆ, ಈ ಕಾರ್ಮಿಕ ವರ್ಗದ ಶಕ್ತಿಯನ್ನು ಕ್ರೋಡಿಕರಿಸುವ ಯಾವುದೇ 'ರಾಜಕೀಯ ಪಕ್ಷ'ವು ಇದರ ನೇತೃತ್ವ ವಹಿಸಿರಲಿಲ್ಲ. ಫ್ರೆಂಚ್ ಸೋಷಿಯಲಿಷ್ಟ್ ಪಕ್ಷವು 'ಪ್ಯಾರೀಸ್ ಕಮ್ಯೂನ್'ನ ಮೂಲವನ್ನು ಹೊಂದಿದೆ. ಈ ಪಕ್ಷವು 1914 ರಲ್ಲಿ ನಡೆದ ಮಹಾಯುದ್ಧದಲ್ಲಿ ಭಾಗವಹಿಸುವ ರಾಷ್ಟ್ರೀಯ ಪ್ರಯತ್ನವನ್ನು ಬೆಂಬಲಿಸಬೇಕೆ ಬೇಡವೇ ಎಂಬ ಪ್ರಶ್ನೆಯ ಮೇಲೆ ವಿಭಜನೆಗೊಂಡಿತು. ಎಡ ವಿಭಾಗ ಮಹಾಯುದ್ಧ ಸಾಮ್ರಾಜ್ಯಶಾಹಿ ಯುದ್ಧ, ಅದರಲ್ಲಿ ಭಾಗವಹಿಸುವುದನ್ನು ಕಟುವಾಗಿ ವಿರೋಧಿಸಿತು. ಬಲ ವಿಭಾಗ ಮಹಾಯುದ್ಧದಲ್ಲಿ ಭಾಗವಹಿಸುವುದನ್ನು ಬೆಂಬಲಿಸಿ, ರಾಷ್ಟ್ರೀಯವಾದದ ಕಡೆಗೆ ವಾಲಿತು. ಎಡ ವಿಭಾಗದ ಪ್ರಮುಖ ನಾಯಕನಾಗಿದ್ದ ಜೀನ್ ಜ್ಯೂರ್ಸ್ ಅವರನ್ನು ಮೊದಲ ವಿಶ್ವ-ಯುದ್ಧದ ಆರಂಭಕ್ಕೆ ಮುನ್ನಾ ರಾಷ್ಟ್ರೀಯವಾದಿ ಮತಾಂದರಿಂದ ಹತ್ಯೆ ಮಾಡಲಾಗಿತ್ತು. ಆ ನಂತರದಲ್ಲಿ ಫ್ರಾನ್ಸ್‌ನಲ್ಲಿ ಎರಡು ಶಕ್ತಿದಾಯಕ ಎಡ ಪಕ್ಷಗಳು ಹುಟ್ಟಿಕೊಂಡವು, ಒಂದು ಫ್ರೆಂಚ್ ಸೋಷಿಯಲಿಷ್ಟ್ ಪಾರ್ಟಿ ಮತ್ತೊಂದು ಫ್ರೆಂಚ್ ಕಮ್ಯೂನಿಷ್ಟ್ ಪಾರ್ಟಿ. 20ನೇ ಶತಮಾನದಲ್ಲಿ ಎರಡೂ ಪಕ್ಷಗಳು ಫ್ರೆಂಚ್ ರಾಜಕೀಯದದಲ್ಲಿ ಪ್ರಮುಖ ಪಾತ್ರ ವಹಿಸಿದ್ದವು.

ಸೋಷಿಯಲಿಷ್ಟ್ ಪಾರ್ಟಿ 1981 ರಲ್ಲಿ ಮೊದಲು ಅಧಿಕಾರವನ್ನು ಪಡೆದಿತ್ತು. ಅದರ ಅಭ್ಯರ್ಥಿ ಪ್ರಾಂಕೋಯಿಸ್ ಮಿಟರ್ರಾಂಡ್ ಅಧ್ಯಕ್ಷ ರಾಗಿ ಆಯ್ಕೆಯಾಗಿದ್ದರು. ಇವರ ನಾಯಕತ್ವದಲ್ಲಿ ನ್ಯಾಷನಲ್ ಅಸೆಂಬ್ಲಿ ಯಲ್ಲಿ ಸೋಷಿಯಲಿಷ್ಟ್ ಪಾರ್ಟಿ ಆಡಳಿತದಲ್ಲಿ ಬಹುಮತ ಸಾಧಿಸಿತ್ತು. ಕೆಳಮನೆ ಸಂಸತ್ತಿನಲ್ಲಿ 1981-86 ರವರೆಗೆ, ಮತ್ತೊಮ್ಮೆ 1988 ರಿಂದ 1993 ರ ವರೆಗೆ ಅಧಿಕಾರದಲ್ಲಿತ್ತು. ಆ ನಂತರದಲ್ಲಿ ಪಕ್ಷದ ನಾಯಕನಾಗಿದ್ದ ಲಿಯೊನೆಲ್ ಜೋಸ್ಪಿನ್ ಬಲ-ಪಂಥದ ಅಧ್ಯಕ್ಷರಾಗಿದ್ದ ಜಾಕ್ವೆಸ್ ಚಿರಾಕ್ (1997-2002) ಅಡಿಯಲ್ಲಿ ಪ್ರಧಾನಿಯಾಗಿದ್ದರು. ಇದೊಂದು 'ಎಡ' ಮತ್ತು ಬಲಪಂಥಗಳ "ಸಹ ಜೀವನ" **(Cohabithtion)** ಒಪ್ಪಂದದ ವ್ಯವಸ್ಥೆ ಎಂದು ಕರೆಯಲಾಗಿತ್ತು. 2002 ರಿಂದ ಬಲ-ಪಂಥೀಯದ ಸರಕಾರಗಳು ಜಯಬೇರಿ ಹೊಡೆದು ಅಧ್ಯಕ್ಷೀಯ ಅಧಿಕಾರವನ್ನು ನಡೆಸಿದವು. ಈ ಅವಧಿಯ ನವ-ಉದಾರವಾದಿ ವ್ಯವಸ್ಥೆಯನ್ನು ಸೋಶಲಿಸ್ಟ್ ಪಕ್ಷ ವಿರೋಧಿಸಲಿಲ್ಲ

ಫ್ರೆಂಚ್ ಕಮ್ಯೂನಿಸ್ಟ್ ಪಾರ್ಟಿ 1920 ರಲ್ಲಿ ಕಮ್ಯುನಿಸ್ಟ್ ಅಂತರಾಷ್ಟ್ರೀಯದ ಭಾಗವಾಗಿ ರಚನೆಗೊಂಡಿತು. ಇದು ಸಕ್ರಿಯವಾಗಿ ಮುಷ್ಕರಗಳು, ವಸಾಹತು-ವಿರೋಧಿ ಹಾಗೂ ರಾಜಕೀಯ ಹೋರಾಟಗಳು ತೊಡಗಿಸಿಕೊಂಡಿತು. ಇದು 1936 ರಲ್ಲಿ ಲಿಯಾನ್ ಬ್ಲೂಮ್ ನೇತೃತ್ವದಲ್ಲಿ ಸ್ಥಾಪಿಸಿದ್ದ, ಪ್ಯಾಸಿಸ್ಟ್-ವಿರೋಧಿ ಪಾಪ್ಯೂಲರ್ ಫ್ರಂಟ್‌ಗೆ ಬೆಂಬಲ ಸೂಚಿಸಿತು. ಹಾಗೆಯೇ, 'ಪ್ರಾಂಕೋ' ವಿರುದ್ಧದ ಹೋರಾಟದಲ್ಲಿ ಸ್ಪಾನಿಷ್ ರಿಪಬ್ಲಿಕನ್ನು ಬೆಂಬಲಿಸಿತು. 1940 ರಲ್ಲಿ ಎರಡನೇ ಮಹಾಯುದ್ಧದ ನಾಝಿ ಆಕ್ರಮಣದ ಸಂದರ್ಭದಲ್ಲಿ ಫ್ರಾನ್ಸ್ ಸೋತು ನಾಝಿ ಆಡಳಿತಕೆ ಒಳಪಟ್ಟಿತ್ತು. ಫ್ರೆಂಚ್ ನಾಜೀ ಸರಕಾರಕ್ಕೆ ಪ್ರಬಲ ಗೆರಿಲ್ಲಾ ಪ್ರತಿರೋಧದಲ್ಲಿ ಕಮ್ಯುನಿಸ್ಟ್ ಪಕ್ಷ ಪ್ರಮುಖ ಪಾತ್ರ ವಹಿಸಿತು. ಎರಡನೇ ಮಹಾಯುದ್ಧದ ಕೊನೆಯಲ್ಲಿ ಅದು ಪ್ರಾನ್ಸ್‌ನಲ್ಲಿ ಒಂದು ಪ್ರಬಲ ರಾಜಕೀಯ ಶಕ್ತಿಯಾಗಿ ಮಾರ್ಪಟ್ಟಿತು. 1945ರಲ್ಲಿ ಮಹಾಯುದ್ಧದ ನಂತರ ನಡೆದ ಮೊದಲ ಚುನಾವಣೆಯಲ್ಲಿ ಶೇ. 26 ಮತ ಗಳಿಸಿ, ಅತ್ಯಂತ ದೊಡ್ಡ ಪಕ್ಷವಾಗಿ ಹೊಮಿತ್ತು.

ಈ ಪ್ರಗತಿಯನ್ನು ನಂತರ ಶೀತಲ ಸಮರದ 'ಕೆಂಪು ಬೆದರಿಕೆ (Red Scare) ರಾಜಕೀಯ ವಾತಾವರಣ ಸೃಷ್ಟಿಸಿ ತಡೆಹಿಡಿಯಲಾಯಿತು. 1947 ರ ನಂತರ ಸರ್ಕಾರದಿಂದ ಕಮ್ಯುನಿಸ್ಟ್ ಪಕ್ಷವನ್ನು ಹೊರಗಿಡುವುದೇ ಸೋಶಲಿಸ್ಟ್ ಪಕ್ಷ ಸೇರಿದಂತೆ, ಹಲವು ರಾಜಕೀಯ ಪಕ್ಷಗಳ ಕೂಟಗಳ ಆದ್ಯತೆಯಾಯಿತು. ಕಮ್ಯುನಿಸ್ಟ್ ಪಕ್ಷ ತನ್ನ ರಾಜಿಯಿಲ್ಲದ ಬಂಡವಾಳಶಾಹಿ-ವಿರೋಧಿ (1990ರ ದಶಕದಿಂದ ನವುದಾರವಾದಿ-ವಿರೋಧಿ) ರಾಜಕೀಯ ಅನನ್ಯತೆ ಉಳಿಸಿಕೊಳ್ಳುತ್ತಲೇ ಇತರ ಎಡಶಕ್ತಿಗಳೊಂದಿಗೆ ಸಹಕರಿಸುತ್ತ ತನ್ನ ನೆಲೆಯನ್ನು ಉಳಿಸಿಕೊಳ್ಳಲು ಪ್ರತ್ನ ನಡೆಸಿದೆ. ಆದರೆ 1990ರ ದಶಕದ ನಂತರದ ನವ-ಉದಾರವಾದಿ ಹಿನ್ನೆಲೆಯಲ್ಲಿ ಮೇಲೆ ಹೇಳಿದ ಸೋಶಲಿಸ್ಟ್ ಮತ್ತು ನಡು-ಬಲಪಂಥೀಯ ಪಕ್ಷಗಳ (ಮೇಲೆ ಹೇಳಿದ) "ಸಹಜೀವನ"ದ ರಾಜಕೀಯದ ಸಂದರ್ಭದಲ್ಲಿ ನೆಲೆಯನ್ನು ಉಳಿಸಿ ವಿಸ್ತರಿಸಲು ಹರಸಾಹಸ ಮಾಡುತ್ತಿದೆ. ಕಳೆದ ಒಂದು ದಶಕದಿಂದ ಉಗ್ರ ಬಲಪಂಥೀಯ ಅರೆ-ಫ್ಯಾಸಿಸ್ಟ್ ಪಕ್ಷಗಳು ಜನಬೆಂಬಲ ಪಡೆಯುತ್ತಿವೆ. ಈ ಬಾರಿಯ ಅಧ್ಯಕ್ಷೀಯ ಚುನಾವಣೆಯಲ್ಲಿ ಈವರೆಗೆ ನವ-ಉದಾರವಾದಿ ವೇದಿಕೆಯಲ್ಲಿ ಆಡಳಿತ ನಡೆಸಿದ ಪಕ್ಷಗಳು ನಡು-ಬಲ ಮತ್ತು ನಡು-ಎಡ (ಉದಾ: ಸೋಶಲಿಸ್ಟ್) ಪಕ್ಷಗಳು ನೆಲೆ ಕಳೆದುಕೊಂಡಿರುವುದು ಸ್ಪಷ್ಟವಾಗಿ ಕಂಡು ಬಂದಿದೆ.

ಈ ಐತಿಹಾಸಿಕ ಸನ್ನಿವೇಶದ ಹಿನ್ನೆಲೆಯಲ್ಲಿ ಮತ್ತು ಎಡ ಅಭ್ಯರ್ಥಿ ಮೆಲೆನ್ಚನಾ ರವರನ್ನು ನೋಡಬೇಕು, ಇವರು ಇದೀಗ ಫ್ರೆಂಚ್ ಎಡಪಂಥೀಯರ ಪ್ರಮುಖ ಆಕರ್ಷಕ ವ್ಯಕ್ತಿಯಾಗಿದ್ದಾರೆ. ಅವರ ಮತ್ತು ಫ್ರೆಂಚ್ ಕಮ್ಯುನಿಸ್ಟ ಪಕ್ಷದ ನಾಯಕತ್ವದಲ್ಲಿ ಪಾರ್ಲಿಮೆಂಟರಿ ಚುನಾವಣೆಯಲ್ಲಿ ಸ್ಪಷ್ಟ ಪರ್ಯಾಯಗಳನ್ನು ಪರಿಣಾಮಕಾರಿಯಾಗಿ ಜನತೆಯ ಮುಂದಿಡುವ ಪ್ರಯತ್ನ ಮಾಡುತ್ತಿದೆ. ಈ ಹೊಸ ಸನ್ನಿವೇಶದಲ್ಲಿ ಫ್ರೆಂಚ್ ಎಡಪಂಥ ರಾಜಕೀಯವಾಗಿ ನಿರ್ಣಾಯಕ ಅಥವಾ ಬಹುಮತ ಗಳಿಸಲು, ಸಮಯವಿದಾಗಿದೆ. ಈ ಬದಲಾವಣೆಯನ್ನೂ ನಿರೀಕ್ಷಿಸೋಣ.

JANASHAKTHI KANNADA VARA PATRIKE JUN 5-11, 2017 Price : Rs. 10/- Date of Publication : 02 JUN 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಶ್ರೀಯಾನ್ ಆತ್ಮಕಥೆ ದ.ಕ.ಜಿಲ್ಲೆಯ ಕಮ್ಯೂನಿಸ್ಟ್ ಚಳುವಳಿಯ ಆಕರ ಗ್ರಂಥ : ಭಾಸ್ಕರ ಮಯ್ಯ

ವಾಸುದೇವ ಉಚ್ಚಿಲ



ಕನ್ನಡದಲ್ಲಿ ಒಂದೆಡೆ ಸಾಹಿತಿಗಳು ಕೆಲವರು, ಇನ್ನೊಂದೆಡೆ ಇತಿಹಾಸ ನಿರ್ಮಿಸಿದ ರಾಜಕೀಯ ಧುರೀಣರು ಕೆಲವರು ತಮ್ಮ ಆತ್ಮಕತೆಗಳನ್ನು ಬರೆದಿದ್ದಾರೆ. ಅದರಲ್ಲೂ ಕಮ್ಯೂನಿಸ್ಟ್ ಧುರೀಣರು – ಬಹುಶ: ಬಿ.ವಿ.ಕಕ್ಕಿಲ್ಲಾಯರನ್ನು ಹೊರತುಪಡಿಸಿದರೆ ಆತ್ಮಕತೆಗಳನ್ನು ಬರೆದವರು ಕಡಿಮೆ. ಹಾಗಾಗಿ ಕೆ.ಆರ್.ಶ್ರೀಯಾನ್ ಅವರ ಆತ್ಮಕತೆ ರಾಜಕೀಯ ಧುರೀಣರ ಜೀವನ ಚರಿತ್ರೆಯಲ್ಲಿ ಒಂದು ಮೈಲುಗಲ್ಲು. ಅವಿಭಜಿತ ದ.ಕ. ಜಿಲ್ಲೆಯ ಕಮ್ಯೂನಿಸ್ಟ್ ಚಳುವಳಿಯ ಇತಿಹಾಸದ ದಾಖಲಾತಿ. ಸುಮಾರು 70–80 ವರ್ಷಗಳ ಇತಿಹಾಸದ ಮಾರ್ಮಿಕ ಚಿತ್ರಣ ಅದರಲ್ಲಿದೆ. ಇದೊಂದು ಸಮಾಜಶಾಸ್ತ್ರೀಯವಾದ ಕೃತಿ. ಕೆ.ಆರ್.ಶ್ರೀಯಾನರ ಆತ್ಮಕಥೆ ಅರ್ಥಶಾಸ್ತ್ರಜ್ಞರಿಗೂ ಪತ್ರಿಕೋದ್ಯಮಿಗಳಿಗೂ ಬೇಕಾದ ಅಕರ ಗ್ರಂಥವಾಗಿದೆ. ಎಂಬುದಾಗಿ ವಿದ್ವಾಂಸ ಹಾಗೂ ನಿವೃತ್ತ ಪ್ರಾಧ್ಯಾಪಕ ಡಾ|ಜಿ.ಭಾಸ್ಕರ ಮಯ್ಯ ಹೇಳಿದರು.

ಅವರು ಮಂಗಳೂರು ಪುರಭವನದಲ್ಲಿ ರಾಜ್ಯದ ಹಿರಿಯ ಸಿಪಿಐ(ಎಂ) ಮುಖಂಡ ಕೆ.ಆರ್.ಶ್ರೀಯಾನ್ ಅವರ ಆತ್ಮಕಥೆ 'ನನ್ನ ಜೀವನ ಕಥನದ ನೆನಪಿನಂಗಳದಿಂದ' ಕೃತಿಯ ಲೋಕಾರ್ಪಣೆ ಸಂದರ್ಭದಲ್ಲಿ ಕೃತಿ ಪರಿಚಯ ಮಾಡಿ ಮಾತನಾಡುತ್ತಿದ್ದರು.

ಹನ್ನೊಂದು ಅಧ್ಯಾಯಗಳ ಈ ಕೃತಿ ಹಲವು ವೈಶಿಷ್ಟ್ಯಗಳಿಂದ ಕೂಡಿದೆ. ಆರಂಭದ 'ಬಾಲ್ಯ ಶಿಕ್ಷಣ' ಎಂಬ ಅಧ್ಯಾಯವೇ ಒಂದು ಸೃಜನಶೀಲ ಬರವಣಿಗೆಯಾಗಿದೆ. ಮುಂದೆ ದ.ಕ.ಜಿಲ್ಲೆಯ ದುಡಿಯುವ ಜನರ ವಿವಿಧ ಹೋರಾಟಗಳ ಬಗ್ಗೆ ಆಕರ್ಷಕವಾದ ಅಧ್ಯಾಯವಿದೆ. ಆದರೆ ರಾಜ್ಯದ ಕಮ್ಯೂನಿಸ್ಟ್ ಮುಖಂಡರನ್ನು ಪರಿಚಯಿಸುವ 'ಮರೆಯಲಾಗದ ಸಂಗಾತಿಗಳು' ಎಂಬ ಅ ಧ್ಯಾಯಕ್ಕೆ ಒಂದು ವಿಶ್ವಕೋಶದ ಗುಣವಿದೆ ಎಂದು ಶ್ಲಾಘಿಸಿದರು. ಸಾಮಾನ್ಯವಾಗಿ ಗಂಭೀರ ನಡೆಯ ರಾಜಕೀಯ ಧುರೀಣರ ಜೀವನದಲ್ಲೂ ಅವರು ಮಾನವೀಯ ಪ್ರವೃತ್ತಿ, ಹಾಸ್ಯ ಪ್ರಜ್ಞೆ, ಸಾಮಾನ್ಯತೆ ಇವನ್ನೂ ಗುರುತಿಸಿ ಕಾಣಿಸಿರುವುದರಿಂದ ಇದೊಂದು ಅಮೂಲ್ಯವಾದ ಬರವಣಿಗೆಯಾಗಿದೆ ಎಂದು ಹಲವು ಉದಾಹರಣೆಗಳನ್ನು ನೀಡಿದರು.

ನಿಷ್ಟುರವಾದಿಯಾದರೂ ಮೃದುಭಾಷಿ : ಮೊಯಿಲಿ

ಪುಸ್ತಕಗಳನ್ನು ಲೋಕಾರ್ಪಣೆ ಮಾಡಿದ ಸಾಹಿತಿ ಹಾಗೂ ರಾಜ್ಯದ ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯಿಲಿ ಮಾತನಾಡಿ, ದೇಶದಲ್ಲಿ ಪ್ರಸ್ತುತ ತಲೆಎತ್ತಿರುವ ಕೋಮುವಾದವನ್ನು ಎದುರಿಸಲು ಜಾತ್ಯಾತೀತ ನಿಲುವು ಹೊಂದಿರುವ ಸಮಾನ ಮನಸ್ಕರು ಒಟ್ಟು ಸೇರಬೇಕು. ಕೋಮುವಾದದ ವಿರುದ್ಧ ಹೋರಾಡಲು ಕಾಂಗ್ರೆಸ್ ಮತ್ತು ಕಮ್ಯೂನಿಸ್ಟ್ ಪಕ್ಷಗಳು ಕೈಜೋಡಿಸಲು ಕರೆ ನೀಡಿದರು.

ಕೆ.ಆರ್.ಶ್ರೀಯಾನ್ ದಲಿತ, ಶೋಷಿತ ಜನಾಂಗದ ಧ್ವನಿಯಾಗಿ ಅವಿಭಜಿತ ದ.ಕ.ಜಿಲ್ಲೆಯಲ್ಲಿ ಹೊರಹೊಮ್ಮಿದ್ದಾರೆ. ನಿಷ್ಟುರವಾದಿಯಾದರೂ ಮೃದು ಭಾಷೆಯಿಂದ ಅವರು ಮಾತನಾಡಬಲ್ಲರು. ಬಹುಮುಖ ಪ್ರತಿಭೆಯಾದ ಅವರ ಆತ್ಮಕಥನ ಬಹಳ ರೋಮಾಂಚಕಾರಿಯಾಗಿದೆ. ಹೋರಾಟದ ಬದುಕೇ ಅವರ ಶಕ್ತಿ ಎಂದು ಎಂ.ವೀರಪ್ಪ ಮೊಯಿಲಿ ಹೇಳಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಜಿ.ವಿ.ಶ್ರೀರಾಮರೆಡ್ಡಿ ಮಾತನಾಡಿ, ಶ್ರೀಯಾನ್ ಅವರು ದುಡಿಯುವ ವರ್ಗದ ಹೋರಾಟಗಳ ಜತೆಗೆ ಕಮ್ಯುನಿಸ್ಟ್ ಚಳುವಳಿಯೊಳಗೂ ಹೊರಗೂ ಸೈದ್ಧಾಂತಿಕ ಹೋರಾಟದಲ್ಲಿ ಭಾಗಿಯಾಗಿದ್ದನ್ನು ಸ್ಮರಿಸಿದರು. ಇಂದು ದೇಶವು ಆತಂಕದ ದಿನಗಳನ್ನು ಕಾಣುತ್ತಿದೆ. ಬದುಕುವ ಹಕ್ಕು, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲಾಗುತ್ತಿದೆ. ದೇಶದ ಸ್ವಾತಂತ್ರ್ಯ ಹೋರಾಟದ ವೇಳೆ ಬ್ರಿಟಿಷರ ಪರ ನಿಂತು ಹೋರಾಟಕ್ಕೆ ದ್ರೋಹ ಬಗೆದ ಸಂಘಟನೆಗಳ ವಾರಸುದಾರರು ಇವತ್ತು ಜನರಿಗೆ ದೇಶ ಪ್ರೇಮದ ಪಾಠ ಹೇಳುತ್ತಿದ್ದಾರೆ. ಪ್ರಜಾಪ್ರಭುತ್ವ, ಜಾತ್ಯಾತೀತತೆ ಎತ್ತಿ ಹಿಡಿಯುವ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿರುವ ಶಕ್ತಿಗಳು ದೇಶದ ಆಡಳಿತದ ಮುಂಚೂಣಿಯಲ್ಲಿರುವ ಸಂದರ್ಭದಲ್ಲಿ, ಸಂವಿಧಾನವನ್ನು ರಕ್ಷಿಸುವ ಪ್ರಜಾಪ್ರಭುತ್ವಾತ್ಮಕ ಹೋರಾಟವನ್ನು ಬಲಗೊಳಿಸಬೇಕಾದ ಸೈದ್ಧಾಂತಿಕ ಹೋರಾಟದ ಅಗತ್ಯವನ್ನು ಶ್ರೀರಾಮರೆಡ್ಡಿ ವಿವರಿಸಿದರು.

ಅಬ್ಬರವಿಲ್ಲದ ಸರಳ ಅಭಿನಂದನ ಸಮಾರಂಭ:

ಕೆ.ಆರ್.ಶ್ರೀಯಾನರು ಮೇ 25 ರಂದು 83ನೇ ವರ್ಷವನ್ನು ಮುಗಿಸಿ 84ಕ್ಕೆ ಕಾಲಿರಿಸಿದ್ದಾರೆ. ಅವರ ಆತ್ಮಕಥನದ ಲೋಕಾರ್ಪಣೆ ಅವರ ಅಭಿಮಾನಿಗಳಿಗೆ ಸಂಭ್ರಮದ ಸಂಗತಿ. ಅದಕ್ಕಾಗಿ ಕಾರ್ಯಕ್ರಮ 'ಅಭಿನಂದನ'ವಾಗಿ ಪರಿವರ್ತನೆಯಾಯಿತು. ಆದರೆ ಎಲ್ಲಾ ಸನ್ಮಾನಗಳಂತೆ ಈ ಸನ್ಮಾನ ಇರಲಿಲ್ಲ. ಎಲ್ಲ ಅತಿಥಿಗಳಿಗೆ ಹೂಗುಚ್ಛ ಕೊಟ್ಟಂತೆ ಶ್ರೀಯಾನರಿಗೂ ಹೂಗುಚ್ಛ ನೀಡಲಾಯಿತು. ಏನಿದ್ದರೂ ವೇದಿಕೆಯಲ್ಲಿದ್ದ ಗಣ್ಯರ ಮಾತುಗಳ ಮೂಲಕವೇ ಅಭಿನಂದನೆ ನಡೆಯಿತು. 3 ಗಂಟೆ ಮೀರಿ ನಡೆದ ಕಾರ್ಯಕ್ರಮದುದ್ದಕ್ಕೂ ಪುರಭವನ ತುಂಬಿಕೊಂಡೇ ಇದ್ದಿತು. ಬೇರೆ ಬೇರೆ ಸಮುದಾಯದ ಅನೇಕ ಗಣ್ಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರಿಂದ ವೈಶಿಷ್ಟ್ಯಪೂರ್ಣ ಕಾರ್ಯಕ್ರಮವಾಗಿ ಮೂಡಿಬಂತು.

ಕೆ.ಆರ್.ಶ್ರೀಯಾನರ ಆಪ್ತರಾದ ಮಾಜಿ ಸಚಿವ ಎಂ.ಅಮರನಾಥ ಶೆಟ್ಟಿ, ಸಿಪಿಐ ಪಕ್ಷದ ವಿ.ಕುಕ್ಯಾನ್, ಉದ್ಯಮಿಗಳೂ ಶ್ರೀಯಾನರ ಬಂಧುಗಳೂ ಆದ ಶ್ರೀನಿವಾಸ ಶೇರಿಗಾರ, ಹರೀಶ ಶೇರಿಗಾರ, ಶ್ರೀಯಾನರ ನಾಟಕಗಳಲ್ಲಿ ಹಿಂದೆ ನಟಿಸಿ ಇಂದು ಪ್ರಸಿದ್ಧ ಸಿನಿಮಾ ನಟಿಯೂ ಆಗಿರುವ ಸರೋಜಿನಿ ಎಸ್.ಶೆಟ್ಟಿ, ಕ್ರಿಯಾ ಪ್ರಕಾಶನದ ಎನ್. ಕೆ.ವಸಂತರಾಜ್ ಕೆ.ಆರ್.ಶ್ರೀಯಾನರನ್ನು ಅಭಿನಂದಿಸಿ ಮಾತನಾಡಿದರು. ಬಳಿಕ ಕೆ.ಆರ್.ಶ್ರೀಯಾನ್ ಅಭಿನಂದನೆಗೆ ಉತ್ತರಿಸಿ ಕೃತಜ್ಞತೆ ಸಲ್ಲಿಸಿದರು. ತನ್ನ ಉಳಿದ ಆಯುಷ್ಯವೂ ಪಕ್ಷದ ಚಳುವಳಿಗೆ ಮೀಸಲಾಗಿದೆ ಎಂದರು.

ಕಾರ್ಯಕ್ರಮಕ್ಕೆ ಮೊದಲು ಜಿಲ್ಲೆಯ ಖ್ಯಾತ ಜನಪದ ಹಾಡುಗಾರ ಮೈಮ್ ರಾಮ್‌ದಾಸ್ ಅವರ ಹಾಡುಗಳು ಜನರನ್ನು ಮುದಗೊಳಿಸಿದವು.



ಕೆ.ಆರ್.ಶ್ರೀಯಾನ್ ರವರು ಮಾತನಾಡುತ್ತಿರುವುದು

ಪುಸ್ತಕ ಮಾರಾಟದಲ್ಲಿ ದಾಖಲೆ:

ಕೆ.ಆರ್.ಶ್ರೀಯಾನ್ ಆತ್ಮಕಥನ ಪುಸ್ತಕಕ್ಕೆ ಪ್ರಕಟಪೂರ್ವ ರಿಯಾಯತಿ ಬೆಲೆ ನಿಗದಿಗೊಳಿಸಿ ಜಿಲ್ಲಾದ್ಯಂತ ಪ್ರಚಾರ ಕಾರ್ಯವನ್ನು ಅಭಿನಂದನ ಸಮಿತಿ ನಡೆಸಿದುದರಿಂದ ಪುಸ್ತಕದ ಒಂದು ಸಾವಿರ ಪ್ರತಿಗಳು ಪುಸ್ತಕ ಲೋಕಾರ್ಪಣೆಗೆ ಮುಂಚಿತವಾಗಿಯೇ ಕಾದಿರಿಸಲ್ಪಟ್ಟಿದ್ದವು. ಬಹುಶ: ಕನ್ನಡ ಪುಸ್ತಕ ಮಾರಾಟ ಪ್ರಪಂಚದಲ್ಲಿ ಕರ್ನಾಟಕದಲ್ಲಿ ಇದೊಂದು ದಾಖಲೆಯಾಗಿದೆ.



ಸಿಪಿಐ(ಎಂ) ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿ

JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**